Ferro-Silicon :

Rs. 25 per Metric tonne

Chemical Products :

No commission is paid.

(c) Information is not readily available.

BUDGET ESTIMATES FOR 1964-65

Demands for Grants

DEMAND NO. 21.—RURAL DEVELOPMENT.

Sri RAMAKRISHNA HEGDE.—(Minister for Development, Panchayati Raj and Co-operation): Sir, on the recommendation of the Governor of Mysore, I beg to move:

"That a sum not exceeding Rs. 7,93,000 be granted to the Government to defray the charges which will come in course of payment during the financial year for the period ending 31st day of March 1965, in respect of 'Rural Development.'"

DEMAND NO. 23.—CO-OPERATION.

"That a sum not exceeding Rs. 90,70,500 be granted to the Government to defray the charges which will come in course of payment during the financial year for the period ending 31st day of March 1965, in respect of 'Co-operation'."

DEMAND NO. 25—COMMUNITY DEVELOPMENT etc.,

"That a sum not exceeding Rs. 3,41,93,000 be granted to the Government to defray the charges which will come in course of payment during the financial year for the period ending 31st day of March 1965, in respect of 'Community Development Project, National Extension Service and Local Development Works.'"

DEMAND NO. 39—MISCELLANEOUS.

"That a sum not exceeding Rs. 3,57,01,700 be granted to the Government to defray the charges which will come in course of payment during the financial year for the period ending 31st day of March 1965, in respect of 'Miscellaneous'."

Mr. SPEAKER.—Motion moved:

"That a sum not exceeding Rs. 7,93,,000 be granted to the Government to defray the charges which will come in course of payment during the financial year for the period ending 31st day of March 1965, in respect of 'Rural Development'."

(SRI RAMAKRISHNA HEGDE)

"That a sum not exceeding Rs. 90,70,500 be granted to the Government to defray the charges which will come in course of payment during the financial year for the period ending 31st day of March 1965, in respect of 'Co-operation.'"

"That a sum not exceeding Rs. 3,44,98,000 be granted to the Government to defray the charges which will come in course of payment during the financial year for the period ending 31st day of March 1965 in respect of 'Community Development, National Extension Service and Local Development Works'."

"That a sum not exceeding Rs. 3,57,04,700 be granted to the Government to defray the charges which will come in course of payment during the financial year for the period ending 31st day of March 1965 in respect of 'Miscellaneous'."

All the Demands and All the Cutmotions are before the House for discussion.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಮಾನ್ಯ ಅಧ್ಯಕ್ಷರೇ, ಈ ಗ್ರಾಮಾಭಿವೃದ್ಧಿ, ಸಹಕಾರ ಸಂಘ, ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಈ ಡಿಮ್ಯಾಂಡುಗಳ ಮೇಲೆ ಸರಕಾರದವರು ಮಂಡಿಸಿ ರತಕ್ಕಂಥ ಬೇಡಿಕೆಗಳನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಸ್ವಾಮಿ, ಮೊಟ್ಟಮೊದಲನೆಯ ದಾಗಿ ಹೇಳುವುದೇನೆಂದರೆ ಸಹಕಾರ ಕ್ಷೇತ್ರದಲ್ಲಿ ಪ್ರಗತಿಯನ್ನು ಪಡೆಯುತ್ತೇವೆ ಸಹಕಾರದಿಂದಲೇ ನಮ್ಮ ಪ್ರಜಾಪ್ರಭುತ್ವದ ತಳಪಾಯ ನಿಂತಿದೆ ಎಂದು ಸರಕಾರದವರು ಅನೇಕ ಸಲ ಘೋಷಣೆ ಮಾಡಿದ್ದಾರೆ. ಆ ಮೇಲೆ ಈ ದೇಶದಲ್ಲಿ ಪಂಚಾಯತಿ ರಾಜ್ಯ ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಕೂಗು ಹಾಕಿದ್ದಾರೆ. ಆದರೆ ಮುಖ್ಯ ಮಂತ್ರಿಗಳ ಗಮನಕ್ಕೆ ಮೊಟ್ಟಮೊದಲ ನೆಯದಾಗಿ ಒಂದು ವಿಚಾರ ತರಬೇಕಾಗಿದೆ. ಅವನ್ನು ಹೇಳಬಯಸುತ್ತೇನೆ. ಸ್ವಾಮಿ ಪ್ರಜಾ ಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕು. ಗ್ರಾಮಾಂತರ ಪ್ರದೇಶಗಳು ನೇರವಾಗಿ ಪ್ರಯೋಜನ ಪಡೆಯಬೇಕು, ಸರ್ವತೋಮುಖವಾಗಿ ಅಭಿವೃದ್ಧಿಯಾಗಬೇಕು ಎನ್ನತಕ್ಕಂಥ ಸರಕಾರ ಉದ್ದೇಶ ಇಟ್ಟುಕೊಂಡು ಈ ತಾಲ್ಲೂಕ ಬೋರ್ಡ್ ರಚನೆ ಮಾಡಿದ್ದಾರೆ. ತಾಲ್ಲೂಕ ಬೋರ್ಡ್ ರಚನೆ ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂಥ ವಿನಾಶಕಾಲ ಬುದ್ಧಿ ಎಲ್ಲಿಂದ ಬಂತೋ ಗೊತ್ತಿಲ್ಲ. ತಾಲ್ಲೂಕ ಬೋರ್ಡ್ ಚುನಾವಣೆ ನಡೆಯಬೇಕಾಗಿದೆ. ಗ್ರಾಮ ಪಂಚಾಯತಿ ಚುನಾವಣೆ ಈ ವರ್ಷ ನಡೆಯಬೇಕಾಗಿತ್ತು. ಚುನಾವಣೆ ನಡೆಸದೆ ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧ ವಾಗಿ ತಾವು ಚುನಾವಣೆಗಳನ್ನು ಮುಂದೂಡತಕ್ಕ ಸರಕಾರದ ನೀತಿ ಸರಿಯೇ? ಪ್ರಜಾಪ್ರಭುತ್ವ ಸರಿಯಾಗಿ ಯಶಸ್ವಿಯಾಗತಕ್ಕಂಥ ನೀತಿ ಇದು ಆಗಿದೆಯೇ? ಏನಾದರೂ ಪ್ರಬಲವಾದ ರಾಜಕೀಯ ಕಾರಣಕ್ಕೋಸ್ಕರ ಚುನಾವಣೆ ಮುಂದೂಡಿದ್ದೀರಾ? ಇದರ ಬಗ್ಗೆ ಶ್ರೀ ಕಂಠಿಯವರಾಗಲಿ, ಶ್ರೀ ಜತ್ತಿಯವರಾಗಲಿ, ಶ್ರೀ ರಾಮಕೃಷ್ಣ ಹೆಗ್ಗಡೆಯವರಾಗಲಿ, ಈ ವಿಚಾರ ಹೇಳಬೇಕಾಗಿದೆ. ಮೈಸೂರು ಸರಕಾರ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಡೆಯಬೇಕಾದರೆ ಈ ಚುನಾವಣೆ ಗಳನ್ನು ಸರಿಯಾದ ರೀತಿನೀತಿಯಿಂದ ನಡೆಸಬೇಕಾಗಿತ್ತು. ಅಧಿಕಾರ ವಿಕೇಂದ್ರೀಕರಣ ಮಾಡತಕ್ಕ ನಿಮ್ಮ ನೀತಿ ಫಲದಾಯಕವಾಗಿದೆಯೇ? ಚುನಾವಣೆ ಈ ವರ್ಷ ಮುಂದೂಡುವುದಕ್ಕೆ ಏನು ಕಾರಣ ಹೇಳಬೇಕು? ಬಹುಶಃ ಸರಕಾರದವರು ಈ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕ ಬೋರ್ಡ್ ಚುನಾವಣೆಗಳನ್ನು ಈ ಸಾರಿ ನಡೆಸಿದರೆ ಬಹುಶಃ ತಮ್ಮ ಅಧಿಕಾರಕ್ಕೆ ಚ್ಯುತಿ ಬರಬಹುದು ಎಂಬ ಅನುಮಾನ ಸರಕಾರಕ್ಕೆ ಇರಬೇಕು ಎಂದು ನಾನು ಭಾವಿಸುತ್ತೇನೆ. ಸರಕಾರದ ಅಭಿ ಪ್ರಾಯ ಹೀಗೆ ಸಡಿಲವಾಗುತ್ತಾ ಬಂದರೆ ಯಾವ ರೀತಿ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ ಎಂಬ ಅಂಶವನ್ನು ಸಭೆಯ ಮುಂದೆ ಹೇಳಬೇಕಾಗಿದೆ. ಸ್ವಾಮಿ, ಚುನಾವಣೆಗಳನ್ನು ಮುಂದಕ್ಕೆ ಹಾಕಿ ರುವುದನ್ನು ನಾನು ಪ್ರಬಲವಾಗಿ ವಿರೋಧ ಮಾಡುತ್ತೇನೆ. ಈ ವಿಚಾರದಲ್ಲಿ ಸಾರ್ವಜನಿಕರ ಅಭಿಪ್ರಾಯ ತಿಳಿದುಕೊಳ್ಳಲಿಲ್ಲ, ಈ ಸಭೆಯ ಅಭಿಪ್ರಾಯ ತಿಳಿದುಕೊಳ್ಳಲಿಲ್ಲ. ಹಾಗಾದರೆ ಯಾವ ಆಧಾರದ ಮೇಲೆ ಚುನಾವಣೆಗಳನ್ನು ಮುಂದೂಡಿದ್ದೀರಿ ಎಂಬುದನ್ನು ಉತ್ತರದಲ್ಲಿ ಹೇಳುತ್ತೀರಿ

ಎಂದು ನಾನು ನಿರೀಕ್ಷೆ ಮಾಡುತ್ತೇನೆ. ಕೊಂಡಜ್ಜಿ ಬಸಪ್ಪನವರ ವರದಿ ಕುಂಟ ನೆಪ ಆದ್ದಿ ಬಂತೇ? ಎಂದು ಪ್ರಶ್ನೆ ಹಾಕಬೇಕಾಗಿದೆ. ಕೊಂಡಜ್ಜಿ ಬಸಪ್ಪನವರ ರಿಪೋರ್ಟನ್ನು ನೀವು ಅನುಷ್ಠಾನಕ್ಕೆ ತರುತ್ತೇವೆಂದು ಒಂದು ಕಡೆ ಹೇಳಿದ್ದೀರಿ. ಆದರೆ ಕೊಂಡಜ್ಜಿ ಬಸಪ್ಪನವರ ರಿಪೋರ್ಟನ್ನು ತಡೆ ಹಿಡಿದಿದ್ದೀರಿ. ಈ ಸಭೆಯಲ್ಲಿ ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೂಡ ಈ ಸಭೆಗೆ ಕೊಡುತ್ತೀರೋ ಇಲ್ಲವೋ ಎಂಬ ಶಂಕೆ ಇದೆ. ಏಕೆ ಹೇಳುತ್ತಿದ್ದೇನೆಂದರೆ ಈ ಸಭೆ ಕೊಂಡಜ್ಜಿ ಬಸಪ್ಪ ರಿಪೋರ್ಟನ್ನು ದೀರ್ಘವಾಗಿ ಚರ್ಚೆಮಾಡತಕ್ಕಂಥ ಅಧಿಕಾರವನ್ನು ಹೊಂದಿದೆ. ಆದರೆ ಈಗಿರತಕ್ಕಂಥ ತಾಲ್ಲೂಕು ಬೋರ್ಡು ಮತ್ತು ಪಂಚಾಯತಿ ಕಾನೂನುಗಳಿಗೆ ಒಂದು ತಿದ್ದುಪಡಿ ತರಬೇಕು ಎಂದು ಯೋಚನೆಮಾಡಿ ಹೊರಟಿರುವುದು ನೋಡಿದರೆ, ನಿಮ್ಮಲ್ಲಿ ಭಿನ್ನಾಭಿಪ್ರಾಯ ಇರತಕ್ಕಂಥಾದ್ದು ವ್ಯಕ್ತವಾಗುತ್ತಾ ಇದೆ. ಬಗಿ ಇಲ್ಲವೆ ಇರುವ ಸರಕಾರ ಯಾವುದನ್ನಾದರೂ ಸಾಧನೆಮಾಡುವುದಕ್ಕೆ ಶಕ್ಯವೆ? ಅನ್ನುವುದನ್ನು ತಾವೇ ಯೋಚನೆ ಮಾಡಬೇಕು. ಈ ಸಹಕಾರ ಸಂಘಗಳು ಸಾಹುಕಾರರ ಭೋಗವಸ್ತುವಿನಂತೆ ಇವೆ. ಈ ದೇಶದಲ್ಲಿ ಸಹಕಾರ ಸಂಘಗಳು ಭೋಗವಿಲಾಸವನ್ನು ನಡೆಸತಕ್ಕಂಥ ಪುಡಾರಿಗಳನ್ನು, ಲಂಚಕೋರರನ್ನು, ಸಮಾಜಘಾತುಕರನ್ನು ನಿರ್ಮಾಣ ಮಾಡತಕ್ಕಂಥ ಸಂಸ್ಥೆಗಳಾಗಿವೆ. ಮಧ್ಯವರ್ತಿಗಳು ಏನು ಹಣವನ್ನು ತಿನ್ನುತ್ತಿದ್ದರೊ ಅವನ್ನು ಸಹಕಾರ ಸಂಘಗಳ ಮೂಲಕ ತಪ್ಪಿಸಬೇಕೆಂದು ಹೊರಟಿರುವರು, ಯಥಾಪ್ರಕಾರ ಅದೇ ಸಹಕಾರ ಸಂಘಗಳ ಮೂಲಕ ಮತ್ತೊಂದು ನಮೂನೆಯ ಒಂದು ವರ್ಗವನ್ನು ನಿರ್ಮಾಣ ಮಾಡಬೇಕೆಂದಿದ್ದಾರೆ. ಸಾಹುಕಾರರು, ಪುಡಾರಿಗಳು, ಸಮಾಜ ಘಾತುಕರು, ಫೋರ್ಜರಿ, 420 ಮಾಡತಕ್ಕ ಜನಗಳನ್ನು ನೀವು ನಿರ್ಮಾಣ ಮಾಡುತ್ತಾ ಇದ್ದೀರ ಈ ಸಹಕಾರ ಸಂಘಗಳ ಹೆಸರಿನಲ್ಲಿ. ಸಹಕಾರ ಸಂಘಗಳು ಎಷ್ಟರಮಟ್ಟಿಗೆ ಅಭಿವೃದ್ಧಿಯನ್ನು ಹೊಂದಿವೆ ಎಂದು ಪ್ರತಿಯೊಂದು ಬಜೆಟ್ ಸೆಷನ್ನಿನಲ್ಲಿಯೂ ಅಂಕಿಸಂಖ್ಯೆಗಳನ್ನೊಳಗೊಂಡ ಒಂದು ವರದಿಯನ್ನು ನಮ್ಮ ಪಿಜನಹೋಲಿನಲ್ಲಿ ಹಾಕಿರುತ್ತಿದ್ದರು. ದುರದೃಷ್ಟವಶಾತ್ ಸಹಕಾರ ಸಂಘಗಳು ಏನು ಪ್ರಗತಿಯನ್ನು ಸಾಧಿಸಿವೆ ಎಂಬ ಬಗ್ಗೆ ಈ ವರ್ಷ ಯಾವ ಅಂಕಿಸಂಖ್ಯೆಗಳನ್ನೂ ಒದಗಿಸಿಲ್ಲ. ಈ ಸಹಕಾರ ಸಂಘಗಳು ಹೆಣಗಳಂತೆ ಮಾಯವಾಗುತ್ತವೆ. ಹಳ್ಳಿ ಹಳ್ಳಿಯಲ್ಲಿ ಎಲ್ಲ ನಮೂನೆಯ ಸಹಕಾರ ಸಂಘಗಳು ನಡೆಯುತ್ತಿವೆ. ದೊಡ್ಡ ಪ್ರಮಾಣದ ಸಹಕಾರ ಸಂಘಗಳ ವೈಖರಿಯೇನೆಂದರೆ, ಅವು ಎಷ್ಟು ದೊಡ್ಡದಾಗಿವೆಯೋ ಆ ಪ್ರಮಾಣಕ್ಕೆ ಸರಿಯಾಗಿ ಮಿಸ್ ಅಪ್ರೋಪ್ರಿಯೇಶನ್ನು ಹಣ ದುರುಪಯೋಗ ನಡೆಸತಕ್ಕಂಥಾದ್ದು. ಸಣ್ಣ ಪ್ರಮಾಣದ ಸಹಕಾರ ಸಂಘಗಳು ಮಂಡಲ ಕಾಂಗ್ರೆಸ್ ಅಧ್ಯಕ್ಷರ ಕೈನಲ್ಲಿವೆ. ದೊಡ್ಡ ಪ್ರಮಾಣದ ಸಂಘಗಳು ಪ್ರಾದೇಶಿಕ ಕಾಂಗ್ರೆಸ್ ಮುಂದಾಳುಗಳ ಕೈನಲ್ಲಿವೆ. ಇನ್ನು ಮಲ್ಟಿಪರ್ಪಸ್ ಸೊಸೈಟಿಗಳು, ಕನ್ಸ್ಯೂಮರ್ ಸೊಸೈಟಿಗಳು, ಇತ್ಯಾದಿ ನಾನಾತರಹ ಸಹಕಾರ ಸಂಘಗಳನ್ನು ದೇಶದಲ್ಲಿ ಸ್ಥಾಪನ ಮಾಡಿಕೊಂಡು, ಐ.ಪಿ.ಸಿಯಲ್ಲಿ ಶಿಕ್ಷೆ ವಿಧಿಸತಕ್ಕಂಥ ಯಾವ ಸೆಕ್ಷನ್ನುಗಳಿವೆಯೊ, ಆ ಸೆಕ್ಷನ್ನುಗಳ ಪ್ರಕಾರ ತಕ್ಸೀರು ಮಾಡತಕ್ಕಂಥ ಜನಗಳು ಅವುಗಳಲ್ಲಿ ಸೇರಿಕೊಂಡಿದ್ದಾರೆ. ಇಂಥ ಸೊಸೈಟಿಗಳಿಗೆ ಜತ್ತಿಯವರು ಧಾರಾಳವಾಗಿ ಹಣ ಕೊಡುತ್ತಾ ಇದ್ದಾರೆ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ನೀವು ಈಲ್ಡ್ ಆಗುವುದಿಲ್ಲ, ಗೊತ್ತು, ಆದರೂ ತಾವು ಒಪ್ಪಿಗೆ ಕೊಡದೆಹೋದರೆ, ನಾನು ಕೊಡುವುದು ಹೇಗೆ?

ಶ್ರೀ ಕೆ. ಲಕ್ಕಪ್ಪ.—ಶ್ರೀ ಜತ್ತಿಯವರು ಬಜೆಟ್ ಸ್ಪೀಚಿನಲ್ಲಿ ಸಹಕಾರ ಸಂಘಕ್ಕೆ ದುಡ್ಡು ಬೇಕು ಅಂತ ಕೇಳಿದರೇ ವಿನ ಸಹಕಾರ ಸಂಘಗಳು ಏನು ಪ್ರಗತಿ ಸಾಧಿಸಿವೆ, ಎಷ್ಟು ಸಹಕಾರ ಸಂಘಗಳು ಮೈಸೂರು ರಾಜ್ಯದಲ್ಲಿ ಹಣವನ್ನು ದುರುಪಯೋಗ ಮಾಡಿಕೊಂಡು ಸಮಾಜ ಘಾತುಕರನ್ನು ನಿರ್ಮಾಣ ಮಾಡುತ್ತಿವೆ, ಆಡಿಟ್ ಆಗದೆ ಇರತಕ್ಕಂಥ ಸೊಸೈಟಿಗಳು ಎಷ್ಟಿವೆ ಅನ್ನುವುದನ್ನು ಅದರಲ್ಲಿ ಏಕೆ ಹೇಳಲಿಲ್ಲ? ಒಂದು ಊರಿಗೆ ಒಂದು ಪಂಚಾಯತಿ ಎಂಬ ಸರಕಾರದ ನೀತಿ ಇದೆ. ಆದರೆ ಒಂದು ಗ್ರಾಮ ಪಂಚಾಯತಿಗೆ 2 ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ ನಿದರ್ಶನಗಳಿವೆ. ಯಾವುದಾದರೂ ಒಂದು ನೀತಿಯನ್ನು ಪರಿಪಾಲನೆಮಾಡಬೇಕು. ಅದೇ ರೀತಿಯಲ್ಲಿ 2 ಸೊಸೈಟಿಗಳನ್ನು ಮಾಡಿಕೊಡಿ ಎಂದು ಕೇಳಿದರೆ, ಒಂದೇ ಊರಿಗೆ 2 ಸಹಕಾರ ಸಂಘಗಳನ್ನು ಕೊಡಕೂಡದು ಎಂಬ ತತ್ವವನ್ನು ಅನುಸರಿಸುತ್ತಿದ್ದೇವೆಂದು ಹೇಳುತ್ತಾರೆ. ಇವುಗಳನ್ನು ಯಾವ ಆಧಾರದ ಮೇಲೆ ಸ್ಥಾಪನೆ ಮಾಡುತ್ತಾರೆ? ರಾಜಕೀಯದ ಆಧಾರದ ಮೇಲೊ ಅಥವಾ ಜಾತಿಯ ಆಧಾರದ ಮೇಲೊ ಸಹಕಾರ ಸಂಘಗಳನ್ನು ಏರ್ಪಡಿಸುವುದು? ಒಂದೇ ಮನೆಯವರು ಸೇರಿಕೊಂಡು ಸೊಸೈಟಿ ನಿರ್ಮಾಣ ಮಾಡುತ್ತಾರೆ. ನೆಂಟರಿಷ್ಟರು ಅಣ್ಣತಮ್ಮ, ಸೊಸೆ, ಅಕ್ಕ ತಂಗಿ, ಹುಟ್ಟದೆ ಇರತಕ್ಕಂಥವರು ಎಲ್ಲಾ ಶೇರುಹೋಲ್ಡರುಗಳು ಆಗಿರುವ ಸೊಸೈಟಿಗಳು ಇರಬಹುದು. ಒಂದು ಸೊಸೈಟಿಯಲ್ಲಿ [illegible] ಸಹಸ್ರ ರೂಪಾಯಿ ಮಿಸ್ ಅಪ್ರೋಪ್ರಿಯೇಟ್ ಆಗಿದೆ; ಆದಕ್ಕೆ ಸೆಕ್ರೆಟರಿ ಇರುವುದಿಲ್ಲ, ಯಾರಿಂದ ಹಣ ರಿಕವರಿ ಮಾಡಬೇಕು. ಚಾಮರಾಜನಗರ ತಾಲ್ಲೂಕು ಆಡಿಟ್ ರಿಪೋರ್ಟ್ ನೋಡುವ ಕಾಲದಲ್ಲಿ, ಅಲ್ಲಿ 35 ಸಾವಿರ ರೂಪಾಯಿ ಒಂದು ಸೊಸೈಟಿಯಲ್ಲಿ ಮಾಯವಾಗಿದೆ. ನಿಮ್ಮ

(ಶ್ರೀ.ಕೆ. ಲಕ್ಕಪ್ಪ)

ರಿಜಿಸ್ಟ್ರಾರವರ ರಿಪೋರ್ಟನ್ನು ತರಿಸಿಕೊಂಡು ನೋಡಬಹುದು. ಸೊಸೈಟಿ ಯಾರಿಗೆ ಕೊಟ್ಟಿದೆ ಹಣವನ್ನು ಎಂಬ ಅಂಶ ಗೊತ್ತಿಲ್ಲ. 1957-58, 1959-60ನೆ ಇಸವಿ ಆಡಿಟ್ ರಿಪೋರ್ಟಿನಲ್ಲಿ ತುಮಕೂರು ತಾಲ್ಲೂಕು ಮಾರ್ಕೆಟಿಂಗ್ ಕೊಆಪರೇಟಿವ್ ಸೊಸೈಟಿ ವಿಚಾರವನ್ನು ತಮ್ಮ ಅವಗಾಹನೆಗೆ ತಂದೆ. ನೀವು ಮಾಡಿದ್ದೇನು ? ಆಡಿಟ್ ರಿಪೋರ್ಟನ್ನು ನೀವು ಈ ವಿಚಾರದಲ್ಲಿ ಪರಿಶೀಲನೆ ಮಾಡಿದ್ದೀರಾ ? ವಿಚಾರಣೆ, ತನಿಖೆ ನಡೆಸಿದ್ದಿರಾ ? ಆಡಿಟ್ ಸೆಲ್ ಕಳುಸಿದ್ದಿರಾ ? ಎಂಬುದನ್ನು ತಾವು ಹೇಳಬೇಕು. ಅಂಥವರಿಂದ ಹೂವಿನಹಾರ ಹಾಕಿಸಿಕೊಂಡು, ಹೊಗಳಿಸಿಕೊಂಡು ಬರುತ್ತೀರ. ರೈತರಿಗೆ ಉಪಯೋಗವಾಗಬೇಕೆಂಬ ಉದ್ದೇಶದಿಂದ ಸ್ಥಾಪಿತವಾಗಿರುವ ಸೊಸೈಟಿಗಳಲ್ಲಿ ಗೊಬ್ಬರವನ್ನು ಕಳ್ಳಪೇಟೆಯಲ್ಲಿ ಮಾರಿರುತ್ತಾರೆ, ಅಂಥವರಿಂದ ನೀವು ಹೂವಿನ ಹಾರವನ್ನು ಹಾಕಿಸಿಕೊಳ್ಳುತ್ತೀರ. ಹೀಗೆ ಸೊಸೈಟಿ ಹಣ ದುರುಪಯೋಗವಾಗುತ್ತಿದೆ. ಡಿಸ್ಟ್ರಿಕ್ಟ್ ಬ್ಯಾಂಕ್ ರಿಜಿಸ್ಟ್ರಾರ್‌ರವರು ತುಮಕೂರಿಗೆ ಬಂದಾಗ, ನಮ್ಮ ಸಹಕಾರ ಸಂಘಗಳು ತುಮಕೂರು ಜಿಲ್ಲೆಯಲ್ಲಿ ಬಹಳ ಚೆನ್ನಾಗಿ ನಡೆಯುತ್ತಾ ಇವೆ ಎಂದು ಹೇಳಿದರು. ಇದನ್ನು ಒಂದು ಮೀಟಿಂಗಿನಲ್ಲಿ ಹೇಳಿದರು. ಆವಾಗ ಸೊಸೈಟಿ ಸೆಕ್ರೆಟರಿಗಳು ಗೊಬ್ಬರಗಳನ್ನು ಯಾವರೀತಿ ಮಾರುತ್ತಾ ಇದ್ದಾರೆ ಎನ್ನುವುದನ್ನು ಹೇಳಿದೆ. ಅದೂ ಬಹಳ ಚೆನ್ನಾಗಿ ನಡೆಯುತ್ತಾ ಇದೆಯೆಂದು ಹೇಳಿದರು. ಮೂರು ವರ್ಷದಲ್ಲಿ ತುಮಕೂರು ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ 3 ಲಕ್ಷ ರೂಪಾಯಿ ಚಪಾವಣೆ ಆಗಿದೆ. ಗೂಳೂರು ಸೊಸೈಟಿಯಲ್ಲಿ, ದೊಡ್ಡ ಪ್ರಮಾಣದಲ್ಲಿ, 3 ಸಾವಿರ ರೂಪಾಯಿ ಚಪಾವಣೆಯಾಗಿದೆ. ಈ ರೀತಿಯಾಗಿ ಹಣವನ್ನು ದುರುಪಯೋಗ ಮಾಡಿಕೊಂಡು ಸಮಾಜಘಾತುಕರು ಬೆಳೆಯುತ್ತಾ ಬಂದಾಗ ಸಹಕಾರ ಸಂಘ ಪದ್ಧತಿ ಎಲ್ಲಿಯವರೆಗೆ ನಡೆದಿದೆ ಎಂದು ತಿಳಿದುಕೊಳ್ಳಬಹುದು. ತುಮಕೂರು ಡಿಸ್ಟ್ರಿಕ್ಟ್ ಬಗ್ಗೆ ಹೇಳುವುದಾದರೆ, ಎಷ್ಟು ಸೊಸೈಟಿಗಳಿಗೆ ಆಡಿಟ್ ಸೆಲ್ ಕಳುಹಿಸಿ ಆಡಿಟ್ ನಡೆಸಿದ್ದೀರಿ ? ಇದರ ಬಗ್ಗೆ ನಾನೇ ಎಷ್ಟೋ ಅರ್ಜಿಗಳನ್ನು ಕೊಟ್ಟು ತಮ್ಮ ಮೂಲಕ ಗಮನಕ್ಕೆ ತಂದಿದ್ದೇನೆ. ಈ ವಿಚಾರದಲ್ಲಿ ವಿಚಾರವನ್ನು ನಡೆಸದೆ ಇರತಕ್ಕಂಥಾದ್ದು ಏಕೆ ? ರಾಜಕೀಯ ತಮಗೆ ಅಂಟುಕೊಂಡಿದೆಯೊ ? ಸೊಸೈಟಿಗಳನ್ನು ನಿರ್ಮಾಣಮಾಡಿ ಅಧಿಕಾರವನ್ನು ಇರಿಸಿಕೋಬೇಕು, ನಾವೇ ಇಟ್ಟುಕೋಬೇಕು ಎಂಬ ಉದ್ದೇಶವಿದ್ದರೆ, ನಾವು ಕಾಂಗ್ರೆಸ್ಸಿನವರೇ ಸಹಕಾರ ಸಂಘಗಳಲ್ಲಿ ಇರುವುದಕ್ಕೆ ಲಾಯಕ, ಕಾಂಗ್ರೆಸ್ ಪುಢಾರಿಗಳಿಗೇ ಸಹಕಾರ ಸಂಘಗಳಲ್ಲಿ ಭಾರಿ ಭಾರಿ ಚಪಾವಣೆ, ಫೋರ್ಜರಿ, ಮಿಸ್ ಅಪ್ರೋಪ್ರಿಯೇಶನ್ ಮಾಡುವುದಕ್ಕೆ ಬರುವುದು, ಕಾಂಗ್ರೆಸ್ಸಿನವರಿಗೇ ಅದು ಬರುವುದು. ಇನ್ಯಾರಿಗೂ ಬರುವುದಿಲ್ಲವೆಂದು ಹೇಳಿಬಿಟ್ಟರೆ ನಾವು ಅಗಲಿ ಸ್ವಾಮಿ, ಫೋರ್ಜರಿ, 420 ನಡೆಸಿ ಎಂದು ಹೇಳುತ್ತೇನೆ. ಹುಲ್ಲುಗಾವಲಿನಲ್ಲಿ ಗೂಳಿಗಳು ಮೇಯುವಂತೆ ಮೇಯುತ್ತಿದ್ದಾರೆ. ಸ್ಟೇಟ್ ಮಾರ್ಕೆಟಿಂಗ್ ಬ್ಯಾಂಕ್ ವಿಚಾರ ನಮ್ಮ ಗಮನಕ್ಕೆ ಬಂದಿವೆ. ಒಬ್ಬ ಮಾನ್ಯರು ಮೈಸೂರು ಸರಕಾರದ ಮೇಲೆ ಬಹಳ ಪ್ರಭಾವ ಬೀರುತ್ತಿದ್ದಾರೆ. ಈ ಪ್ರಭಾವವನ್ನು ಬೀರುವುದೇ ಅಲ್ಲದೆ, ಆಂಧ್ರದಲ್ಲಿ ಬರತಕ್ಕಂಥ ಕಾಂಗ್ರೆಸ್ಸಿನ ಟಿಕ್ಕಟ್ಟು, ಕೇರಳದಲ್ಲಿ ಬರತಕ್ಕಂಥ ಕಾಂಗ್ರೆಸ್ಸಿನ ಟಿಕ್ಕಟ್ಟು ಬಗೆಹರಿಸುವುದಕ್ಕೆ ಕೂಡ ಲಾಯಕ್ಕಾಗಿರತಕ್ಕಂಥ ವ್ಯಕ್ತಿಯನ್ನು ಚೇರ್ಮನ್ನಾಗಿ ಮಾಡಿದ್ದಾರೆ.

ಈ ವ್ಯಕ್ತಿ ಮೊನ್ನೆ ಸಿಮ್ಲಾದಿಂದ ತರಬೇಕಾಗಿದ್ದ ಆಲೂಗಡ್ಡೆಯನ್ನು ಬರ್ಮಾದಿಂದ ತಂದು 3 ಲಕ್ಷ ರೂಪಾಯಿಗಳವರೆಗೂ ಹಣವನ್ನು ದುರುಪಯೋಗ ಪಡಿಸಿರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ? ಆ ವಿಚಾರದಲ್ಲಿ ತಮ್ಮ ತನಿಖೆ ಏನು ? ಪರಿಶೀಲನೆ ಏನು ? ವಿಚಾರಣೆ ಏನು ? ಇವತ್ತಿನವರೆಗೂ ಅದನ್ನು ವಿಚಾರಣೆ ಮಾಡದಿದ್ದರೆ ಯಾವ ರೀತಿಯಾಗಿ ಈ ಸಹಕಾರ ಸಂಘಗಳು ಬೆಳೆಯುತ್ತವೆ ಎಂಬುದನ್ನು ತಾವು ಯೋಚನೆ ಮಾಡಬೇಕಾಗಿದೆ.

1-30 P.M.

ಈ ಸೊಸೈಟಿಗಳ ರಿಜಿಸ್ಟ್ರಾರ್ ಅವರ ಜೊತೆಗೆ ಜಾಯಿಂಟ್ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಇವರುಗಳೆಲ್ಲಾ ಏಕೆ ? ಎ. ಜಿ. ಆರ್. ಕಮಿಟಿಯಲ್ಲಿ ಅಧಿಕಾರಿಗಳ ಸಂಖ್ಯೆ ಬಹಳ ಜಾಸ್ತಿಯಾಗಿದ, ಅವರಿಗೆ ಕೊಡತಕ್ಕ ಸಂಬಳ ಸಾರಿಗೆ ಬಹಳ ಜಾಸ್ತಿಯಾಗಿದೆ ಎಂದು ಹೇಳಿದ್ದರೂ ಕೂಡ ಈ ಸೊಸೈಟಿಗಳ ವ್ಯವಹಾರವನ್ನು ಸರಿಯಾದ ರೀತಿ ನೀತಿ ಇಲ್ಲದೇ ತನಿಖೆ ನಡೆಸದೇ, ಯಾರು ಕಳ್ಳತನ ಮಾಡಿ ಹಣ ದುರುಪಯೋಗ ಮಾಡುತ್ತಾರೆಯೋ ಅಂತಹ ವ್ಯಕ್ತಿಗಳಿಗೆ ಶಿಕ್ಷೆ ಕೊಡದೇ ಇರತಕ್ಕ ಅಧಿಕಾರಿಗಳನ್ನು ಇಟ್ಟುಕೊಂಡು ಅಂತಹ ಅಧಿಕಾರಿಗಳ ಮೂಲಕ ತಾವು ಅಧಿಕಾರ ರೂಢರಾಗಿ ಇರಬೇಕೆಂಬುದು ಸರಕಾರದ ನೀತಿಯೇ ಎಂದು ನಾನು ಈ ಸಮಯದಲ್ಲಿ ತಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ. ತುಮಕೂರಿನಲ್ಲಿ ಸುಮಾರು 16 ವರ್ಷದಿಂದ ಅಲ್ಲೇ ಇರತಕ್ಕ ಒಬ್ಬ ಅಧಿಕಾರಿ ಇದ್ದಾರೆ

ಅವರು ಎಲ್ಲಿಗಾದರೂ ಹೋದರೆ ಕುಣಿಗಲ್, ಬಂದರೆ ತುಮಕೂರು ಇವೆರಡು ಬಿಟ್ಟರೆ ಯಾವ ಸ್ಥಳಕ್ಕೂ ಕೂಡ ಹೋಗಿಲ್ಲ, ಬಸಪ್ಪ ಅಂತ ಅವರ ಹೆಸರು, ಅವರು ಸೊಸೈಟಿ ಇನ್ಸ್‌ಪೆಕ್ಟರು ಆಗಿದ್ದಾರೆ. ಯಾರು ಸಹಕಾರ ಸಂಘಗಳನ್ನು ಮಾಡುತ್ತಾರೆ ಅಂತಹವರಿಗೆ ಏಜೆನ್ಸಿ ಕ್ರಿಯೇಟ್ ಮಾಡುವುದೇ ಅವರ ಕೆಲಸವಾಗಿದೆ. ತುಮಕೂರು ಸರ್ಕಲ್ ದಿಂದ ಮೂರು ಮೈಲಿಯಲ್ಲಿ ಅವರ ವಾಸದ ಮನೆ ಇದೆ, ಇಂತಹ ಜನರು 12 ವರ್ಷದಿಂದ ಒಂದೇ ಜಾಗದಲ್ಲಿ ಇದ್ದಾರೆ. ಇಂಥಾದ್ದೆಲ್ಲಾ ಮಾಡುತ್ತಾ ಇದ್ದರೂ ಕೂಡ ಯಾರು ಅರ್ಜಿ ಕೊಟ್ಟರೂ ತಾನೆ ಏನು ನಡೆಯುತ್ತದೆ ? ನ್ಯಾಯ ದೊರಕುತ್ತದೆಯೇ ? ಎಂಬುದನ್ನು ತಾವು ವಿಚಾರ ಮಾಡಿನೋಡಬೇಕು.

ಇನ್ನು ರೆಕವರೀಸ್ ಆಗತಕ್ಕ ಔಚಿತ್ಯವನ್ನು ಹೇಳಬೇಕಾಗಿದೆ. ಈ ರೀತಿಯಲ್ಲಿ ಒಂದು ಆಡಳಿತ ನಡೆದರೆ ಯಾವ ಸೊಸೈಟಿ ಆಗಲಿ ಅದು ಯಾವತ್ತು ಹುಟ್ಟುತ್ತದೆಯೋ ಅದರ ಮಾರನೆಯ ದಿವಸವೇ ಡೀಫಂಕ್ಟ್ ಆಗುತ್ತದೆ, ಅದು ಉದ್ಧಾರವಾಗುವುದಿಲ್ಲ. ರೆಕವರೀಸ್ ಮಾಡತಕ್ಕ ವಿಚಾರದಲ್ಲಿ ಯಾವ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದೀರಿ. ಎಷ್ಟು ಸೊಸೈಟಿಗಳಿಂದ ಹಣ ಬರಬೇಕಾಗಿದೆ ಎಂಬ ಅಂಕಿ ಅಂಶಗಳನ್ನು ಸರಕಾರದವರು ಈ ಸಭೆಯ ಮುಂದೆ ಇಡುವುದಾದರೆ ಆಗ ಗೊತ್ತಾಗುತ್ತದೆ. ಎಷ್ಟು ಸೊಸೈಟಿಗಳು ಈ ದೇಶದಲ್ಲಿ ನ್ಯೂನತೆಯಿಂದ ಕೂಡಿದ್ದು, ಹಣ ದುರುಪಯೋಗ ಮಾಡಿವೆ ಎಂಬುದನ್ನು ಪರಿಶೀಲನೆ ಮಾಡಲು ಒಂದು ಪರಿಶೀಲನಾ ಸಮಿತಿಯನ್ನು ಸರಕಾರದವರು ನೇಮಿಸಿ ಎಷ್ಟು ಹಣ ಸಹಕಾರ ಸಂಘಗಳಲ್ಲಿ ದುರುಪಯೋಗವಾಗಿದೆ ಎಂಬ ವಿಷಯವನ್ನು ಈ ಸಭೆಯ ಮುಂದೆ ಇಡಬೇಕೆಂದು ನಾನು ಸೂಚನೆ ಮಾಡಲು ಬಯಸುತ್ತೇನೆ. ಸರ್ಕಾರದವರು ಸ್ವಲ್ಪಮಟ್ಟಿಗೆ ಅವರೂ ಕೂಡ ಕಾನೂನು ಪ್ರಕಾರ ಸರಿಯಾದ ರೀತಿಯಲ್ಲಿ ನಡೆಸುತ್ತಾ ಇದ್ದಾರೆಯೋ ಇಲ್ಲವೇ ಎಂಬುದನ್ನು ಆಗಲಾದರೂ ಹೇಳುವುದಕ್ಕೆ ಒಂದು ಅವಕಾಶವಾಗುತ್ತದೆ. ಆ ರೀತಿ ಮಾಡಲು ಇದುವರೆಗೂ ಕೂಡ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ ಮತ್ತು ಅಂತಹ ಯಾವ ಒಂದು ಸಮಿತಿಯನ್ನೂ ಕೂಡ ಇದುವರೆಗೂ ತಯಾರು ಮಾಡಿಲ್ಲ.

ಇನ್ನು ಸೊಸೈಟಿಗಳಲ್ಲಿ ಮಾರತಕ್ಕ ವಸ್ತುಗಳ ವಿಷಯವನ್ನು ತಾವು ಸ್ವಲ್ಪ ಕೇಳಬೇಕು. ತುಮಕೂರು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ, ಗೂಳೂರು ಮತ್ತು ಕುಣಿಗಲ್ ಸಹಕಾರ ಸಂಘಗಳಿಗೆ ಸ್ಟೇಟ್ ಕೋ ಆಪರೇಟೀವ್ ಸೊಸೈಟಿಯಿಂದ ಯಾವ ಯಾವ ಐಟಂಗಳು ಬರುತ್ತವೆ ಎನ್ನುವುದು ಯಾರಿಗೂ ಏನೂ ಗೊತ್ತಾಗುತ್ತಾ ಇಲ್ಲ. ಕರ್ಪೂರದಿಂದ ಹಿಡಿದು ಮೆನ್ಯೂರ್‌ವರೆಗೂ ಬರುತ್ತದೆ, ಅದು ಯಾವ ರೀತಿ ರೈತನಿಗೆ ಸಿಕ್ಕುತ್ತದೆ ಎಂಬುದನ್ನು ತಾವು ಸ್ವಲ್ಪ ಗಮನವಿಟ್ಟು ನೋಡಬೇಕು. ಮೊನ್ನೆ 80 ಜಿಂಕ್‌ಷೀಟುಗಳನ್ನು ಆ ಕೋ-ಆಪರೇಟೀವ್ ಸೊಸೈಟಿಯ ಗೋಡೌನಿನಿಂದ ಕೊಟ್ಟರು ಎಂದು ನನಗೆ ತಿಳಿದುಬಂದಿದೆ. ಅದು ಬೆಂಗಳೂರಿನಲ್ಲಿ ಮಾರಾಟವಾಗಿದೆ. ಗೂಳೂರು ಸೊಸೈಟಿಯಲ್ಲಿ ತಕ್ಷಣ ವಿಚಾರ ಮಾಡಿದರೆ ಗೊತಾಗುತ್ತದೆ 80 ಜಿಂಕ್‌ಷೀಟುಗಳು ಎಲ್ಲಿ ಹೋಯಿತ ಎಂಬುದು. ಗೂಳೂರು ಸೊಸೈಟಿ ಸೆಕ್ರೆಟೆರಿಯವರು ಯಾವಾಗಲೂ ಸೊಸೈಟಿಯನ್ನು ಭದ್ರವಾಗಿ ಬೀಗ ಹಾಕಿ ಯಾರು ಬಂದರೂ ಅವರಿಗೆ ಏನಾದರೂ ಒಂದು ಉತ್ತರವನ್ನು ಹೇಳಿ ವಾಪಸ್ಸು ಕಳುಹಿಸುತ್ತಾ ಇದ್ದಾರೆ. 10–15 ವರ್ಷದಿಂದ ನಮಗೆ ಈ ಅನುಭವಬಂದಿದೆ. ಇದಕ್ಕೆ ಏನಾದರೂ ಒಂದು ಉಪಾಯ ಇದೆಯೇ ಇಲ್ಲವೇ ಎಂಬ ಬಗ್ಗೆ ಶಂಕೆ ನಮಗೆ ಬಂದಿದೆ.

†ಶ್ರೀ ಎ. ಎಸ್. ಪಾಟೀಲ್ (ನರಗುಂದ್).—ಮಾನ್ಯ ಸಭಾಪತಿಗಳವರೇ, ಜಿಲ್ಲಾ ಮತ್ತು ಗ್ರಾಮಾಂತರ ಸೊಸೈಟಿಗಳ ಬೇಡಿಕೆಗಳನ್ನು ಏನು ಈಗ ಸಭೆಯ ಮುಂದೆ ಇಟ್ಟಿದ್ದೀರಿ ಇವಕ್ಕೆ ನಾನು ಬೆಂಬಲ ನೀಡುತ್ತಾ ಇದ್ದೇನೆ. ಮೊದಲನೆಯದಾಗಿ ಈ ಸಹಕಾರವನ್ನು ಕುರಿತು ನಾನು ಕೆಲವು ಮಾತುಗಳನ್ನು ಈ ಸಭೆಯ ಮುಂದೆ ಇಡುತ್ತೇನೆ. ಮೊಟ್ಟ ಮೊದಲನೆಯದಾಗಿ ಈ ಸಹಕಾರ ಚಳುವಳಿ ನಮ್ಮ ದೇಶದಲ್ಲಿ ಬೆಳೆಯಬೇಕಾದರೆ ಕಾರಣ ಒಕ್ಕಲುತನದ ರೈತರು ಬಹಳ ಸಾಲಕ್ಕೆ ಒಳಗಾಗಿ ಸಾಲದಿಂದ ನರಳುತ್ತಾ ಇದ್ದರು. ಸುಮಾರು 1874ನೇ ಇಸವಿಯಲ್ಲಿ ಡೆಕ್ಕನ್‌ದೊಳಗೆ ಎಂದರೆ, ಪುಣೆದೊಳಗೆ ಕೆಲವೊಂದು ತಾಲ್ಲೂಕುಗಳಲ್ಲಿ ಎಂದರೆ ಪುರಂದರ ಮುಂತಾದ ತಾಲ್ಲೂಕುಗಳಲ್ಲಿ ದೊಂಬಿ ಎದ್ದರು. ರೈತರಿಗೆ ಸೇರಿದ ಜಮೀನುಗಳನ್ನು ಜಮೀನ್ದಾರರು ವತ್ತಿಗೆ ತೆಗೆದುಕೊಂಡರು ಮತ್ತು ಅವರಿಗೆ ಸಾಲ ಕೊಟ್ಟು ಅದಕ್ಕೆ ಬಡ್ಡಿ ತೆಗೆದುಕೊಂಡದ್ದೂ ಅಲ್ಲದೆ ಅವನ್ನು ತಮ್ಮ ಹೆಸರಿಗೆ ಬರೆಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು ಇದರಿಂದಾಗಿ ದಂಗೆ ಆಯಿತು. ಮುಂದೆ ರೈತರ ಭವಣೆಯನ್ನು ಆದಷ್ಟು ಸುಧಾರಿಸಲಿಕ್ಕೆ ಅವರ ಸಾಲದ ಹೊರೆಯನ್ನು ಕಡಿಮೆ ಮಾಡುವ ಯೋಜನೆ ಮಾಡಲಿಕ್ಕೆ ಸರಕಾರದ ಕಾಯಿದೆಗಳು ಸಹಿತ ಅಮಲಿನಲ್ಲಿ ಬಂದವು. 1883ರಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟ್ ಅಂತ ಆಯಿತು ಅನಂತರ ಅಗ್ರಿಕಲ್ಚರಲ್ ಲ್ಯಾಂಡ್ ಆಕ್ಟ್ ಅಂತ ಆಯಿತು. ಒಕ್ಕಲಿಗರ ಋಣ ಪರಿಹಾರದ ಆಕ್ಟ್ ಕೂಡ ಆಯಿತು. ಇಷ್ಟಾದರೂ ಕೂಡ ಅವರ ಹಿತಸಾಧನೆಯಾಗದೆ ಅವರು ಕಂಗಾಲ ಸ್ಥಿತಿಯಲ್ಲೇ ಉಳಿದರು. ಅನಂತರ ಮುಂದೆ ಏನು ಮಾಡಬೇಕೆಂದು ಹೇಳಿ ಯೋಚನೆ ಬಂದು ಪಾಶ್ಚಾತ್ಯ ದೇಶಗಳಲ್ಲಿ ಯಾವ ರೀತಿಯ ಒಂದು ಸಹಕಾರ ಚಳು

(ಶ್ರೀ ಎ. ಎಸ್. ಪಾಟೀಲ್)

ವಳಿ ಇದೆ ಅದೇ ಒಂದು ಒಕ್ಕಲುತನದ ಅಭಿವೃದ್ಧಿಗೆ ಬೆನ್ನೆಲುಬು ಅಂತ ತಿಳಿದು ಆಗಲೇ ಒಕ್ಕಲುತನದ ಚಳುವಳಿಯಾಗಿ ಅದು ನಮ್ಮ ದೇಶದಲ್ಲಿ ಜಾರಿಯಲ್ಲಿ ಬಂತು. 1904ರಲ್ಲಿ ಈ ಚಳುವಳಿ ಆರಂಭವಾಗಿ 1912ರಲ್ಲಿ ಕೋ ಆಪರೇಟೀವ್ ಸೊಸೈಟಿಸ್ ಆಕ್ಟ್ ಬಂತು. ಈಗ ನಾನು ಮೊದಲನೆಯದಾಗಿ ಹೇಳುವುದೇನೆಂದರೆ ಒಕ್ಕಲುತನದ ಪತ್ತಿನ ಬಗ್ಗೆ ನಾವು ಒಕ್ಕಲಿಗರಿಗೆ ಸಾಲವನ್ನು ಏನು ಒದಗಿಸುತ್ತಾ ಇದ್ದೇವೆ ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಸರಕಾರದವರು ಅನೇಕ ರೀತಿಯಲ್ಲಿ ರೈತರಿಗೆ ಸಹಾಯ ಮಾಡಬೇಕೆಂದು ಎಷ್ಟೋ ಯೋಜನೆಗಳನ್ನು ಹಾಕಿದ್ದರೂ ಕೂಡ ಈ ಪತ್ತಿನ ವಿಷಯದಲ್ಲಿ ಅವು ಫಲದಾಯಕವಾಗಿಲ್ಲ ಎಂದು ನನಗೆ ಅನಿಸುತ್ತದೆ. ಸಹಕಾರ ಸಂಘಗಳು 3 ತರಹದ ಅಂತಸ್ತಿನೊಳಗೆ ತ್ರೀ ಟೈರ್ ಸಿಸ್ಟಂನಲ್ಲಿ ಬೆಳೆದು ಬಂದಿವೆ. ಹಳ್ಳಿಯಲ್ಲಿ ಪ್ರಾಥಮಿಕ ಸಹಕಾರ ಸಂಘ ಅಥವಾ ಸರ್ವಿಸ್ ಕೋ ಆಪರೇಟೀವ್ಸ್ ಅಂತ ಇದೆ. ಡಿಸ್ಟ್ರಿಕ್ಟ್‌ನಲ್ಲಿ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್ ಅಂತ ಇವೆ. ಆ ಮೇಲೆ ರಾಜ್ಯದ ಮಟ್ಟದಲ್ಲಿ ಅಪೆಕ್ಸ್ ಬ್ಯಾಂಕ್ ಅಂತ ಇದೆ. ಆದರೆ ಪತ್ತಿನ ಬಗ್ಗೆ ಇವತ್ತಿನವರೆಗೂ ಸಹಿತ ಯಾವ ಒಂದು ವಿತರಣೆಯೂ ಕೂಡ ಆಗಿಲ್ಲ. ರೈತರು ಪತ್ತನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಾರೆ ಎಂಬುದನ್ನು ನಾವು ನೋಡಬೇಕಾಗಿದೆ. ಗ್ರಾಮಾಂತರಗಳಲ್ಲಿ ಹೆಚ್ಚಿನ ರೀತಿಯಲ್ಲಿ ಸಾಲಗಳನ್ನು ಒದಗಿಸಿದ್ದರೂ ಕೂಡ ಈ ವಿಷಯದಲ್ಲಿ ಗ್ರಾಮಾಂತರ ಪರಿಶೀಲನಾ ಸಮಿತಿಯವರು ಒಂದು ತೀವ್ರವಾದ ವರದಿಯನ್ನು ಒಪ್ಪಿಸಿದರೆ 7-8 ವರ್ಷಗಳಿಂದ ರೈತರ ವರಮಾನ ಸರಾಸರಿ 50 ರೂಪಾಯಿ ಇದ್ದರೆ, 117 ರಿಂದ 120 ರೂಪಾಯಿಗಳವರೆಗೂ ಅವರ ಸಾಲದ ಹೊರೆ ಏರಿರುವುದು ಕಂಡುಬರುತ್ತದೆ. ನಮ್ಮ ಸಹಕಾರ ಸಂಘಗಳ ಬೆಳವಣಿಗೆ ಯಾವ ರೀತಿಯಾಗಿದೆ ಎಂಬುದನ್ನು ನೋಡಿದರೆ ಇಡೀ ಹಿಂದೂಸ್ಥಾನದಲ್ಲಿ ನಮ್ಮ ರಾಜ್ಯ 3 ಅಥವಾ 4ನೆಯ ನಂಬರಿನಲ್ಲಿ ಇದೆ. 1956ನೇ ಇಸವಿಯಲ್ಲಿ ನಾವು ಇಲ್ಲಿಗೆ ಬಂದಾಗ ರೈತರಿಗೆ ಪಾವತಿಯಾಗುತ್ತಾ ಇದ್ದ ಸಾಲ ಒಂದು ಲಕ್ಷ ರೂಪಾಯಿಗಳವರೆಗೂ ಆಗುತ್ತಾ ಇದ್ದರೆ ಈಗ 15 ಲಕ್ಷ ರೂಪಾಯಿಗಳವರೆಗೂ ಆಗುತ್ತಾ ಇವೆ. ಅದೇ ರೀತಿ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನಲ್ಲಿ ಕೂಡ ವ್ಯವಹಾರ ನಡೆಸಿ ರೈತರಿಗೆ ಬೇಕಾದಷ್ಟು ದೀರ್ಘಾವಧಿ ಕಾಲ ಸಿಕ್ಕಿದೆ, ಇಷ್ಟಾದರೂ ಸಹಿತ ರೈತನ ಒಂದು ಸಮಸ್ಯೆ ಏನಿದೆ, ಅವನ ಪತ್ತು, ಅದಕ್ಕೆ ಪೂರ್ಣ ನಿವಾರಣೆ ರಾಜ್ಯದಲ್ಲಿ ಕೊಡಲು ಆಗಿಲ್ಲ. ಸರ್ಕಾರದವರು ಇದರ ಬಗ್ಗೆ ಒಂದು ಸಂಶೋಧನೆ ಮಾಡಬೇಕು ಮತ್ತು ಖರ್ಚು ಯಾವ ರೀತಿ ನೀಗಿಸಬೇಕು ಎಂಬ ವಿಚಾರವನ್ನು ವಿವೇಚನೆಯಿಂದ ವಿಮರ್ಶೆ ಮಾಡಬೇಕು. ಇದಕ್ಕೆ ಮೊದಲನೆಯದಾಗಿ ಗ್ರಾಮಾಂತರ ಪರಿಶೀಲನಾ ಸಮಿತಿಯವರು ರೈತರಿಗೆ ಬೇಕಾದ ಸಾಲವನ್ನು ಕೊಟ್ಟು ಅವನ ಎಲ್ಲಾ ಖರ್ಚನ್ನೂ ನೀಗಿಸುವುದಕ್ಕೆ ಸಾಲದ ವ್ಯವಸ್ಥೆ ಹೇಗಿರಬೇಕು ಎಂದು ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಇಂಟಿಗ್ರೇಟೆಡ್ ಸ್ಕೀಂ, ಪ್ಲಾನ್ ಎಲ್ಲಾ ಇದೆ. ಇದೆಲ್ಲಾ ನೋಡಿದರೂ ಬೇಕಾದ ಹಣ ಸಾಕಷ್ಟು ಸಿಕ್ಕಿಲ್ಲ ಎಂದು ನನಗನಿಸುತ್ತದೆ. ಇದು ಸರ್ಕಾರದ ತಪ್ಪಲ್ಲ ಎಂದು ಕೆಲವು ಮಟ್ಟಿಗೆ ಕಂಡರೂ ಈ ಬಗ್ಗೆ ಸಂಶೋಧನೆ ಮಾಡಲು ಕಾರ್ಯಕ್ರಮ ಕೈಗೊಳ್ಳಬೇಕೆಂಬ ಧೋರಣೆ ಇದೆ. ಈಗ ಅನೇಕ ಕಡೆ ಬರಗಾಲವಿದೆ. ಮಳೆಯಾಗದೆ ಪೀಕು ಸರಿಯಾಗಿ ಬರದೆ ತಿರುಗಿ ಕೊಡುವ ಶಕ್ತಿ ಬರುವುದಿಲ್ಲ. ಜನರಿಗೆ ಅನೇಕ ತೊಂದರೆಗಳಿರುತ್ತವೆ. ಮನೆತನದ ಅವಶ್ಯಕ ಖರ್ಚುಗಳಿಗೆ ಸಹ ಹಣವಿರುವುದಿಲ್ಲ. ಹಾಗಿರುವಾಗ ಒಕ್ಕಲುತನಕ್ಕೆ ತೊಂದರೆಯಾಗುತ್ತದೆ. ಗ್ಯಾರಂಟಿಯಾದ ರಿಲೀಫ್‌ಗೆ ಹಿಂದೆಯೇ ಸರ್ಕಾರ ಕೆಲವು ಮಟ್ಟಿಗೆ ನಿಯಮ ರಚಿಸಿದ್ದರು. ಅದನ್ನಾದರೂ ಮುಂದುವರೆಸಿ ಹೆಚ್ಚು ಬೆಳೆಸಿ ತಕ್ಕ ವ್ಯವಸ್ಥೆ ಮಾಡಬೇಕು. ಹಿಂದೆ 4 ಲಕ್ಷ ರೂಪಾಯಿ ರಿಲೀಫ್ ಕೊಟ್ಟರು ಪ್ರತಿವರ್ಷ ಆ ಯೋಜನೆ ಪೂರ್ಣವಾಗಿ ಬೆಳೆಸಿದರೆ ರೈತರಿಗಿರುವ ಅನೇಕ ಕಷ್ಟಗಳು ನಿವಾರಣೆಯಾಗುತ್ತವೆ. ಇಲ್ಲದಿದ್ದರೆ ಸಾಲದ ತೊಂದರೆ ತಪ್ಪದೆ ವಾಪಸ್ಸು ಕೊಡುವುದಕ್ಕೂ ತೊಂದರೆಯಾಗುತ್ತದೆ, ಈಗ ಶೇಕಡ ನೂರರಷ್ಟು ಕೊಡಬೇಕೆಂದು ಇರುವುದನ್ನು ಜಾರಿಗೆ ತರುವ ಜವಾಬ್ದಾರಿ ಸರ್ಕಾರದ ಮೇಲಿದೆ. ಸರ್ಕಾರ ಎಷ್ಟೇ ರೀತಿಯಿಂದ ಪ್ರಯತ್ನ ಮಾಡಿದರೂ ಬಾಕಿ ಇರುವುದನ್ನು ಪೂರ್ಣವಾಗಿ ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಬರಗಾಲದ ಪ್ರದೇಶಗಳಲ್ಲಿ ಸರ್ಕಾರ ಅನೇಕ ರೀತಿಯಿಂದ ವಸೂಲಿ ಕ್ರಮ ಜೋರಾಗಿ ಮಾಡಿದರೂ ಕೂಡ ಒಂದೊಂದು ಜಿಲ್ಲೆಯಲ್ಲೂ 15 ಲಕ್ಷ ರೂಪಾಯಿ ವಸೂಲಾಗದೆ ಬಾಕಿ ನಿಂತಿದೆ. ಆರ್ಬಿಟ್ರೇಷನ್ ಸಹ ಮಾಡಿದ್ದಾರೆ. ಸಂಘಗಳಿಗೆ ಸದಸ್ಯರಾದವರಿಗೆ ತಿರುಗಿ ಕೊಡುತ್ತಾರೆಯೋ ವಿನಾ ಬೇರೆಯವರಿಗೆ ಕೊಡುವುದಿಲ್ಲ. ಕೊಟ್ಟವರಿಗೇ ಕೊಡುವ ವ್ಯವಸ್ಥೆಯಿದೆ. ಇದನ್ನು ವಿಮರ್ಶೆ ಮಾಡಿ ಯಾವ ರೀತಿ ವ್ಯವಸ್ಥೆ ಮಾಡಬೇಕೆಂಬುದನ್ನು ನಿರ್ಧರಿಸಬೇಕು.

ಎರಡನೆಯ ಮಾತು ಸಹಕಾರಿ ಆಂದೋಳನದಲ್ಲಿ ಸಾಲ ಮತ್ತು ಮಾರಾಟ ಜೋಡಣೆಯಾಗಿ ಒಕ್ಕಲುತನಕ್ಕೆ ಉಪಯೋಗವಾಗುವಂಥ ಒಂದು ಚಳುವಳಿ ಇದೆ. ಸಾಲ ಮತ್ತು ಮಾರಾಟ ಸಂಯೋಜನೆಯಾಗಿರಬೇಕು. ಸಾಲ ಬೆಳೆದ ಕೂಡಲೆ ತಿರುಗಿಕೊಡಲು ವ್ಯವಹಾರ ನಡೆಸಬೇಕು. ಈಗ ಕೋ ಆಪರೇಟಿವ್ ಮಾರ್ಕೆಟಿಂಗಿಗೆ ಮಹತ್ವವಿದೆ. ನಮ್ಮ ರಾಜ್ಯದಲ್ಲಿ 260 ಮಾರಾಟ ಸಂಘಗಳು ಕೆಲಸ ಮಾಡುತ್ತಿವೆ. ಅಲ್ಲಿ ಹಣ ದೋಚಿಕೊಂಡು ತಿಂದುಹಾಕಿದ್ದಾರೆಂದು ಪ್ರತಿ ಪಕ್ಷದ ಸದಸ್ಯರು ಹೇಳಿದರು. ಅದು ಎಲ್ಲಾ ಕಡೆಯೂ ಉಂಟು. ಆ ವಿಚಾರ ಪತ್ರಿಕೆಯಲ್ಲೂ ಬರುತ್ತಿದೆ. ಆಡಿಟ್ ಮಾಡುವಾಗ ಉತ್ತಮ ರೀತಿಯಿಂದ ಮಾಡಿದರೆ ಅಷ್ಟು ನ್ಯೂನತೆಗೆ ಅವಕಾಶವಾಗಲಾರದು. ಆದರೆ ಸಹಕಾರಿ ಖಾತೆಯನ್ನೇ ನ್ಯೂನತೆಗಳಿರುವುದರಿಂದ ಬಂದುಮಾಡಬೇಕೆಂದು ಹೇಳುವುದು ಸರಿಯಲ್ಲ. ಏಕೆ ನ್ಯೂನತೆ ಇದೆ, ಯಾವ ರೀತಿ ಅದನ್ನು ನಿವಾರಣೆ ಮಾಡಬಹುದು ಎಂಬುದಕ್ಕೆ ಸರಿಯಾದ ಸೂಚನೆ ಕೊಟ್ಟಿದ್ದರೆ ಅದನ್ನು ಒಪ್ಪಬಹುದಾಗಿತ್ತು. ಕಾಂಗ್ರೆಸ್ಸಿನವರೇ ಕೆಲವರು ದುರುಪಯೋಗ ಮಾಡುತ್ತಿದ್ದಾರೆಂದು ಹೇಳಿದರು. ಇತರರೂ ದುರುಪಯೋಗ ಮಾಡಿರುವುದಕ್ಕೆ ನೂರಾರು ಉದಾಹರಣೆಗಳನ್ನು ಹೇಳಬಹುದು. ಆದರೆ ಹಾಗೆ ಹೇಳುವುದರಿಂದ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಅದಕ್ಕೆ ಬದಲಾಗಿ ಒಳ್ಳೆಯ ಸೂಚನೆ ಕೊಟ್ಟರೆ ತೆಗೆದುಕೊಳ್ಳಬಹುದು. ತುಮಕೂರು ಜಿಲ್ಲೆಯಲ್ಲಿ ಎಲ್ಲೋ ಸಹಕಾರಿ ಖಾತೆಯಲ್ಲಿ ನ್ಯೂನತೆಯಿದೆ, ಆದುದರಿಂದ ಈ ಖಾತೆ ಇರುವುದೇ ಸರಿಯಲ್ಲ ಎಂದು ಹೇಳುವುದು ತಪ್ಪು. ಮೂರು ನಾಲ್ಕು ವರ್ಷಗಳಿಂದ ಎಷ್ಟೋ ಪ್ರಗತಿಯಾಗಿದೆ. ಆ ಖಾತೆಯಿಂದ ಸಾಕಾದಷ್ಟು ಗೊಬ್ಬರ, ಸಾಲ, ಬೀಜ ಮುಂತಾದ ಸಹಾಯ ದೊರೆಯುತ್ತಿದೆ, ಹಣ ತೆಗೆದುಕೊಂಡುದನ್ನು ವಾಪಸ್ಸು ಮಾಡಿದವರೂ ಇದ್ದಾರೆ. ಹಾಗಿರುವಾಗ ಎಷ್ಟೋ ಹಳ್ಳಿಗಳಲ್ಲಿ ಸೇವಾ ಸಹಕಾರ ಸಂಘಗಳು ಉತ್ತಮ ರೀತಿಯ ಸೇವೆ ಸಲ್ಲಿಸುತ್ತಿರುವಾಗ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವಕಾಶವಾಗಿದೆ. ಟೀಕೆ ಮಾಡುವುದಕ್ಕಿಂತ ಮಾಡಿದ ಕೆಲಸಕಾರ್ಯ ನೋಡಿ ಸರಿಯಾಗಿ ಮಾಡಿದೆಯೋ ಇಲ್ಲವೋ ಎಂದು ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬರಬೇಕು. ಕೋ ಆಪರೇಟಿವ್ ಮಾರ್ಕೆಟಿಂಗ್‌ನಲ್ಲಿ ಸುಧಾರಣೆಯಾಗಬೇಕಾದ್ದು ಅವಶ್ಯಕ. ರೈತರಿಗೆ ಸರಿಯಾದ ಬೆಲೆ ದೊರೆಯಬೇಕು. ಇದಕ್ಕೆ ತಜ್ಞರಾದ ಮಾರ್ಕೆಟಿಂಗ್ ಆಫೀಸರನ್ನು ನೇಮಕ ಮಾಡಬೇಕು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ದೇಶದಲ್ಲಿ ಅನೇಕ ಬಳಕೆದಾರರ ಸಂಘಗಳು ರಿಜಿಸ್ಟರಾಗಿವೆ. 11 ಹೋಲ್‌ಸೇಲ್ ಸೊಸೈಟಿಗಳು ದೇಶದಲ್ಲಿವೆ. ಜೀವನಕ್ಕೆ ಅವಶ್ಯಕವಾದ ಪದಾರ್ಥಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡಲು ಅವನ್ನು ಸ್ಥಾಪಿಸಲಾಗಿದೆ. ಅವುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವುದು ಅತ್ಯಾವಶ್ಯಕ. ಸರ್ಕಾರದವರು ಇವುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡದಿದ್ದರೆ ಬೇಕಾದ ಪದಾರ್ಥಗಳು ಯೋಗ್ಯ ಬೆಲೆಗೆ ದೊರೆಯದೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ; ದಳ್ಳಾಳಿಗಳು ಮುಂತಾದವರು ಬೆಲೆ ಹೆಚ್ಚಿಸಿ ಫಾಯಿದೆ ಪಡೆಯಲು ಅವಕಾಶವಾಗುತ್ತದೆ. ಈಗಾಗಲೆ ಇನ್ನೂರು ಬಳಕೆದಾರರ ಸಂಘಗಳು ರಿಜಿಸ್ಟರಾಗಿವೆ, ಅಲ್ಲಲ್ಲಿ ಪ್ರಾಥಮಿಕ ಸಂಘಗಳೂ ಇವೆ. ಅವುಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಅವು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು.

ಮೊದಲನೆಯದಾಗಿ ಬಳಕೆದಾರರ ಸಹಕಾರ ಸಂಘಗಳು ಪರದೇಶದಲ್ಲಿ ಯಾವ ರೀತಿ ಇವೆ ಎಂದರೆ ಇಂಗ್ಲೆಂಡಿನಲ್ಲಿ, ಸ್ವೀಡನ್ನಿನಲ್ಲಿ ಮತ್ತು ಇನ್ನೂ ಅನೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಎಷ್ಟು ಉತ್ತಮವಾಗಿ ಕೆಲಸ ಮಾಡುತ್ತಿವೆಯೋ ಅದರಂತೆ ಇಲ್ಲಿಯೂ ಕೂಡ ನಮ್ಮ ರಾಜ್ಯದಲ್ಲಿನ ಸಹಕಾರ ಸಂಸ್ಥೆಗಳು ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಇಷ್ಟು ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸುತ್ತೇನೆ.

Mr. SPEAKER —Before I call upon the next Hon'ble Member to speak I wish to inform the House that the Hon'ble Minister for Fisheries has arranged for the demonstration of some of the new projects relating to Fishery Industry in the Lobbies. Hon'ble Members can see the demonstration and I will also be coming.

[MR. SPEAKER in the Chair.]

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಸ್ವಾಮಿ, ಈ ದಿವಸ ನಮ್ಮ ಮುಂದೆ ಸಹಕಾರದ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ಯಗಳ ಬೇಡಿಕೆಗಳನ್ನು ಸಚಿವರು ಮಂಡಿಸಿರುವುದನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಸಹಕಾರ ಇಲಾಖೆ ಹೇಗಾಗಿದೆ ಎಂದರೆ ನನಗೆ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಕೆಲವರು ಒಂದು ವಿಷಯ ಹೇಳಿದ್ದರು ಅದು ಈಗ ನನಗೆ ಜ್ಞಾಪಕಕ್ಕೆ ಬರುತ್ತದೆ. ಅದು "If you have no money open a Bank." ಈಗ ಏನಾಗಿದೆ ಎಂದರೆ ಆ ಸಹಕಾರ ತತ್ವ

(ಶ್ರೀ ಸಿ. ಆರ್. ರಂಗೇಗೌಡ)

"If you have no money form a Society" ಎನ್ನುವಂತಾಗಿ. ವಾಸ್ತವವಾಗಿ ನಮ್ಮಲ್ಲಿರುವ ಪ್ರತಿಯೊಂದು ಹಳ್ಳಿಗಳಲ್ಲಿರುವ ಸೊಸೈಟಿಗಳು ಸಾಲಗಳನ್ನು ತೆಗೆದುಕೊಂಡು ಅದನ್ನು ಸದ್ವಿನಿಯೋಗ ಮಾಡಿಕೊಳ್ಳದೇ ಸಕಾಲದಲ್ಲಿ ಸರಕಾರಕ್ಕೆ ವಾಪಸ್ಸು ಕೊಡದೇ ಇರುವುದು ಈಚೆಗೆ ಜಾಸ್ತಿ ಯಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ ಸರಕಾರದವರು ಮಾಡಿರುವ ಆಕ್ಟನ್ನು ಎಂದರೆ Co-operative Act ನ್ನು ಈಗಿನ ಪರಿಸ್ಥಿತಿಗೆ ತಕ್ಕಂತೆ ಅಮೆಂಡ್‌ಮೆಂಟನ್ನು ತಂದು ಅದನ್ನು ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್ ಮಾಡದೇ ಇರುವುದು ಇದಕ್ಕೆ ಮೂಲ ಕಾರಣವಾಗಿದೆ. ಸರಕಾರ ಈಗಿನ ಕಾನೂನು ಪ್ರಕಾರ ಯಾರ ಮೇಲೂ ಶಿಸ್ತಿನ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಅವಕಾಶ ವಿಲ್ಲ. ಈಗ ಸರಕಾರದಲ್ಲಿರುವ ಕಾಂಗ್ರೆಸ್ಸು ಪಾರ್ಟಿಯವರೇ ಪರಿಪೂರ್ಣವಾಗಿ ಸಹಕಾರ ಸಂಸ್ಥೆ ಗಳನ್ನು ನಡೆಸುತ್ತಾರೆನ್ನುವ ಭಾವನೆ ಜನರಲ್ಲಿ ಬಂದಿದೆ. ಈಗ ಕೆಲವು ಕಡೆ ಕಾಂಗ್ರೆಸ್ಸು ಪಾರ್ಟಿ ಯಲ್ಲಿರುವವರು ಅಧ್ಯಕ್ಷರಾಗಿ ಬಂದು ಲಕ್ಷಾಂತರ ರೂಪಾಯಿಗಳಷ್ಟು ದುರುಪಯೋಗ ಮಾಡಿರು ವಂತಹ ಸಂಸ್ಥೆಗಳು ದೇಶದಲ್ಲಿವೆ. ಇಂತಹ ಸಂಸ್ಥೆಗಳ ಮೇಲೆ ಸರಕಾರಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಎಂಟು ವರ್ಷಗಳು ಬೇಕೇ ಎಂದು ನಾನು ಇಲ್ಲಿ ಒಂದು ಪ್ರಶ್ನೆ ಕೇಳಿದಾಗ ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಏಕೆಂದರೆ ಸರಕಾರಿ ಆಡಳಿತ ಪಕ್ಷದವರೊಬ್ಬರು ಅಧ್ಯಕ್ಷರಾಗಿದ್ದುದರಿಂದ ಅವರ ಮೇಲೆ ಏನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಇಂತಹ ನಿದರ್ಶನಗಳು ಬೇಕಾದಷ್ಟಿದೆ. ಚನ್ನಪಟ್ಟಣದಲ್ಲಿ ಒಂದು ಲ್ಯಾಂಡು ಮಾರ್ಟುಗೇಜು ಸೊಸೈಟಿಯಲ್ಲಿ ಕಾಂಗ್ರೆಸ್ಸು ಪಕ್ಷಕ್ಕೆ ಸೇರದೇ ಇರುವವರೊಬ್ಬರು ಅಧ್ಯಕ್ಷರಾಗಿದ್ದರು ಅವರು ಚೆನ್ನಾಗಿ ಕೆಲಸ ಮಾಡುತ್ತಾರೆಯೋ ಇಲ್ಲವೇ ಎನ್ನುವುದನ್ನು ತನಿಖೆ ಮಾಡಲು ಹತ್ತಾರು ಜನ ಅಧಿಕಾರಿಗಳನ್ನು ಹಾಕಿದರು. ಎಲ್ಲಿಯೂ ನಡೆಯದೇ ಇದ್ದ ಕೊ-ಆಪರೇಟಿವ್ ಸೆಕ್ಷನ್ 64ನ್ನು ಅನುಸರಿಸಿ ಒಬ್ಬ ಆಡಿಟರನ್ನು ಕಳುಹಿಸಿ ಅಲ್ಲಿನ ಲೆಕ್ಕವನ್ನು ಆಡಿಟ್ಟು ಮಾಡಿಸಿದರು. ಅದನ್ನು ಇನ್ನೂ ಪರಿಶೀಲನೆ ಮಾಡಬೇಕೆಂದು ಜಾಯಿಂಟು ರಿಜಿಸ್ಟ್ರಾರವರ ಮೂಲಕ ತನಿಖೆ ನಡೆಸುತ್ತಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇದನ್ನು ಸೂಪರ್ ಸೀಡು ಮಾಡಬೇಕೆಂದಿದ್ದಾರೆ ಎಂದು ಕೋರುತ್ತದೆ. ನನಗೆ ತಿಳಿದ ಮಟ್ಟಿಗೆ ದಕ್ಷತೆಯಿಂದ ನಿಷ್ಠೆಯಿಂದ ಕೆಲಸ ಮಾಡುತಿದ್ದರೂ ಇಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿ ಪರಿಶೀಲಿಸಬೇಕೆಂದು ಮಾಡಿರುವುದು ನೋಡಿದರೆ ಸೂಪರ್ ಸೀಡು ಮಾಡುವುದಕ್ಕಾಗಿಯೇ ಹೊರತು ಬೇರೆ ಏನೂ ಇಲ್ಲ. ಹಾಗೇ ಮಾಗಡಿಯಲ್ಲಿರುವ ಬೆಳಗುಂದಿ ಗ್ರಾಮಗಳಲ್ಲಿರುವ ಎಷ್ಟೋ ಸೊಸೈಟಿ ಗಳಲ್ಲಿ, ವ್ಯವಸಾಯಕ್ಕಾಗಿ ಅರಂಭ ಮಾಡಿದ ಸೊಸೈಟಿಗಳಲ್ಲಿ ಇವೊತ್ತಿನವರೆಗೆ ಒಂದಾದರೂ ಅಲ್ಲಿ ಕೆಲಸ ಮಾಡುತ್ತಿಲ್ಲ. ಎಂದು ನಾನು ಒಂದು ಪ್ರಶ್ನೆ ಕೇಳಿದಾಗ ಅವಕ್ಕೆ ಆರಂಭ ಮಾಡಿದ್ದೇವೆನ್ನುವ ಆಶ್ವಾಸನೆಯ ಉತ್ತರ ಕೊಟ್ಟಿದ್ದಾರೆ. 1952ನೇ ಇಸವಿಯಿಂದ 7-8 ಸೊಸೈಟಿಗಳನ್ನು ಪ್ರಾರಂಭ ಮಾಡಿ ಅದಕ್ಕಾಗಿ ಬೇಕಾದಷ್ಟು ಹಣ ಕೊಟ್ಟಿದ್ದಾರೆಂದು ಹೇಳುತ್ತಾರೆ. ಆದರೆ ಒಂದು ಸೊಸೈಟಿ ಯಾದರೂ ಅಲ್ಲಿಲ್ಲ. ಹಣ ಮಾತ್ರ ದುರುಪಯೋಗ ಮಾಡುತ್ತಿದ್ದರೆ ಅದರಿಂದ ಸಹಕಾರದ ಬೆಳವಣಿಗೆ ಮಾಡಿದಂತೆ ಆಗುತ್ತದೆಯೇ? ಸಹಕಾರ ಕ್ಷೇತ್ರಕ್ಕಾಗಿ ಕೊಡುವ ಹಣ ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಅಮೇಲೆ ರೈತರು ವ್ಯವಸಾಯ ಮಾಡಲು ಹಣ ತೆಗೆದುಕೊಂಡಿದ್ದಾರೆ ಇದರಿಂದಾಗಿ ಹೆಚ್ಚಿನ ರೈತರು ಈಗ ಸಾಲಗಾರರಾಗಿದ್ದಾರೆ. ಸೊಸೈಟಿಗಳಿಂದ ದುಡ್ಡು ಪಡೆದ ಕಾಲದಲ್ಲಿ ಕ್ಷಾಮ ಬರುವುದು ಸಕಾಲದಲ್ಲಿ ಮಳೆ ಬಾರದೇ ಇರುವುದು ಇಲ್ಲವೆ ಕಡಮೆ ಮಳೆ ಬರುವುದು. ಇದರಿಂದ ಸರಕಾರದವರು ಕೊಟ್ಟ ಹಣವನ್ನು ರೈತರು ಉಪಯೋಗಿಸಿಕೊಳ್ಳದೆ ಇರುವುದರಿಂದ ಸರಕಾರಕ್ಕೆ ವಾಪಸ್ಸು ಹಣ ಕೊಡುವುದಕ್ಕಾಗದೆ ರೈತರು ಸಾಲಗಾರರಾಗಿದ್ದಾರೆ. ಅಲ್ಲದೆ ಸರಕಾರದವರು ಕೊಟ್ಟ ಸಾಲದ ಹಣವನ್ನು ಶೇಕಡಾ ಆರೂಕಾಲು ರೇಟಿನ ಬಡ್ಡಿಯ ಮೇಲೆ ಕೊಟ್ಟಿರುತ್ತಾರೆ ಅದನ್ನು ವಾಪಸ್ಸು ಪಡೆಯಲು ಅಧಿಕಾರಿಗಳು ಸುಗ್ಗಿಯ ಕಾಲದಲ್ಲಿ ವಸೂಲಿಗೆ ಬರುತ್ತಾರೆ. ಆಗ ರೈತನ ದವಸಕ್ಕೆ ಹೆಚ್ಚಿನ ಬೆಲೆ ಸಿಗುವುದಿಲ್ಲ. ಆಗ ವಿಧಿ ಇಲ್ಲದೆ ಬೇರೆ ಯಾರ ಹತ್ತಿರವಾದರೂ ತಿಂಗಳೊಂದಕ್ಕೆ ಶೇಕಡಾ ಆರೂಕಾಲರಷ್ಟು ಬಡ್ಡಿಯಂತೆ ತೆಗೆದುಕೊಂಡು ಸರಕಾರಕ್ಕೆ ವಾಪಸ್ಸು ಕೊಡುತ್ತಾರೆ. ಕೆಲವು ರೈತರು ಸೊಸೈಟಿಯ ಸಾಲವನ್ನು ತೀರಿಸಿ ಕೆಲವರು ಕೊಡದೇಹೋದರೆ ಸೊಸೈಟಿ ಡಿಫಂಕ್ಟ್ ಆಗುತ್ತೆ. ಆಗ ಯಾರೋ ಒಬ್ಬರ ದೆಸೆಯಿಂದ ಡಿಫಂಕ್ಟ್ ಆದ ಸೊಸೈಟಿಯಿಂದ ನಿಷ್ಠೆಯಿಂದ ವಾಪಸ್ಸು ಸಾಲ ತೀರಿಸಿದ ರೈತರಿಗೆ ಸಕಾಲದಲ್ಲಿ ಸಾಲ ದೊರೆಯುವುದಿಲ್ಲ. ಹೀಗೆಲ್ಲ ಇರುವುದರಿಂದ ಸರಕಾರ ರೈತರ ಬವಣೆಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ.

ಜಾಯಿಂಟ್ ಫಾರ್ಮಿಂಗ್ ಕೋ-ಆಪರೇಟೀವ್ ಸೊಸೈಟಿಗಳ ವಿಷಯದಲ್ಲಿ ನಮ್ಮ ಮಂತ್ರಿಗಳು ಕೊಟ್ಟ ಅಂಕಿ ಅಂಶಗಳಂತೆ ಪ್ರಗತಿಯಾಗಿರುವುದು ನಾವು ಕಂಡ ಹಾಗೆ ಎಲ್ಲಿಯೂ ಕಾಣಲಿಲ್ಲ. ಇದು ಪ್ರಾರಂಭವಾಗಿದೆಯೋ ಇಲ್ಲವೋ ಹಾಗೇ ಇವೆಯೋ ಗೊತ್ತಾಗುತ್ತಿಲ್ಲ. ನಮ್ಮ ಭಾಗದಲ್ಲಿ ಇಂತಹ ಒಂದು ಪೈಲೇಟ್ ಪ್ರಾಜೆಕ್ಟ್ ನಡೆಯುತ್ತಿದೆ. ಇದನ್ನು ಅಲ್ಲಿರುವ ಅಧಿಕಾರಿಗಳು ಸ್ಥಳದಲ್ಲಿರುವವರೊಡನೆ ಸೇರಿಕೊಂಡು ಮಾಡುವುದು ಅವರ ಕರ್ತವ್ಯ. ಅದರಂತೆ ಕಾರ್ಯಗತ ಮಾಡಿದರೆ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಮುಂದೆ ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಕೆಲಸ ಮಾಡಬೇಕಾದರೆ ಸ್ಥಳೀಯ ಅಧಿಕಾರಿಗಳ ಸಹಕಾರದಿಂದ ಮಾಡಬೇಕಾದುದು ಅತ್ಯಾವಶ್ಯಕ. ಸ್ಥಳೀಯ ಅಧಿಕಾರಿಗಳು ಏನು ಟಾರ್ಗೆಟ್ಸ್ ನಿಗಧಿ ಮಾಡುತ್ತಾರೋ ಸರ್ಕಾರ ಕೊಟ್ಟ ಆರ್ಡರಿನಂತೆ ಪರಿಪಾಲಿಸಲೇ ಬೇಕು. ಶಾಸ್ತ್ರೀಯವಾದ ಕಾರ್ಯಕ್ರಮವನ್ನು ರೈತರು ಉಪಯೋಗಿಸದೇ ಇರುವುದರಿಂದ ಈ ಸೊಸೈಟಿಗಳು ಚೆನ್ನಾಗಿ ನಡೆಯದೇ ಇದುವರೆಗೂ ಯಾವ ಪ್ರಗತಿಯನ್ನೂ ಹೊಂದದೇ ಹಾಗೇ ನಿಂತಿವೆ. ಈಗ ಸ್ವಲ್ಪ ಮಟ್ಟಿಗೆ ಯಾವ ಯಾವ ಕೆಲಸಗಳು ಅಗ್ರಿಕಲಚರ್ ಡಿಪಾರ್ಟ್‌ಮೆಂಟಿನಲ್ಲಾಗಿವೆ ? ರಾಷ್ಟ್ರೀಯ ವಿಸ್ತರಣಾ ಯೋಜನೆಗಳಲ್ಲಿ ಏನೇನು ಆಗಿದೆ ಎನ್ನುವುದನ್ನು ತಿಳಿಸುವ ಮತ್ತು ಎಲ್ಲೆಲ್ಲಿ ಯಾವ ಗೃಹ ಕೈಗಾರಿಕೆಗಳನ್ನು ಮಾಡಬಹುದು ಎನ್ನುವ ಯಾವ ಮಾಹಿತಿಯನ್ನೂ ನಮಗೆ ಇಲ್ಲಿ ಒದಗಿಸಿ ಕೊಟ್ಟಿಲ್ಲ. ಮಂತ್ರಿಗಳೇನೋ ಬೇಕಾದ ಹಾಗೆ ಪ್ರವಾಸ ಮಾಡುತ್ತಾರೆ. ಎಲ್ಲೆಲ್ಲಿ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಯಶಸ್ವಿಯಾಗಿ ಕೆಲಸ ಮಾಡುತ್ತಿವೆ ಎನ್ನುವುದನ್ನು ಪ್ರವಾಸ ಮಾಡಿದಾಗ ನೋಡಿ ಅಲ್ಲಿನ ಜನತೆಗೆ ಸೂಕ್ತವಾದ ಸಲಹೆಗಳನ್ನು ಕೊಡಬೇಕು. ಅಲ್ಲದೇ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳ ಬಗ್ಗೆ ಸರಿಯಾದ ವಿವರಗಳನ್ನು ಜನಕ್ಕೆ ಧೈರ್ಯವಾಗಿ ಭಾಷಣ ಮಾಡುವಾಗ ಹೇಳಿದರೆ ಆಗ ಈ ಕೆಲಸ ಯಶಸ್ವಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಹಿಂದೆ ಶ್ರೀ ನಿಜಲಿಂಗಪ್ಪ ಕಮಿಟಿಯವರು ಜಾಯಿಂಟ್ ಫಾರ್ಮಿಂಗ್ ಸೊಸೈಟಿಯ ಬಗ್ಗೆ ಒಂದು ರಿಪೋರ್ಟನ್ನು ಕೊಟ್ಟಿದ್ದರು. ಅದರಂತೆ ಎಲ್ಲೆಲ್ಲಿ ಎಷ್ಟು ಆಹಾರ ಧಾನ್ಯಗಳನ್ನು ಬೆಳೆಯಬಹುದು ಎನ್ನುವುದರ ಜೊತೆಗೆ ಕಮರ್ಷಿಯಲ್ ಕ್ರಾಪ್ಸ್, ವೆಜಿಟಬಲ್ಸ್, ಫ್ರೂಟ್ಸ್‌ಗಳನ್ನು ಬೆಳೆಯಬಹುದು, ಮತ್ತು ಆಯಾ ಸ್ಥಳದಲ್ಲಿರುವ ರಾ ಮೆಟೀರಿಯಲ್ಸ್‌ಗಳನ್ನುಪಯೋಗಿಸಿಕೊಂಡು ಯಾವ ಗೃಹ ಕೈಗಾರಿಕೆಗಳನ್ನು ಮಾಡಬಹುದು ಅದನ್ನು ನೋಡಿಕೊಂಡು ಮಾಡಿದರೆ ಯಶಸ್ವಿಯಾಗುತ್ತದೆ ಎಂದು ಒಂದು ಸಂದರ್ಭದಲ್ಲಿ ಹೇಳಿದರು. ಇದರ ಕಡೆಗೂ ಸರ್ಕಾರ ತೀವ್ರ ಗಮನ ಕೊಡಬೇಕು. ನಮ್ಮ ಮಾಗಡಿ ತಾಲ್ಲೂಕಿನಲ್ಲಿ 368 ಹಳ್ಳಿಗಳಿವೆ. ಇಲ್ಲಿ 138 ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳೇ ಇಲ್ಲ. ಸರ್ಕಾರದವರು ಇದುವರೆಗೂ ಯಾವ ಕಾರ್ಯಕ್ರಮವನ್ನು ಇದರ ಬಗ್ಗೆ ಕೈಕೊಂಡಿಲ್ಲ. ಈ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ನಮ್ಮ ಬೆಂಗಳೂರಿಗೆ ಕುಡಿಯುವ ನೀರಿಗೆ ಸಹಾಯ ಮಾಡುತ್ತಿರುವ ಮಾಗಡಿ ತಾಲ್ಲೂಕಿನ ಜನರಿಗೆ ಕುಡಿಯಲು ನೀರಿಲ್ಲ. ಮಾಗಡಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡದೆ ನಿರ್ಲಕ್ಷಿಸುವುದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಗಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಾರೆ. ಬೇಕಾದಷ್ಟು ಖರ್ಚು ಮಾಡಿದರೂ ಅದಕ್ಕೆ ತಕ್ಕ ಪ್ರತಿಫಲ ಸರಿಯಾಗಿ ದೊರೆಯುತ್ತಿಲ್ಲ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಪ್ರೊಗ್ರೆಸ್ ಅಸಿಸ್ಟೆಂಟ್ ಎಂದು ನೇಮಿಸಿದ್ದರೂ ಅವರು ಅಲ್ಲಿಯೇ ಗುಮಾಸ್ತರಂತೆ ಕೆಲಸ ಮಾಡುತ್ತಿರುತ್ತಾರೆ. ಅವರು ಹೊರಗಡೆಗೆ ಹೋಗಿ ಹಳ್ಳಿಗಳಲ್ಲಿ ಏನೇನು ಕೆಲಸಗಳು ಎಷ್ಟು ಮಟ್ಟಿಗೆ ಆಗಿವೆ ಎಂದು ನೋಡುವುದಕ್ಕೂ ಅವಕಾಶ ಮಾಡಿ ಕೊಟ್ಟಿಲ್ಲ. ಅವರಿಗೆ ಅಲ್ಲಿರುವ ವಿಲೇಜು ಎಕ್ಸ್‌ಟೆನ್‌ಷನ್ ಆಫೀಸರವರು, ಡೆವಲಪ್‌ಮೆಂಟ್ ಆಫೀಸರವರೂ ಏನು ಒಂದು ಪಟ್ಟಿಯನ್ನು ಬೆಳೆ, ಮತ್ತಿತರ ವಿವರಗಳನ್ನು ಕೊಡುತ್ತಾರೋ ಅದರ ಪಟ್ಟಿ ಮಾಡಿ, ತಾಲ್ಲೂಕು ಕೇಂದ್ರಕ್ಕೆ ಹಾಗೇ ಅಲ್ಲಿಂದ ಜಿಲ್ಲಾ ಕೇಂದ್ರಕ್ಕೆ ಕಳುಹಿಸುವ ಲೆಕ್ಕಗಳೆಲ್ಲ ಸುಳ್ಳಾದ ಲೆಕ್ಕಗಳಾಗಿರುತ್ತವೆ. ಸರಿಯಾದ ಲೆಕ್ಕ ಕೊಡುತ್ತಿಲ್ಲ. ಹೀಗೆ ಮಾಡುವಂತಾಗಬಾರದು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ವಿಲೇಜು ಎಕ್ಸ್‌ಟೆನ್‌ಷನ್ ಆಫೀಸರು, ವಿಲೇಜು ಲೆವಲ್ ವರ್ಕರು, ತಾಲ್ಲೂಕುಗಳಲ್ಲಿ ಮಾಡಿರುವ ಪ್ರೋಗ್ರೆಸ್ಸನ್ನು ಯಾವ ಸಂದರ್ಭದಲ್ಲಾದರೂ ಅಧಿಕಾರಿಗಳು ಹೋಗಿ ಇದುವರೆಗೆ ತನಿಖೆ ಮಾಡಿದ್ದಾರೆಯೋ ಎಂದರೆ, ಏನೂ ಇಲ್ಲ. ನಾನು ಇದರ ಬಗ್ಗೆ 9-3-1964 ಒಂದು ಪ್ರಶ್ನೆಯನ್ನು ಇಲ್ಲಿ ಕೇಳಿದಾಗ ಸರ್ಕಾರ ಕೊಟ್ಟ ಒಂದು ಪಟ್ಟಿಯಂತೆ ವ್ಯವಸಾಯಕ್ಕಾಗಿ ಕಂಪೋಸ್ಟ್ ಪಿಟ್ಸ್‌ಗಳನ್ನು ಮಾಡಿರುವುದು 3621 ಎಂದು ಹೇಳಿದ್ದಾರೆ. ಹೀಗ ಬೇಕಾದಷ್ಟು ಐಟಂಗಳನ್ನು ಇದರಲ್ಲಿ ಹೇಳಿರುವುದು ಬರೀ ಸುಳ್ಳು ಲೆಕ್ಕ, ನಾನೇ ಅಲ್ಲಿಂದ ಬರುತ್ತಿರುವುದರಿಂದ ಇಂತಹ ಸುಳ್ಳು ಲೆಕ್ಕಗಳನ್ನು ಏಕೆ ಒದಗಿಸುತ್ತಾರೋ ಎಂದು ಬಹಳ ವ್ಯಥೆಯಿಂದ ಹೇಳಬೇಕಾಗಿದೆ.

ಹಾಗೆ ಇನ್ನು ರೂರಲ್ ಹೌಸಿಂಗ್ ಸ್ಕೀಂ ಎಂತ ಮಾಡಿದರು. ಅಲ್ಲಿ ಗುಡ್ಡಹಳ್ಳಿ ಎಂಬ ಬೋವಿ ಕಾಲೋನಿಯಲ್ಲಿ 61 ಮನೆಗಳಿಗೆ ಕೊಟ್ಟರು. ಆದರೆ ಒಂದು ಮನೆಯೂ ಇನ್ನೂ ತಯಾರಾಗಿಲ್ಲ.

(ಶ್ರೀ ಸಿ. ಆರ್. ರಂಗೇಗೌಡ)

ಅಲ್ಲಿ ಮನೆಕಟ್ಟುತಕ್ಕ ಹೆಂಚುಗಳು ಇತ್ಯಾದಿ ಸಾಮಾನುಗಳೂ ಕೂಡ ಇರುವುದಿಲ್ಲ. ಹೀಗಿರುವಾಗ ಅಲ್ಲಿ ದುಡ್ಡು ಹೇಗೆ ಖರ್ಚಾಯಿತೆಂಬುದೇ ತಿಳಿಯುದಂತಾಗಿದೆ. ಇದೇ ರೀತಿಯಲ್ಲಿ ಜೋಡುಕಟ್ಟೆ ಎಂಬ ಗ್ರಾಮದಲ್ಲಿ 41 ಮನೆಗಳಿಗೆ ದುಡ್ಡನ್ನು ಕೊಟ್ಟಿದ್ದಾರೆ. ಅಲ್ಲಿ ಪಾಯಾ ಸಹಿತ ಹಾಕಿಲ್ಲ. ಇದನ್ನೆಲ್ಲಾ ಸರ್ಕಾರದವರು ಕೂಡಲೇ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

2-00 P.M.

ಇನ್ನು ಪಂಚಾಯಿತಿಗಳ ವಿಚಾರಕ್ಕೆ ಬಂದರೆ, ಅಲ್ಲಿ ಅನೇಕ ಪ್ರೊಡಕ್ಷನ್ ಪ್ಲಾನ್‌ಗಳ ಹೆಸರನ್ನು ಹೇಳುತ್ತಾರೆ. ಆದರೆ ಯಾರೂ ಅವುಗಳನ್ನು ಉಪಯೋಗ ಮಾಡಿಕೊಂಡ ಹಾಗೆ ಕಾಣುತ್ತಿಲ್ಲ. ಇನ್ನು ಮುಂದಿನ ವರ್ಷ ಚುನಾವಣೆಗಳು ಬರಬಹುದು. ಅಲ್ಲಿ ಅವಿದ್ಯಾವಂತರಾಗಿರತಕ್ಕವರನ್ನು ಸದಸ್ಯರನ್ನಾಗಿ ಆರಿಸಿ ಅವರನ್ನು ಟ್ರೈನಿಂಗಿಗೆ ಕಳುಹಿಸಿದ್ದಾರೆ. ಇವರ ದುಡ್ಡನ್ನು ಖರ್ಚು ಮಾಡಿದ್ದರೂ ಅದನ್ನು ವಿತರಣೆಯಿಲ್ಲದೆ ವಿನಿಯೋಗ ಮಾಡಿದ್ದಾರೆ. ಅದರಿಂದ ದೇಶಕ್ಕೇನೂ ಪ್ರಯೋಜನವಾಗುವುದಿಲ್ಲ. ಇದನ್ನು ಹೀಗೆ ಕೈಬಿಟ್ಟರೆ ಮುಂದೆ ಇದನ್ನು ಸರಿಮಾಡುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಈಗಲೇ ಸರಿಯಾದ ಕಾರ್ಯ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಮಾತೆತ್ತಿದರೆ: ಡೆಮೊಕ್ರಟಿಕ್ ಡೀಸೆಂಟ್ರಲೈಸೇಷನ್ ಎಂದು ಹೇಳುತ್ತಿರುತ್ತಾರೆ. ಇದರ ಜೊತೆಗೆ ಕೊಂಡಜ್ಜಿ ಬಸಪ್ಪ ಸಮಿತಿಯ ವರದಿ ಬೇರೆ ಇದೆ. ಆದರೆ ಎಲ್ಲೆಲ್ಲಿ ಏನೇನು ಕೆಲಸಗಳಾಗಬೇಕು, ಎಷ್ಟು ದುಡ್ಡು ಖರ್ಚಾಗುತ್ತದೆ, ಎಂಬುದಕ್ಕೆಲ್ಲಾ ಒಂದು ಪಟ್ಟಿಯನ್ನು ಮಾಡಿ ಈ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತೇನೆ. ಆದರೆ ಈ ಯೋಜನೆಗಳ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಯಾರೋ ಆ ಡೆಲ್ಲಿಯಲ್ಲಿ ಕುಳಿತು ಏನೋ ಒಂದು ಪ್ಲಾನ್ ತಯಾರಿಸಿ ಅದನ್ನು ನಾವಿಲ್ಲಿ ಜಾರಿಮಾಡುವುದೆಂದರೆ ಇದು ಅರ್ಥವಿಲ್ಲದ ಮಾತು. ಇಲ್ಲಿಯ ಸನ್ನಿವೇಶವೇನು, ಇಲ್ಲಿ ಆಗಬೇಕಾದ ಕೆಲಸಗಳೇನು ಎಂಬುದನ್ನು ಆಲೋಚನೆ ಮಾಡುವುದು ಬೇಡವೆ? ಕಾಲಿಗೆ ಷೂ ಆಗದಿದ್ದರೆ ಕಾಲನ್ನು ಕತ್ತರಿಸಿ ಎಂದು ಹೇಳಿದ ಹಾಗೆ ಆಗುತ್ತದೆ. ಇವುಗಳನ್ನು ಆಯಾ ಸ್ಥಳಗಳಿಗೆ ಸಂಬಂಧಪಟ್ಟ ಹಾಗೆ ಮಾಡಬೇಕು. ಆದರೆ ಯಾವುದಕ್ಕೆ ದುಡ್ಡನ್ನು ಪ್ರಾಮುಖ್ಯವಾಗಿ ಖರ್ಚು ಮಾಡಬೇಕೋ ಅದಕ್ಕೆ ಮಾಡದೆ ರಿಕ್ರಿಯೇಷನ್ ಇಂಥ ಬಾಬುಗಳಿಗೆಲ್ಲಾ ಖರ್ಚು ಮಾಡುತ್ತಿದ್ದಾರೆ.

ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಗ್ರಾಮ ಕೈಗಾರಿಕಾ ಸೊಸೈಟಿಗಳನ್ನು ಮಾಡಿದ್ದಾರೆ. ಅನೇಕ ಸೊಸೈಟಿಗಳಿಗೆ ಹಣವನ್ನೇ ಕೊಟ್ಟಿಲ್ಲ, ಕೊಟ್ಟಿರತಕ್ಕ ಸೊಸೈಟಿ ಒಂದರಲ್ಲಿ ಲಾಸಾಗಿದೆ. ಅಷ್ಟೇ ಅಲ್ಲದೆ ಈಗ ಅದು ಡೀಫಂಕ್ಟ್ ಆಗಿದೆ. ಇದನ್ನು ಕೂಡಲೇ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗೋಡೌನುಗಳ ವಿಚಾರ: ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಒಂದು ಗೋಡೌನನ್ನಾದರೂ ಕಟ್ಟಿಲ್ಲ. ನಮ್ಮ ತಾಲ್ಲೂಕನ್ನು ಬಹಳ ಅಶ್ರದ್ಧೆಯಿಂದ ಕಾಣುತ್ತಿದ್ದಾರೆ. ಈ ತಾಲ್ಲೂಕನ್ನು ಬಹಳ ಅನಾದರಣೆ ಮಾಡಿದ್ದಾರೆ.

ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬಗ್ಗೆ ಹೇಳುವುದಾದರೆ: ಅಲ್ಲಿ ಒಬ್ಬ ಅಧಿಕಾರಿಗಳಿದ್ದಾರೆ. ಅವರಿಂದ ಏನೂ ಕೆಲಸವಾಗುತ್ತಿಲ್ಲ. ಅವರನ್ನು ಪೋಲೀಸ್ ಇಲಾಖೆಗಾದರೂ ಹಾಕಿದ್ದರೆ ಚೆನ್ನಾಗಿತ್ತು. ಅವರಿಗೆ ರೈತರ ಕಷ್ಟ ಸುಖಗಳೇನೆಂಬುದು ಗೊತ್ತಿಲ್ಲ ಅಲ್ಲಿಗೆ ಸರಿಯಾದ ಅಧಿಕಾರಿಗಳನ್ನು ನೇಮಿಸಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ಕೆಂಚಪ್ಪ (ಪಾವಗಡ).—ಮಾನ್ಯ ಅಧ್ಯಕ್ಷರೇ, ಈ ದಿವಸ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ಸರ್ಕಾರಕ್ಕೆ ಕೊಡ ಬಯಸುತ್ತೇನೆ. ಸ್ವಾಮಿ ನಮ್ಮ ದೇಶ ಗ್ರಾಮಗಳನೆಲವೀಡಾಗಿದೆ. ಒಂದು ಗ್ರಾಮದ ಅಥವಾ ಒಂದು ದೇಶದ ಪ್ರಗತಿ ಸಾಧಕವಾಗಬೇಕಾದರೆ—ಒಂದು ಗ್ರಾಮದ ಅಭಿವೃದ್ಧಿಯಾಗಬೇಕು. ಆ ಅಭಿವೃದ್ಧಿಗೆ ಆರ್ಥಿಕಾಭಿವೃದ್ಧಿಯೇ ಮೂಲ. ಆ ಒಂದು ಆರ್ಥಿಕ ಶಕ್ತಿಯಿಲ್ಲದೆ ಯಾವ ಗ್ರಾಮವೂ ಮುಂದುವರಿಯಲು ಸಾಧ್ಯವಿಲ್ಲ. ನಾವು ಈ ದಿವಸ ಹಲವಾರು ಗ್ರಾಮಗಳ ಅಂಕಿ ಅಂಶಗಳನ್ನು ತೆಗೆದುಕೊಂಡು ಇದನ್ನು ಪರಿಶೀಲನೆ ಮಾಡಬೇಕು. ಆರ್ಥಿಕ ದೆಶೆಯಲ್ಲಿ ಅನುಕೂಲವಾಗಿರತಕ್ಕ ಗ್ರಾಮಗಳು ಚೆನ್ನಾಗಿ ಅಭಿವೃದ್ಧಿ ಹೊಂದಿರುತ್ತವೆ. ಇನ್ನು ಆರ್ಥಿಕ ಸ್ಥಿತಿಯಲ್ಲಿ ಹಿಂದೆ ಬಿದ್ದಿರತಕ್ಕ ಗ್ರಾಮಗಳ ಅಭಿವೃದ್ಧಿ ಯಾವತ್ತೂ ಹಿಂದುಳಿದೇ ಇರುತ್ತದೆ. ಅಲ್ಲಿ ಇರತಕ್ಕ ಪಂಚಾಯಿತಿಗಳಿಗೆ ಸಾಕಷ್ಟು ವರಮಾನವಿರುವುದಿಲ್ಲ. ಆದ್ದರಿಂದ ಆ ಗ್ರಾಮದ ಅಭಿವೃದ್ಧಿಗೆ ಬೇಕಾಗಿರತಕ್ಕ ಕೆಲಸ

ಕಾರ್ಯಗಳನ್ನು ಅದು ನಡೆಸಲು ಸಾಧ್ಯವಿಲ್ಲದೆ ಅದು ಹಿಂದೆ ಬಿದ್ದಿರುತ್ತದೆ. ಹೀಗಾಗಿ ಕೆಲವು ಗ್ರಾಮಗಳಲ್ಲಿ—ರಸ್ತೆ, ಚರಂಡಿ, ಬಾವಿ ಇತ್ಯಾದಿಗಳ ಕೆಲಸ ಸಾಕಷ್ಟು ಮುಂದುವರಿದಿರುದಿಲ್ಲ. ಆದರೆ ನಾವು ಗ್ರಾಮಗಳಲ್ಲಿ ನಡೆಸಬೇಕಾಗಿರತಕ್ಕ ಕೆಲಸಗಳ ಬಗ್ಗೆ ಒಂದು ಅಂದಾಜನ್ನು ತಯಾರಿಸದೆ ಯಾವ ಕೆಲಸವನ್ನೂ ಮಾಡುವಂತಿಲ್ಲ. ಮಾಡಿದ್ದೇ ಆದರೆ ಅದಕ್ಕೆ ಆಡಿಟ್ ಅಬ್‌ಜಕ್ಷನ್ ಬರುತ್ತದೆ. ಈ ದೃಷ್ಟಿಯಿಂದ ನಾವು ಅಂದಾಜುಗಳನ್ನು ತಯಾರಿಸಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಿಗೆ ಕಳುಹಿಸಿ ಕೊಟ್ಟರೆ ಆ ರೆಕಾರ್ಡುಗಳು ತಿಂಗಳಾನು ಗಟ್ಟಲೆ ಹಿಂದಕ್ಕೆ ಬರುವುದಿಲ್ಲ. ಹೀಗಾಗಿ ಕೆಲಸಗಳು ವರ್ಷಾನುಗಟ್ಟಲೆ ನಿಂತುಹೋಗಿವೆ. ಕೇಳಿದರೆ ಅವರು ಅವರಿಗೆ ವಿರಾಮವಿಲ್ಲವೆಂದು ಹೇಳುತ್ತಾರೆ. ಇದು ನನ್ನ ಸ್ವಂತ ಅನುಭವದ ವಿಷಯ. ಈ ದೃಷ್ಟಿಯಿಂದ ನಾನು ಸಲಹೆ ಮಾಡುವುದೇನಂದರೆ ಈ ಗ್ರಾಮ ಪಂಚಾಯಿತಿಗಳಿಗೇ ಒಬ್ಬ ಸ್ಪೆಷಲ್ ಸೂಪರವೈಜರನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಅನುಕೂಲವಾಗುತ್ತದೆಂದು ನಾನು ಭಾವಿಸಿದ್ದೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆರ್. ಡಿ. ಮತ್ತು ಎಲ್. ಡಿ. ಯೋಜನೆಗಳನ್ನು ಕೈಗೊಂಡಿದ್ದಾರೆ. ಕೆಲವು ಬಾವಿಗಳ ಕೆಲಸ ಇಲ್ಲಿಗೆ 10-12 ವರ್ಷಗಳಿಂದಲೂ ಅವು ಪೂರ್ತಿಯಾಗದೆ ಹಾಗೇ ನಿಂತುಹೋಗಿವೆ. ಕೆಲವು ಬಾವಿಗಳಿಗೆ ಮಧ್ಯೆ ಬಂಡೆ ಸಿಕ್ಕಿದೆ, ಕೆಲವಕ್ಕೆ ಹಣದ ಅಭಾವ. ಹೀಗಾಗಿ ಕೆಲಸ ನಿಂತುಹೋಗಿದೆ. ಹೀಗೇ ಆ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಸ್ಕೀಮಿನಲ್ಲೂ ಕೆಲಸ ಬಹಳ ವರ್ಷಗಳಿಂದ ಹಾಗೆ ನಿಂತುಹೋಗಿದೆ. ಇದಕ್ಕೆ ಸರ್ಕಾರದವರು ಕೂಡಲೇ ನಿಗಾಕೊಡಬೇಕೆಂದು ಹೇಳುತ್ತೇನೆ. ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ. ವ್ಯವಸಾಯದ ಬಾವಿಗಳಿಂದ ನೀರನ್ನು ತರುತ್ತಿದ್ದಾರೆ. ಬಹಳ ಕಷ್ಟವಾಗಿದೆ. ಆದ್ದರಿಂದ ಈ ಗ್ರಾಮಗಳಿಗೆಲ್ಲಾ ಬೇಗ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರದ ವಿಚಾರಕ್ಕೆ ಬಂದರೆ: ಈ ತತ್ವವೇನೋ ಬಹಳ ಪ್ರಾಮುಖ್ಯವಾದದ್ದು. ಆದರೆ ಇದರಲ್ಲಿ ಸಹಕಾರ ಹೋಗಿ ಅಸಹಕಾರವೇ ಜಾಸ್ತಿಯಾಗಿದೆ.

ಇನ್ನು 1956-57 ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ರೂರಲ್ ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿಗಳನ್ನು ಸ್ಥಾಪನೆ ಮಾಡಿದರು. ಅನೇಕ ಬಡಬಗ್ಗರು ಸಾಲದೊರೆಯಬಹುದೆಂಬ ಆಸೆಯಿಂದ ಷೇರುಗಳನ್ನು ಹಾಕಿದರು. ಈ ದಿವಸದವರೆಗೂ ಒಬ್ಬರಿಗಾದರೂ ಸಾಲ ಸಿಕ್ಕಿಲ್ಲ. ಅವರ ಷೇರ್ ಹಣ ಕೂಡ ವಾಪಸ್ಸು ಬರುವಂತಿಲ್ಲ. ಜಮೀನಿದ್ದವರಿಗೆ ಮಾತ್ರ ಸಾಲ ಕೊಡಲಾಗುತ್ತದೆಂದು ಹೇಳುತ್ತಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟ ಇಲಾಖೆಯವರು ನಿಗಾಕೊಡಬೇಕು.

ಇನ್ನು ಈ ಸಹಕಾರ ಯೋಜನೆಯಲ್ಲಿ ಇರತಕ್ಕ ದೋಷಗಳೆಂದರೆ: ಹರಿಜನರಿಗೆ ಮನೆಗಳನ್ನು ಕಟ್ಟಿಸಿ ಕೊಡಲು, ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಗಳನ್ನು ಮಾಡಿದರು. ಅವುಗಳಿಗಿನ್ನೂ ಹಣವನ್ನೇ ಒದಗಿಸಿಲ್ಲ. ಷೇರ್ ಹಣ ಕೂಡ ವಾಪಸ್ಸು ಬರುವಂತಿಲ್ಲ. ಈ ಸೊಸೈಟಿಗಳಿಗೆ ಆದಷ್ಟು ಜಾಗ್ರತೆ ಹಣ ಕೊಟ್ಟು ಗೃಹ ನಿರ್ಮಾಣಕ್ಕೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೂರಲ್ ಹೌಸಿಂಗ್ ಬೋರ್ಡಿನವರು ಪ್ರಾರಂಭ ಮಾಡಿರತಕ್ಕ ಅನೇಕ ಮನೆಗಳು ಅರ್ಧಂಬರ್ಧವಾಗಿ ನಿಂತಿವೆ. ಅಪೂರ್ಣವಾಗಿವೆ. ಒಂದನೇ ಕಂತು ಹಣ ಪಾವತಿಯಾಗಿದೆ. ಎರಡನೇ ಮೂರನೇ ಕಂತು ಹಣ ಇನ್ನೂ ಪಾವತಿಯಾಗಬೇಕಾಗಿದೆ. ಅಂತಹ ಬಂಧನದಲ್ಲಿರುತ್ತಾರೆ, ಉದಾಹರಣೆಗೆ ಹೇಳುವುದಾದರೆ ನಮ್ಮ ಪಾವಗಡ ತಾಲ್ಲೂಕಿನ ಹೊಸಹಳ್ಳಿಯೊಳಗೆ 7-8 ಮನೆಗಳ ಕೆಲಸ ಅಸ್ತಿ ಭಾರದವರೆಗೂ ಆಗಿ ಈಗ ಹಣ ಸಾಕಷ್ಟು ಇಲ್ಲದೆ ನಿಂತುಹೋಗಿವೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಆದಷ್ಟು ಜಾಗ್ರತೆ ಹಣ ಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಇನ್ನು ಎನ್. ಇ. ಎಸ್. ಬ್ಲಾಕುಗಳಲ್ಲಿ ಎಕ್ಸ್‌ಟೆನ್‌ಷನ್ ಆಫೀಸರುಗಳು ಮಾಡುತ್ತಿರುವ ಕೆಲಸಗಳನ್ನು ನೋಡಿದರೆ ಅವರಿಗೆ ಕೆಲಸಗಳೇ ಅತಿವಿರಳ. ಯಾವಾಗಲೂ ಜೀಪು ತೆಗೆದುಕೊಂಡು ಪ್ರೊಗ್ರಾಂಗಳಲ್ಲಿ ಭಾಗವಹಿಸುತ್ತಿರುತ್ತಾರೆ. ಅಲ್ಲಿ ಇಲ್ಲಿ ಓಡಾಡುತ್ತಾ ಇರುತ್ತಾರೆ. ಪ್ರತ್ಯೇಕವಾಗಿ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಇವರು ಅಲ್ಲೆಲ್ಲಾ ಯಾವ ಕ್ರಮವನ್ನು ತೆಗೆದುಕೊಂಡಿದ್ದನ್ನು ನಾನು ನೋಡಿಲ್ಲ. ಅಂತಹವರಮೇಲೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ.

ಇನ್ನು ಮಹಿಳಾ ಮಂಡಲಿಗಳೆಂದು ರಚನೆಮಾಡಿದ್ದಾರೆ. ಇವರ ಕಾರ್ಯ ಕಲಾಪಗಳು, ಚಟುವಟಿಕೆಗಳು, ಪ್ರೋಗ್ರಾಂಗಳು ಯಾವುವು ಎಂಬುದೇ ಗೊತ್ತಾಗಲಿಲ್ಲ. ನಾವು ನೋಡುವುದಕ್ಕೂ ಸಾಧ್ಯವಿಲ್ಲ. ಈ ಮಂಡಲಿಗಳ ವಿಚಾರವಾಗಿ ಸರ್ಕಾರ ದೀರ್ಘವಾಗಿ ಆಲೋಚನೆಮಾಡಿ ಇಂತಹ ಅನಾವಶ್ಯಕವಾದ ಸಂಸ್ಥೆಗಳನ್ನು ಕೂಡಲೇ ತೆಗೆದು ಹಾಕುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ, ನಮ್ಮ ಮುಂದಿರತಕ್ಕ ಗ್ರಾಮಾಭಿವೃದ್ಧಿ ಸಹಕಾರ, ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಮತ್ತು ಇತರ ಬೇಡಿಕೆಗಳ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಈ ಇಲಾಖೆ ಬಹಳ ಟೀಕೆಗೊಳಗಾಗಿರತಕ್ಕ ಇಲಾಖೆ. ಸಹಕಾರ ಇಲಾಖೆ ಈ ದೇಶದಲ್ಲಿ ಜನತೆಯ ನೈತಿಕ ಮಟ್ಟವನ್ನು ಕೆಳಗೆ ಇಳಿಸತಕ್ಕ ಸನ್ನಿವೇಶಕ್ಕೆ ಹೋಗಿದೆ ಎಂದು ಹೇಳಬೇಕಾಗಿದೆ. ನಿರ್ವಿವಾದವಾಗಿ ಈ ಸಭೆಯಲ್ಲೂ ಮತ್ತು ಹೊರಗಡೆಯಲ್ಲೂ ಟೀಕೆಗೊಳಗಾಗಿರತಕ್ಕ ಇಲಾಖೆಯೆಂಬುದಾಗಿ ಒಪ್ಪಿಕೊಳ್ಳುವುದಾಗಿದೆ. ಈ ಇಲಾಖೆಯ ಉದ್ದೇಶವೇನಿದೆ ಅದು ಫಲಕಾರಿಯಾಗಬೇಕಾದರೆ, ರೈತನ ಆರ್ಥಿಕ ಪರಿಸ್ಥಿತಿ ಮತ್ತು ಸಂಘಗಳೇನಿವೆ ಅವು ಏನಾದರೂ ಸುಧಾರಣೆಯಾಗಬೇಕಾದರೆ ಈ ಇಲಾಖೆಯಿಂದ ಮಾತ್ರ ಸಾಧ್ಯವೆಂಬುದಾಗಿ ಒಂದು ನಿರ್ಧಾರಕ್ಕೆ ನಾವು ಬರಬೇಕಾಗಿದೆ. ಏಕೆಂದರೆ ಕೋ-ಆಪರೇಟಿವ್ ಇಲಾಖೆ ಬಿಟ್ಟರೆ ಹಳ್ಳಿಗಾಡಿನ ರೈತರ ಪರಿಸ್ಥಿತಿಯನ್ನು ಇನ್ನಾವ ಯೋಜನೆಯಿಂದಲೂ ಸುಧಾರಿಸಲು ಸಾಧ್ಯವಿಲ್ಲ. ಈ ಇಲಾಖೆಯ ಕೆಲಸ ಸರಿಯಾದ ರೀತಿಯಿಂದ ನಡೆಯುತ್ತಾ ಇಲ್ಲ. ನಾವು ಈ ಇಲಾಖೆಯ ಮೂಲಕ ಏನೊಂದು ಆಶೆಯನ್ನು ಇಟ್ಟುಕೊಂಡಿದ್ದೆವೋ ಆ ಮಟ್ಟದಲ್ಲಿ ಕೆಲಸ ಇಲ್ಲಿ ನಡೆಯುತ್ತಿಲ್ಲವೆಂಬ ಬಗ್ಗೆ ಸರ್ಕಾರದ ಗಮನವನ್ನು ಹರಿಸಬೇಕಾಗಿದೆ. ಇದಕ್ಕೆಲ್ಲಾ ಇವತ್ತು ರೈತನ ಆರ್ಥಿಕ ಸನ್ನಿವೇಶವೇ ಕಾರಣವೆಂದು ನಾನು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಇವತ್ತಿನ ದಿವಸ ನಾನು ಹೇಳುವುದಾದರೆ ರೈತನ ಆರ್ಥಿಕ ಪರಿಸ್ಥಿತಿ ನಿಜವಾಗಿಯೂ ಕೆಟ್ಟಿದೆ. ನಾವು ಅವನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕೆಂದು ಪ್ರತಿಸಲವೂ ಹೇಳುತ್ತಲೇ ಇದ್ದೇವೆ. ಸರ್ಕಾರದವರು ಎಷ್ಟು ರೀತಿಯಲ್ಲಿ ಅವನಿಗೆ ಸಾಲ ಕೊಟ್ಟರೂ ಅವನು ಮಾತ್ರ ಆ ಋಣಬಾಧೆಯಿಂದ ಹೊರಗೆ ಬರುವ ಸನ್ನಿವೇಶ ಕಂಡುಬರುತ್ತಾ ಇಲ್ಲ. ಅವನಿಗೆ short-term loan, long term loan, ಮಧ್ಯಮಾವರ್ತಿ ಸಾಲ, ಎಲ್.ಎಂ. ಮತ್ತು ಸಿ.ಎಂ. ಲೋನ್, ತಕಾವಿ ಸಾಲ,—ಹೀಗೆ ಒಂದಲ್ಲ 10-12 ರೀತಿ ಸಾಲಗಳನ್ನು ಕೊಡುತ್ತಿದ್ದಾರೆ. ರೈತನ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿದೆಯೇ ಎನ್ನುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕಾದರೆ ಬರೀ ಸಾಲಗಳನ್ನು ಅವರು ತೆಗೆದುಕೊಳ್ಳುವುದರಿಂದ ಅವರ ಪರಿಸ್ಥಿತಿ ಸುಧಾರಣೆಯಾಗಲಾರದು. Short-term loan ತೀರಿಸುವುದಕ್ಕೆ long-term loan ತೆಗೆದುಕೊಳ್ಳುತ್ತಾನೆ. ಇನ್ನು long-term loan ತೀರಿಸುವುದಕ್ಕೆ ಹೀಗೆ ಮತ್ತೊಂದು ಸಾಲವನ್ನು ಪಡೆಯುತ್ತಾನೆ. ಹೀಗೆ ಸಾಲಗಳನ್ನು ತೀರಿಸುವ ಯೋಚನೆಗಳಲ್ಲೇ ಇವನ ಪರಿಸ್ಥಿತಿ ನಡೆಯುತ್ತಾ ಇರುತ್ತದೆ. ನಾನು ಹೇಳುವುದಿಷ್ಟು. ರೈತನಾದವನು ಯಾವುದೇ ಸಾಲ ತೆಗೆದುಕೊಂಡರೂ ಶೇಕಡ 80 ರಷ್ಟು ಹಣ ಮಾತ್ರ ಇವನ ಕೈಗೆ ಬರುತ್ತದೆ. ಇನ್ನು ಉಳಿಕೆ ಹಣ ಶೇಕಡ 20 ರಷ್ಟು ಅಧಿಕಾರದಲ್ಲಿರತಕ್ಕವರಿಗೆ ಅನೀತಿಯುತ ವ್ಯವಹಾರದಿಂದ ಅವನ ಕೈಗೆ ಸರಿಯಾಗಿ ಸಿಕ್ಕುವುದಿಲ್ಲ. ಇವತ್ತು ರೈತನ ಆರ್ಥಿಕ ಪರಿಸ್ಥಿತಿಯನ್ನು ನಿಜವಾಗಿ ಉತ್ತಮಪಡಿಸಬೇಕಾದರೆ ಅವನನ್ನು ಋಣಬಾಧೆಯಿಂದ ಬಗೆಹರಿಸಬೇಕೆಂಬ ಉದ್ದೇಶವಿದ್ದರೆ, ಇವತ್ತು ಸರ್ಕಾರದವರು ಅವನಿಗೆ ಕೊಡುತ್ತಿರುವ ಈ 10-12 ವಿಧಗಳ ಸಾಲಗಳನ್ನು ತಡೆಗಟ್ಟಿ ರೂರಲ್ ಕ್ರೆಡಿಟ್ ಸರ್ವೆ ಮಾಡಿಸಿ ಹಳ್ಳಿಗಾಡಿನ ರೈತರುಗಳ ಮೇಲೆ ಎಷ್ಟೆಷ್ಟು ಸಾಲದ ಹೊರೆ ಇದೆ, ಸರ್ಕಾರದಿಂದ, ಖಾಸಗೀ ಸಾಹುಕಾರರಿಂದ, ಎಷ್ಟೆಷ್ಟು ಸಾಲವಿದೆ ಇವೆಲ್ಲವನ್ನೂ ಒಂದು ಸರ್ವೇ ಮಾಡಿಸಿ ಒಂದು ಫೈನಾನ್ಸ್ ಸ್ಕೀಮನ್ನು ಜಾರಿಗೆ ತಂದು ಇವತ್ತು ಅವನಿಗೆ ಇರತಕ್ಕ ಋಣಬಾಧೆಯನ್ನು ನಿವೃತ್ತಿ ಹೊಂದಿಸುವುದಕ್ಕೆ ಸರ್ಕಾರ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇವತ್ತು ರೈತನಿಗೆ ಆರ್ಥಿಕ ಸಹಾಯವನ್ನು ಕೊಡತಕ್ಕ ಸರ್ಕಾರವೇ ಅವನು ಸಾಲ ತೀರಿಸಲಾರದಷ್ಟು ಹಣವನ್ನು ಸಾಲದ ರೂಪವಾಗಿ ಕೊಟ್ಟು ಅವನ ಜಮೀನಿನ ಮಾಲೀಕತ್ವವನ್ನು ಕಸಿದು ಕೊಳ್ಳಲು ಪ್ರಯತ್ನ ಮಾಡಿದ ಹಾಗೆ ಆಗುತ್ತದೆ. ಸರ್ಕಾರದ ಭಾವನೆ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಬೇಕೆಂಬುದು ಇದ್ದರೂ ಅಂತಿಮವಾಗಿ ಪ್ರತ್ಯೇಕವಾಗಿ ಅವನ ಜಮೀನು ಮಾಲೀಕತ್ವವನ್ನು ಕಿತ್ತುಹಾಕುವುದಾಗಿದೆ. ಇದರಿಂದ ಸರ್ಕಾರವೇ ಸಾಲದ ರೂಪವಾಗಿ ರೈತನಿಗೆ ಹಣ ಕೊಟ್ಟು ಅವನಿರುವ ಜಮೀನನ್ನು ತೆಗೆದುಕೊಳ್ಳುವ ಸನ್ನಿವೇಶ ಬರುತ್ತದೆ. ಇದರಿಂದ ಅವನು ಆರ್ಥಿಕ ಪರಿಸ್ಥಿತಿಯಲ್ಲಿ ಯಾವ ಒಂದು ಗೊಂದಲದಲ್ಲಿ ಸಿಕ್ಕಿದ್ದಾನೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಇವತ್ತು ಇರತಕ್ಕ ಯೋಜನೆಗಳಿಂದ ಖಂಡಿತವಾಗಿ ರೈತನಿಗೆ ಫಲ ದೊರೆಯುವುದಿಲ್ಲವೆಂಬ ನನ್ನ ಸ್ವಂತ ಅಭಿಪ್ರಾಯವನ್ನು ತಿಳಿಸುತ್ತೇನೆ. ರೈತನಿಗೆ ಎಷ್ಟರವರೆಗೆ ಸಾಲವಿದೆಯೋ ಅಷ್ಟು ಸಾಲವನ್ನು ಸರ್ಕಾರವೇ ಅವನನ್ನು ಋಣಬಾಧೆಯಿಂದ ತೀರಿಸುವುದಕ್ಕೆ ಸಾಕಷ್ಟು ಗಮನ ಕೊಡುತ್ತಿಲ್ಲ. ಆದ್ದರಿಂದ ಸರ್ಕಾರದವರು ರೂರಲ್ ಕ್ರೆಡಿಟ್ ಸರ್ವೆ ಮಾಡಿಸುವುದು ಸೂಕ್ತವೆಂದು ಹೇಳಿ ಅದರ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ಹಾಕಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಸಹಕಾರ ಇಲಾಖೆಯೊಳಗೆ ಎಲ್ಲಾ ಪಕ್ಷಗಳೂ ಇರುತ್ತವೆ. ಆ ಪಾರ್ಟಿ ಬೇರೆ ಈ ಪಾರ್ಟಿ ಬೇರೆ ಎಂಬ ಭಾವನೆಯನ್ನು

ತರಕೂಡದು. ಕೆಲವರು ಹೆಚ್ಚು ಕೆಲವರು ಕಮ್ಮಿ ಎಂಬ ಭೇದಭಾವನೆಯನ್ನು ಅಲ್ಲಿ ತರಬಾರದು. ಇದರ ನೈತಿಕ ಮಟವನ್ನು ಪರಿಶೀಲನೆ ಮಾಡುವುದಾದರೆ ಎಲ್ಲರೂ ಸಮತಾವಾದ ಸಮಾಜದ ತತ್ವಗಳಿಗನುಗುಣವಾಗಿ ನಡೆಯಬೇಕಾಗುತ್ತದೆ. ಚನ್ನರಾಯಪಟ್ಟಣದ ಸೊಸೈಟಿಯಲ್ಲಿ ಯಾವರೀತಿ ಹಣ ದುರುಪಯೋಗವಾಗಿದೆಯೆಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿ ಬರುತ್ತದೆ. ಏತಕ್ಕೆ ಈ ಉದಾಹರಣೆಯನ್ನು ಹೇಳುತ್ತಿದ್ದೇನೆಂದರೆ ಇವತ್ತು ಅಲ್ಲಿನ ಆಡಳಿತ ವ್ಯವಸ್ಥೆ ಏನಿದೆ ಅದು ಬಿಗಿಯಾಗಿ ತರದೇ ಹೋದರೆ ಬಹಳ ತೊಂದರೆಯಾಗುತ್ತದೆ. ಏನಾದರೂ ಈ ಬಗ್ಗೆ ದೂರನ್ನು ಕೊಟ್ಟರೆ ಸಹಕಾರ ಇಲಾಖೆಯ ಮಂತ್ರಿಗಳೇ ತಮ್ಮ ಒಂದು ದೊಡ್ಡತನವನ್ನು ತೋರಿಸಬೇಕೆಂದು ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರ ಶಿಫಾರ್ಸು ಪ್ರಕಾರ ತಪ್ಪಿತಸ್ಥರ ಮೇಲೆ ಯಾವ ಒಂದು ಕ್ರಮ ತಗೆದುಕೊಳ್ಳುವುದಕ್ಕೆ ಆಗದೇ ಇರುವಂತಹ ದಾರಿ ಬರುವುದಕ್ಕೆ ಅವಕಾಶ ಮಾಡುತ್ತಾರೆ. ಜಿಲ್ಲಾ ಮಟ್ಟದಲ್ಲಿಯೂ ಯಾವುದಾದರೂ ಒಂದು ಸೊಸೈಟಿಯಲ್ಲಿ ಅಕ್ರಮ ನಡೆದರೆ ಅಲ್ಲಿನ ಅಧ್ಯಕ್ಷರ ಶಿಫಾರ್ಸು ಪ್ರಕಾರ ಯಾವುದೇ ರೀತಿಯಲ್ಲಿ ಸೊಸೈಟಿಯ ಮೇಲೆ ದೂರು ಬಂದರೂ ಇವರ ಸಂಸ್ಥೆಯ ನೈಪುಣ್ಯತೆಯನ್ನು ತೋರಿಸುವುದಕ್ಕೋಸ್ಕರ ಅದನ್ನು ಅಲ್ಲಿಗೆ ಬಿಟ್ಟುಬಿಡುತ್ತಾರೆ. ಮತ್ತು ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವ ರೀತಿಯಲ್ಲಿ ಸೊಸೈಟಿಯನ್ನು ಆರ್ಗನೈಜ ಮಾಡುತ್ತಿದ್ದೇವೆ ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ಈ ಇಲಾಖೆಯಿಂದ ಜನ ಏನು ಫಲವನ್ನು ನಿರೀಕ್ಷಣೆ ಮಾಡಿದ್ದರೋ ಆ ಫಲ ಜನರಿಗೆ ಸಾಕಷ್ಟು ದೊರೆಯದೆ ಇರುವುದಕ್ಕೆ ನಾಳೆ ಇವರೆ ಕಾರಣರಾಗುತ್ತಾರೆ

ಇನ್ನು ಎನ್.ಇ.ಎಸ್. ವಿಚಾರ. ಇದು ಒಂದು ಅಕಾಡವಿದ್ದ ಹಾಗೆ ಆಗಿದೆ. ತಾಲ್ಲೂಕು ಬೋರ್ಡುಗಳನ್ನು ರಚಿಸಿದ ಮೇಲೆ ಅಲ್ಲಿನ ಅಧಿಕಾರಿಗಳು ಮನಸ್ಸಿಗೆ ಬಂದ ಹಾಗೆ ವರ್ತಿಸುತ್ತಿದ್ದಾರೆ. ಅವರಿಗೂ ಮಂತ್ರಿಗಳಿಗೂ ದ್ವಂದ್ವ ಯುದ್ಧ ನಡೆಯುತ್ತಲೇ ಇರುತ್ತದೆ. ತಾಲ್ಲೂಕ್ ಬೋರ್ಡಿನ ಅಧ್ಯಕ್ಷರ ಆಶಾಕಾಂಕ್ಷೆಗಳನುಸಾರವಾಗಿ ಕೆಲಸಗಳು ಅಲ್ಲಿ ನಡೆಯದೇ ಹೋದರೆ ಅಲ್ಲಿ ಯಾರೂ ಯಾವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ.

ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಈಗ ಉದಾಹರಣೆಗೆ ಹೇಳುವುದಾದರೆ ಹಾಸನ ಜಿಲ್ಲೆಯ ಒಂದೆರಡು ಪ್ರಕರಣಗಳನ್ನು ತಗೆದುಕೊಂಡು ನೋಡುವುದಾದರೆ ಹಾಸನದಲ್ಲಿ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಪೋಸ್ಟ್ ಮಾಡಿ ಎರಡು ತಿಂಗಳಾಗಿತ್ತು. ಅಂಥವರನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಸರ್ಕಾರದ ಪಾಲಿಸಿಯ ಪ್ರಕಾರ ಯಾರಾದರೂ ಒಬ್ಬ ಸರ್ಕಾರಿ ಅಧಿಕಾರಿಯನ್ನು ಒಂದ ಕಡೆಯಿಂದ ಇನ್ನೊಂದುಕಡೆಗೆ ಟ್ರಾನ್ಸ್‌ಫರ್ ಮಾಡಬೇಕಾದರೆ ಆ ಅಧಿಕಾರಿಯು ಆ ಸ್ಥಳದಲ್ಲಿ ಕೊನೆಯ ಪಕ್ಷ 3 ವರ್ಷ ಅಥವಾ 5 ವರ್ಷವಾದರೂ ಕೆಲಸಮಾಡಿರಬೇಕೆಂದಿದೆ. ಹೀಗಿದ್ದರೂ ಕೂಡ ಹಾಸನದಲ್ಲಿ ಆ ಅಧಿಕಾರಿಯನ್ನು ಪೋಸ್ಟ್ ಮಾಡಿದ ಎರಡು ತಿಂಗಳೊಳಗೇ ಏತಕ್ಕೆ ಟ್ರಾನ್ಸ್‌ಫರ್ ಮಾಡಿದರು ಎಂಬುದರ ಕಡೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು. ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನು, ಸರ್ಕಾರದ ನೀತಿ ಏನು ಎಂದು ನಾನು ಕೇಳಬೇಕಾಗಿದೆ. ಇವೊತ್ತಿನ ದಿವಸ ಅಧಿಕಾರಿಗಳು ರಾಜಕೀಯ ದೃಷ್ಟಿಯಿಂದ ಕೆಲಸ ಮಾಡುವುದಾದರೆ ಗೌರವ ಬರುವುದಿಲ್ಲ. ಇವೊತ್ತು ನ್ಯಾಯ ರೀತಿಯಿಂದ ನಡೆಯತಕ್ಕ ಅಧಿಕಾರಿಗಳಿಗೆ ಸರ್ಕಾರದವರು ರಕ್ಷಣೆಯನ್ನು ಕೊಡಬೇಕು. ಅವರನ್ನು ರಾಜಕೀಯದ ಒಂದು ಗುಂಪನ್ನು ಬೆಳೆಸುವುದಕ್ಕೆ ಉಪಯೋಗಿಸತಕ್ಕದ್ದು ಸರ್ವಥಾ ತಪ್ಪು. ತಾವು ಇವೊತ್ತು ಮೇಲಿನ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ನೋಡಿದರೆ ತಮಗೆ ಎಲ್ಲವೂ ಗೊತ್ತಾಗುತ್ತದೆ. ತಾಲ್ಲೂಕುಬೋರ್ಡಿನಲ್ಲಿರತಕ್ಕ 19 ಜನ ಸದಸ್ಯರುಗಳ ಪೈಕಿ 17 ಜನ ಸದಸ್ಯರುಗಳೂ ಕೂಡ ಆ ಅಧಿಕಾರಿ ಇರಬೇಕೆಂದು ಹೇಳುತ್ತಾರೆ. ಅಂಥವರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ನಿಜವಾಗಿಯೂ ಕೂಡ ನಿಷ್ಠಾವಂತರಾದ ಅಧಿಕಾರಿಗಳು ನಮ್ಮಲ್ಲಿ ಏನಿದ್ದಾರೆಯೋ ಅವರಿಗೆ ಸರ್ಕಾರದವರು ಸಹಾಯಮಾಡದೇ ಹೋದರೆ, ಪಕ್ಷದ ದೃಷ್ಟಿಯಿಂದ ಕೆಲಸ ಮಾಡುವುದಾದರೆ ಎನ್.ಇ.ಎಸ್. ಯೋಜನೆಯಲ್ಲಿ ನಿಷ್ಠೆಯಿಂದ ಕೆಲಸ ಮಾಡುವುದು ಕಷ್ಟವಾಗುತ್ತದೆ. ಇವೊತ್ತು ಎನ್.ಇ.ಎಸ್. ತಾಲ್ಲೂಕ್ ಬೋರ್ಡು ಮತ್ತು ಪಂಚಾಯತಿ ಇವುಗಳನ್ನು ಸರ್ಕಾರದವರು ಏನು ರಚನೆ ಮಾಡಿದ್ದಾರೆಯೋ ಅವುಗಳಿಂದ ಏನಾದರೂ ಜನತೆಯ ಅಭಿವೃದ್ಧಿಯ ಕಾರ್ಯ ನಡೆಯುತ್ತದೆಯೇ ಎಂಬುದನ್ನು ಯೋಚನೆ ಮಾಡುವುದಾದರೆ ಅದರಲ್ಲಿ ನಿರೀಕ್ಷಿದಷ್ಟು ಕೆಲಸವಾಗುತ್ತಿಲ್ಲ ಎಂದು ಹೇಳಬೇಕಾಗಿದೆ. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಎಕನಾಮಿ ಅಂಡ್ ರಿಸೋರ್ಸಸ್ ಕಮಿಟಿಯ ರಿಪೋರ್ಟಿನಲ್ಲಿ ಒಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಈ ರೀತಿ ಇದೆ. ಈ ಎನ್.ಇ.ಎಸ್. ಯೋಜನೆಯ ಬಗ್ಗೆ 1956ನೇ ಇಸವಿಯಲ್ಲಿ ಪಬ್ಲಿಕ್ ಕೋಆಪರೇಷನ್ 40.8 ಪರ್ಸೆಂಟ್ ಇತ್ತು. ಅದು ಈಗ 28.4 ಪರ್ಸೆಂಟಿಗೆ ರೆಡ್ಯೂಸ್ ಆಗಿದೆ ಎಂದು ಅವರಲ್ಲಿ ವಿವರಿಸಿದ್ದಾರೆ. ಎನ್.ಇ.ಎಸ್. ಯೋಜನೆ ಪ್ರಾರಂಭವಾದಾಗ ಇದರ ಬಗ್ಗೆ ಜನತೆಗೆ ಹೆಚ್ಚಿನ ಒಂದು ಆಕಾಂಕ್ಷೆ

(ಶ್ರೀ ಹೆಚ್. ಡಿ. ದೇವೇಗೌಡ)

ಇತ್ತು. ಆದರೆ ಇವೊತ್ತು ಅದರ ಬಗ್ಗೆ ಜನತೆಯ ಸಹಕಾರ ಕ್ಷೀಣವಾಗುತ್ತಿದೆ. ಎನ್.ಇ.ಎಸ್. ಯೋಜನೆಯ ಬಗ್ಗೆ ಜನತೆಯ ಸಹಕಾರವಿಲ್ಲ ಎಂದು ರಿಜರ್ವ್ ಬ್ಯಾಂಕಿನವರ ವರದಿಯ ಆಧಾರದ ಮೇಲೆ ನಾವು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವೊತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಜನತೆ ಏನು ನಿರೀಕ್ಷಣೆ ಮಾಡಿದ್ದರೋ ಅದು ದೊರೆಯುತ್ತಾ ಇಲ್ಲ. ಎನ್.ಇ.ಎಸ್. ಯೋಜನೆಯ ಸಂಬಂಧದಲ್ಲಿ ಈಗ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರೆಂದು ಏನು ಇದ್ದಾರೆಯೋ ಇವರು ಬರುವುದಕ್ಕಿಂತ ಮುಂಚೆ ಅಗ್ರಿಕಲ್ಚರಲ್ ಆಫೀಸರೆಂದು ಏನು ಕೆಲಸ ಮಾಡುತ್ತಿದ್ದರೋ ಅವರು ಎಷ್ಟು ಕೆಲಸವನ್ನು ಮಾಡುತ್ತಿದ್ದರು ಅಷ್ಟು ಕೆಲಸವನ್ನೂ ಇವರು ಮಾಡುತ್ತಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರು ಎಲ್ಲಿಗೆ ಹೋಗಬೇಕಾದರೂ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಎಲ್ಲಿಗೆ ಹೋಗಬೇಕಾದರೂ ಜೀಪು ಇಲ್ಲದೆ ಹೋಗುವ ಹಾಗಿಲ್ಲ. ಜೀಪು ಕೊಟ್ಟಿರುವುದು ವಿಸ್ತರಣಾ ಅಧಿಕಾರಿಗಳು ಚೆನ್ನಾಗಿ ಕೆಲಸಮಾಡಲಿ ಎಂದು. ಈ ವಿಸ್ತರಣಾ ಅಧಿಕಾರಿಗಳು ಬಂದ ಮೇಲೆ ವ್ಯವಸಾಯದ ಉತ್ಪತ್ತಿ ಕಡಮೆಯಾಗಿದೆಯೇ ಹೊರತು, ಇವರು ವ್ಯವಸಾಯದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ರಾಷ್ಟ್ರೀಯ ವಿಸ್ತರಣಾ ಅಧಿಕಾರಿಗಳಿಗೆ ಸರ್ಕಾರದವರು ಸವಲತ್ತನ್ನು ಕೊಟ್ಟಿರುವುದು ಜನತಾ ದೃಷ್ಟಿಯಿಂದ ಒಳ್ಳೆಯ ಕೆಲಸವನ್ನು ಮಾಡಲಿ ಎಂದು. ಆದರೆ ಆ ಅಧಿಕಾರಿಗಳು ಸರ್ಕಾರದವರು ಕೊಟ್ಟಿರತಕ್ಕ ಸವಲತ್ತನ್ನು ದುರುಪಯೋಗ ಮಾಡಿಕೊಂಡು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮುಖಾಂತರ ವ್ಯವಸಾಯ ಅಭಿವೃದ್ಧಿಯು ಎಷ್ಟರಮಟ್ಟಿಗೆ ಆಗಬೇಕಾಗಿತ್ತೋ ಅಷ್ಟರಮಟ್ಟಿಗೆ ಸಾಧನೆಯಾಗಿಲ್ಲ ಎನ್ನುವ ಘೋಷಣೆ ನಮ್ಮ ರಾಜ್ಯದಲ್ಲಿ ಎದ್ದಿದೆ. ರೈತನಿಗೆ ವ್ಯವಸಾಯಕ್ಕೆ ಬೇಕಾದ ಬೀಜ ವಗ್ಯೆರೆಗಳು ಸರಿಯಾಗಿ ದೊರೆಯುವ ವ್ಯವಸ್ಥೆ ಇಲ್ಲ. ಈ ಅಗ್ರಿಕಲ್ಚರಲ್ ಇಲಾಖೆಯಲ್ಲಿ ಬಹಳ ಲೋಪದೋಷಗಳಿವೆ. ಆದ್ದರಿಂದ ಆ ಕಡೆ ಸರ್ಕಾರದವರ ಗಮನ ಹರಿಯಬೇಕು. ರೈತನಿಗೆ ಬೇಕಾದ ಬೀಜ, ಗೊಬ್ಬರ ಇತ್ಯಾದಿಗಳನ್ನು ಅವನಿಗೆ ಕಾಲಕ್ಕೆ ಸರಿಯಾಗಿ ಒದಗಿಸದೇ ಹೋದರೆ ಬಹಳ ಕಷ್ಟವಾಗುತ್ತದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಜನತೆಗೆ ಸಾಕಷ್ಟು ಪ್ರತಿಫಲ ದೊರೆಯುವುದಿಲ್ಲ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ರೂರಲ್ ಬ್ಯಾಂಕಿಂಗ್ ಯೋಜನೆ ಎಂದು ಒಂದು ಯೋಜನೆಯನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದರೆ ಅದನ್ನು ಕಾರ್ಯಗತ ಮಾಡತಕ್ಕಂಥ ಪ್ರೊಸೀಜರುಗಳು ಏನಿವೆ ಅದರಲ್ಲಿ ಕೆಲವು ತೊಡಕುಗಳು ಇವೆ. ಇದರಿಂದ ನಿಷ್ಕಾಮಮಂತರಾದ ಅಧಿಕಾರಿಗಳಿಗೆ ತೊಂದರೆಯಾಗತಕ್ಕ ಸಂಭವ ಇದೆ. ಮತ್ತು ದುಡ್ಡನ್ನು ದುರುಪಯೋಗ ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಪ್ರೊಸೀಜರ್ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಕನ್‌ಸ್ಯೂಮರ್ ಕೋ-ಆಪರೇಟೀವ್ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸುಮಾರು 9 ಸೊಸೈಟಿಗಳಿವೆ. ಈ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಸರ್ಕಾರದವರು ಈ ಕಡೆ ಸ್ವಲ್ಪ ಗಮನವನ್ನು ಹರಿಸಬೇಕು. ಆ ಸೊಸೈಟಿಗಳ ಹೆಸರುಗಳು ಬೇಕಾದರೆ ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಈ ಇಲಾಖೆಯಲ್ಲಿ ನುರಿತವರಾಗಿದ್ದರೂ ಕೂಡ ಈ ಇಲಾಖೆಯಲ್ಲಿ ಹೆಚ್ಚಿನ ಕಾರ್ಯವನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸಿದ್ದಯ್ಯ (ಬನ್ನೂರು).—ಮಾನ್ಯ ಸಭಾಪತಿಯವರೇ ಈ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ನಾನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ಈಗ ನಾನು ಸಹಕಾರ ಇಲಾಖೆಯ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ವಿರೋಧ ಪಕ್ಷದವರು ಯಾವಾಗಲೂ ವಿರೋಧ ಮಾಡುವುದು ಅವರಿಗೆ ಸ್ವಾಭಾವಿಕವಾಗಿ ಬಂದಿದೆ, ಅದು ನ್ಯಾಯವಲ್ಲ, ಅದು ಸರಿಯಾದ ರೀತಿಯಲ್ಲ ಎಂದು ಶ್ರೀಮಾನ್ ಪಾಟೀಲ್ ಅವರು ಹೇಳಿದರು. ನಾನು ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ ಸಾರ್ವಜನಿಕರ ಹಣ ದುರುಪಯೋಗವಾಗಿದ್ದರೆ ಅದಕ್ಕೆ ಸಂಬಂಧಪಟ್ಟವರು ಯಾವ ಪಕ್ಷದವರೇ ಆಗಿದ್ದರೂ ಕೂಡ ಅವರಿಗೆ ಶಿಕ್ಷೆಯನ್ನು ಮಾಡಬೇಕು. ಈಗ ನಮ್ಮ ದೇಶದಲ್ಲಿ ಅನೇಕ ಸೊಸೈಟಿಗಳಿವೆ. ಯಾವ ಸೊಸೈಟಿಯಲ್ಲೇ ಆಗಲಿ ಯಾರಾದರೂ ಹಣವನ್ನು ತಿಂದಿದ್ದರೆ, ಅವರು ಯಾವ ಪಕ್ಷಕ್ಕೇ ಸೇರಿರಲಿ ಅವರಿಗೆ ಶಿಕ್ಷೆಯನ್ನು ಮಾಡಬೇಕು ಮತ್ತು ಅವರಿಂದ ಹಣವನ್ನು ವಸೂಲು ಮಾಡಬೇಕು.

ಇನ್ನು ಎರಡನೆಯದಾಗಿ ಸಹಕಾರ ಸಂಘಗಳಲ್ಲಿ ಸದಸ್ಯರಾಗಬೇಕಾದರೆ ಅವರಿಗೆ ಏನೇನು ಅರ್ಹತೆಗಳು ಇರಬೇಕು ಎಂದರೆ ಅವರಿಗೆ ಇಪ್ಪತ್ತೆರಡು ವರ್ಷ ವಯಸ್ಸಾಗಿರಬೇಕು. ಮತ್ತು ಅವರಿಗೆ ಕ್ರಿಮಿನಲ್‌ನಲ್ಲಿ ಯಾವ ಕೋರ್ಟಿನಲ್ಲೂ ಶಿಕ್ಷೆಯಾಗಿರಬಾರದು. ಅಂಥವರು ಮಾತ್ರ ಸೊಸೈಟಿಯಲ್ಲಿ ಸದಸ್ಯರಾಗಬೇಕು ಎಂದು ಇದೆ. ಆಮೇಲೆ ಆಯಾಯ ಸೊಸೈಟಿಯ ಡೈರೆಕ್ಟರುಗಳು ಸದಸ್ಯರಾಗಬೇಕೆಂದು ಹಾಕಿಕೊಂಡಿರತಕ್ಕ ಅರ್ಜಿಗಳನ್ನು ಅನುಮೋದಿಸಿದರೆ ಸದಸ್ಯರಾಗುತ್ತಾರೆ. ಒಂದು ವೇಳೆ ಅವರೇನಾದರೂ ಆ ಅರ್ಜಿಯನ್ನು ರಿಜೆಕ್ಟ್ ಮಾಡಿದರೆ ಅವರು ಸದಸ್ಯರಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಕೆಲವು ಸೊಸೈಟಿಗಳಿಗೆ ಸದಸ್ಯರಾಗುವುದಕ್ಕೆ ಅರ್ಜಿಗಳನ್ನು ಹಾಕಿ ಎಷ್ಟು ದಿವಸಗಳಾದರೂ ಅವು ಇತ್ಯರ್ಥವಾಗದೇ ಹಾಗೆಯೇ ಇವೆ. ಇಷ್ಟೇ ದಿವಸಗಳಲ್ಲಿ ಆ ಅರ್ಜಿಗಳು ಇತ್ಯರ್ಥವಾಗಬೇಕು ಎನ್ನುವ ಬಗ್ಗೆ ನಮ್ಮ ಸರ್ಕಾರದವರು ಒಂದು ಅಮೆಂಡ್‌ಮೆಂಟನ್ನು ಮಾಡಬೇಕು.

ಒಬ್ಬ ಸದಸ್ಯರು.—ಆ ರೀತಿ ಸರ್ಕಾರಕ್ಕೆ ಒಂದು ಅಪೀಲು ಮಾಡಿ.

ಶ್ರೀ ಎಸ್. ಸಿದ್ದಯ್ಯ.—ಟೀ ನರಸೀಪುರದ ತಾಲ್ಲೂಕಿನಲ್ಲಿರುವ ಹತ್ತಳ್ಳಿ ಕೋ ಆಪರೇಟಿವ್ ಸೊಸೈಟಿ ವಿಷಯದಲ್ಲಿ ಸರ್ಕಾರಕ್ಕೆ ಅಪೀಲುಮಾಡಿ ಸುಮಾರು ಒಂದೂವರೆ ವರ್ಷವಾಯಿತು. 1960ನೇ ಇಸವಿಯಿಂದಲೂ ಕೂಡ ಆ ಸೊಸೈಟಿಗೆ ಹೊಸ ಸದಸ್ಯರನ್ನು ತೆಗೆದುಕೊಂಡಿಲ್ಲ. ಆ ಸೊಸೈಟಿ ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಇಲಾಖೆಗೆ ಅರ್ಜಿಯನ್ನು ಕೊಟ್ಟಮೇಲೆ ಅದನ್ನು ಸೂಪರ್ ಸೀಡ್ ಮಾಡಿದರು. ಆದರೆ ಈಗ ರಿಜಿಸ್ಟ್ರಾರ್ ಆಗಿದ್ದ ಶ್ರೀಮಾನ್ ಮರುವೇವೇಗೌಡರು ಹೋಗುವಾಗ ಅದನ್ನು ಕ್ಯಾನ್ಸಲ್ ಮಾಡಿದರು. ಆ ನಂತರ ಈಗ ಕೋ ಆಪರೇಟಿವ್ ಶಾಖೆಯ ಉಪಮಂತ್ರಿಗಳಾಗಿರತಕ್ಕ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರಿಗೆ ಅದರ ಬಗ್ಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಈ ಸೊಸೈಟಿಯ ಸೆಕ್ರೆಟರಿಗಳು ಇಡೀ ಮಂತ್ರಿಮಂಡಲವನ್ನೂ ಮತ್ತು ಸಹಕಾರ ಸಂಘಗಳಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳನ್ನೂ ಸರಿಮಾಡಿಕೊಂಡಿದ್ದಾರೆ. ಆ ಸೊಸೈಟಿಯ ವಿಚಾರದಲ್ಲಿ ಒಂದು ಅನಾನಿಮಸ್ ಲೆಟರ್ ಕೂಡ ಸರ್ಕಾರದವರಿಗೆ ಬಂದಿದೆ ಎಂದು ನಾನು ಕೇಳಿದ್ದೇನೆ. ನಂಜನಗೂಡು ಅಸಿಸ್ಟೆಂಟ್ ಕಮೀಷನರು ಎಲ್ಲ ಸೇರಿ ರಾಜಿಕಬೂಲಿ ಮಾಡುವುದಕ್ಕೆ ಪ್ರಯತ್ನಿಸಿದರು. 21-11-1963ರಲ್ಲಿ ಸೆಕ್ರೆಟರಿಯಾದವರು ಒಂದು ನೋಟೀಸ್ ಕೊಟ್ಟಿದ್ದಾರೆ. ಇದನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಎಲ್ಲರಿಗೂ ಕಳಿಸಿದ್ದಾರೆ. ಸದಸ್ಯತ್ವಕ್ಕೆ ಅರ್ಜಿಹಾಕಿದ್ದು ನಾಲ್ಕು ವರ್ಷವಾಯಿತು. ಮಾನ್ಯ ಕೊಂಡಜ್ಜಿ ಬಸಪ್ಪನವರು ಟಿ. ನರಸೀಪುರಕ್ಕೆ ಬಂದಿದ್ದರಂತೆ. ನನಗೆ ಗೊತ್ತಾಗಲಿಲ್ಲವಾದ್ದರಿಂದ ಅವರನ್ನು ಅಲ್ಲಿ ಕಂಡು ಮಾತನಾಡಲು ಆಗಲಿಲ್ಲ. ದೇಶದಲ್ಲಿರುವ ಸಹಕಾರ ಸಂಘಗಳಲ್ಲಿ ಏನಾಗಿದೆ ಎಂಬುದನ್ನು ತಿಳಿಯಲು ವರ್ಷೇವರ್ಷೇ ಆಡಿಟ್ ರಿಪೋರ್ಟನ್ನು ತರಿಸಿಕೊಂಡು ನೋಡಿ ಎಂದು ಹೇಳುತ್ತೇನೆ.

2-30 P.M.

ಹೋದಸಲ ಚುನಾವಣೆಗಳಲ್ಲಿ ಯಾರು ಸೋತಿದ್ದಾರೆ ಅವರಿಗೆ ತಾವು ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಸೊಸೈಟಿ ಪ್ರೆಸಿಡೆಂಟ್ ಮಾಡಿದ್ದೀರಿ. ದೇಶದಲ್ಲಿ 5 ಪರ್ಸೆಂಟ್ ಅಥವಾ 10 ಪರ್ಸೆಂಟ್ ಬೇರೆ ಪಕ್ಷದವರಿರಬಹುದು. ಉಳಿದವರೆಲ್ಲ ಕಾಂಗ್ರೆಸ್ಸಿನವರೇ. ಚನ್ನಪಟ್ಟಣ, ಕೊಳ್ಳೇಗಾಲ ಹೀಗೆ ಕೆಲವು ಕಡೆ ಎದುರು ಪಕ್ಷದವರಿದ್ದಾರೆ. ಸಹಕಾರ ತತ್ವವನ್ನು ಆಚರಣೆಯಲ್ಲಿ ತರುವಾಗ ಅದರಲ್ಲಿ ರಾಜಕೀಯವನ್ನು ಬೆರೆಸಬೇಡಿ. ಈಗ ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ outstanding overdues ಎಷ್ಟು ಇದೆ, ಎಷ್ಟು percent ಬಾಕಿ ಇದೆ, ಎಂದು ನೋಡಿದರೆ ರೈತರ ಆರ್ಥಿಕ ಮುಗ್ಗಟ್ಟನ್ನು ಕಡಿಮೆ ಮಾಡಿದ್ದಾರೆಯೇ ಅಥವಾ ಹೆಚ್ಚು ಮಾಡಿದ್ದಾರೆಯೇ ಎಂದು ಗೊತ್ತಾಗುತ್ತದೆ. 1960ರಲ್ಲಿ ಕೊಟ್ಟಿರುವ ಹಣ 1964ರಲ್ಲಿ 95 ಪರ್ಸೆಂಟ್ ಬಾಕಿ ಇರಬೇಕಾದರೆ ಯಾವ ರೀತಿ ರೈತ ಉದ್ಧಾರವಾಗುತ್ತಾನೆ? ಹೀಗಾದರೆ ಸಹಕಾರ ಸಂಘಗಳು ಎಷ್ಟರ ಮಟ್ಟಿಗೆ ಕೆಲಸಮಾಡುತ್ತವೆ ಎಂದು ನಾನು ಕೇಳುತ್ತೇನೆ. ನಾಲ್ಕು ವರ್ಷದಿಂದ ಬಾಕಿ ಇರಬೇಕಾದರೆ ಆರ್ಥಿಕ ಮುಗ್ಗಟ್ಟನ್ನು ಯಾವ ರೀತಿ ಕಡಿಮೆಮಾಡಿದ ಹಾಗಾಯಿತು?

ಅತ್ತಳ್ಳಿ ಸಹಕಾರ ಸಂಘದ ವಿಚಾರದಲ್ಲಿ ಅಸಿಸ್ಟೆಂಟ್ ಕಮಿಷನರು ರಾಜಿಮಾಡಿದರೆ ಅದಕ್ಕೆ ಸೆಕ್ರೆಟರಿ ಒಪ್ಪಲಿಲ್ಲ. ಅಲ್ಲಿರುವ ಗ್ರಾಮ ಪಂಚಾಯತಿ ಸೆಕ್ರೆಟರಿಯನ್ನು ವರ್ಗಮಾಡಿದ್ದಾರೆ. ವಿಲೇಜ್ ಆಫೀಸರು ಒಂದು ಕಡೆ ಕಂದಾಯವನ್ನು ವಸೂಲ್ಮಾಡಬೇಕು, ಇನ್ನೊಂದು ಕಡೆ ಪಂಚಾಯತಿ ಸೆಕ್ರೆಟರಿ ಕೆಲಸವನ್ನೂ ಮಾಡಬೇಕು. ಅವನನ್ನು ತೆಗೆದುಕೊಂಡು ಹೋಗಿ 20 ಮೈಲಿ ದೂರ ವರ್ಗಮಾಡಿದರೆ ರೆವಿನ್ಯೂ ಬಾಬಿನ ಕೆಲಸ ಹೇಗೆ ಆಗಬೇಕು?

(ಶ್ರೀ ಎಸ್. ಸಿದ್ದಯ್ಯ)

Wholesale Consumer Society ಮಾಡಿದ್ದಾರೆ. ಅದಕ್ಕೆ ಅಧ್ಯಕ್ಷರಾಗಿರುವವರು Ex-Trust Board Chairman ಹೀಗಾಗಬಾರದು. ಆ ಸೊಸೈಟಿಗೆ ಯಾವ ಯಾವ ಪದಾರ್ಥಗಳನ್ನು ಹೇಗೆ ತೆಗೆದುಕೊಳ್ಳಬೇಕೆಂಬುದನ್ನು ಕಂಡು ಕೊಳ್ಳಲು ಮದ್ರಾಸಿಗೆ ಹೋಗಿ ನೋಡಿಕೊಂಡು ಬರಬೇಕೇ ಸ್ವಾಮಿ ? ಇದಕ್ಕೆ ವೆಚ್ಚ ಎಷ್ಟಾಗುತ್ತದೆ ಎನ್ನುವುದನ್ನು ನೋಡಬೇಕು.

ನಾವು ಯಾವಾಗ ಕೇಳಿದರೂ ಆಡಿಟ್ ರಿಪೋರ್ಟ್ ಬಂದಿಲ್ಲವೆಂದು ಹೇಳುತ್ತೀರಿ. ನಿಮ್ಮ ಹತ್ತಿರ ಎಷ್ಟು ಸಿಬ್ಬಂದಿ ಇದೆ ? First Division Clerks, Second Division Clerks, peons, ಇವರಲ್ಲದೆ 268 ಜನ ಇದ್ದಾರೆ. ಇಡೀ ರಾಜ್ಯದಲ್ಲಿ ಎಷ್ಟು ಸೊಸೈಟಿಗಳಿವೆ, ಎಷ್ಟು ದಿವಸದಲ್ಲಿ ಅವುಗಳನ್ನು ಆಡಿಟ್ ಮಾಡಬಹುದು, ಸಹಕಾರ ಸಂಘಗಳ ಸೆಕ್ರೆಟರಿ ಆಡಿಟ್‌ಮಾಡಲು ಏಕೆ ಅವಕಾಶ ಕೊಡಬಾರದು, ರಿಜಿಸ್ಟರ್, ಪ್ರೊಸೀಡಿಂಗ್ಸ್ ಪುಸ್ತಕ ಏಕೆ ಕೊಡಬಾರದು ? ಈ ಸೆಕ್ರೆಟರಿ default ಆಗಿದ್ದಾನೆ, ಹಣ ತಿಂದಿದ್ದಾನೆ, ಇದನ್ನು ತನಿಖೆಮಾಡಲು ನಿಮ್ಮ Deputy Registrar ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಈ ಸೊಸೈಟಿಗೆ ಎಂಟು ಸಾರಿ ಹೋಗಿದ್ದಾರೆ. ಸೆಕ್ರೆಟರಿ ಮಾತ್ರ ಸಿಕ್ಕಲಿಲ್ಲ. ಇಂಥವರನ್ನೆಲ್ಲ ಇಟ್ಟಿದ್ದೀರಿ. ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಹೋದ ವರ್ಷ ಟಿ. ನರಸೀಪುರ Co-operative Marketing General body meeting ಆಯಿತು. ಅದರ ಅಧ್ಯಕ್ಷರು ex-M L.A. ಲೆಕ್ಕಗಳಲ್ಲಿ ವಿವರವಿಲ್ಲದ 2500 ರೂಪಾಯಿ ಇತ್ತು. ನಾನು ಕೇಳಿದ್ದಕ್ಕೆ ಸಮಜಾಯಿಷಿ ಕೊಡಲಿಲ್ಲ. ವಿವರವಿಲ್ಲದ ಐಟಂ ಅದು ಸಾದಿಲ್ವಾರು ಖರ್ಚೋ ಏನೋ ಗೊತ್ತಾಗಲಿಲ್ಲ. ಅದು ಏಕೆ ಆಯಿತು ಎಂದು explain ಮಾಡುವುದಕ್ಕಾಗಲಿಲ್ಲ. ನಾನು ಕೇಳಿದಮೇಲೆ ಸಭೆಯಲ್ಲಿ ಗೊಂದಲವಾಯಿತು, ನಾನು ಕೇಳಿದ್ದನ್ನು ರಿಕಾರ್ಡ್ ಮಾಡಲಿಲ್ಲ. ಇದನ್ನು ತಾವು ಸ್ವಲ್ಪ ನೋಡಿದ್ದೀರಾ ಸ್ವಾಮಿ ?

ಗ್ರಾಮ ಪಂಚಾಯತಿ ಕಾನೂನು ಜಾರಿಗೆ ಬಂದಮೇಲೆ ಕಟ್ಟಡಗಳನ್ನು ಕಟ್ಟಬೇಕಾದರೆ ಲೈಸೆನ್ಸ್ ಪಡೆಯಬೇಕು. ಆದರೆ ಎಷ್ಟು ಜನ ಲೈಸೆನ್ಸ್‌ಗೆ ಅರ್ಜಿಕೊಟ್ಟು, 15 ರೂಪಾಯಿ ಪಾವತಿ ಮಾಡಿ ಲೈಸೆನ್ಸ್ ತೆಗೆದುಕೊಂಡಿದ್ದಾರೆ? ಈ ಬಗ್ಗೆ ಅಂಕಿಅಂಶಗಳನ್ನು ತರಿಸಿದರೆ ಗೊತ್ತಾಗುತ್ತದೆ. ನಮ್ಮ ಊರಿಗೆ ಒಂದು ಗ್ರೂಪ್ ಪಂಚಾಯತಿ ಇದೆ. ಅದರಲ್ಲಿ ಯಾರೂ ಲೈಸೆನ್ಸ್ ತೆಗೆದುಕೊಂಡು, 15 ರೂಪಾಯಿ ಪಂಚಾಯತಿಗೆ ಕೊಟ್ಟು ಮನೆಯನ್ನು ಕಟ್ಟಿಲ್ಲ ಒಬ್ಬ ex-M.L.A. ಗೋಡೌನ್‌ಗಳನ್ನು ಕಟ್ಟುತ್ತಿದ್ದಾರೆ. ಇವರ ಲೈಸೆನ್ಸ್ ತೆಗೆದುಕೊಂಡಿಲ್ಲ. ಎರಡು, ಮೂರು ಮೂಟೆ ಸಿಮೆಂಟ್‌ಬೇಕೆಂದು ಕೇಳುವ ರೈತನಿಗೆ ಸಿಮೆಂಟ್ ಸಿಕ್ಕುವುದಿಲ್ಲ. ಇವರಿಗೆ ನೂರಾರು ಮೂಟೆ ಸಿಕ್ಕಿದೆ. ಅಂಥ ಡೆಪ್ಯುಟಿ ಕಮಿಷನರು, ಅಂಥಾ ಡೆವಲಪ್‌ಮೆಂಟ್ ಆಫೀಸರು ನಮ್ಮ ಜಿಲ್ಲೆಯಲ್ಲಿದ್ದಾರೆ. ನಾವೇನಾದರೂ ಗಲಾಟೆಮಾಡಿದರೆ ರಾಜೀನಾಮೆ ಕೊಡುತ್ತೇವೆಂದು ಹೇಳುತ್ತಾರೆ. ಸಂಬಂಧಪಟ್ಟ ಪಂಚಾಯತಿಯಿಂದ ರಿಕಾರ್ಡ್‌ಗಳನ್ನು ತರಿಸಿದರೆ ಗೊತ್ತಾಗುತ್ತದೆ. ಇದನ್ನು ನೋಡಿದರೆ ಆಡಳಿತದಲ್ಲಿ ಸ್ವಲ್ಪವೂ ಬಿಗಿ ಇಲ್ಲವೆಂದು ಕಾಣುತ್ತದೆ. ರಿಕಾರ್ಡ್‌ಗಳನ್ನು ತರಿಸಿಕೊಂಡು ನೋಡಿದರೆ ಆಗ ನಿಮಗೇ ವಿಷಯಗಳೆಲ್ಲ ಗೊತ್ತಾಗುತ್ತವೆ. ಇಷ್ಟನ್ನಾದರೂಮಾಡಿ ಎಂದು ಹೇಳುತ್ತೇನೆ. ಇನ್ನೊಂದು ವಿಷಯವೇನೆಂದರೆ, ಎಲ್. ಡಿ ಮತ್ತು ಆರ್. ಡಿ. ಇಲಾಖೆಗಳಲ್ಲಿ ಕೆಲವು ಕಡೆ ಕುಡಿಯುವ ನೀರಿನ ಬಾವಿಗಳನ್ನು ಕೊಟ್ಟಿಲ್ಲ. ಕೆಲವು ಕಡೆ ಇದರಿಂದ ತುಂಬಾ ಅನಾನುಕೂಲವಾಗಿದೆ. ಅದರಲ್ಲಿಯೂ ಟಿ. ನರಸೀಪುರ ತಾಲ್ಲೂಕಿನಲ್ಲಿ ಆದಷ್ಟು ಬೇಗ ಕೊಡುತ್ತೇವೆ ಎಂದು ಹೇಳಿ ಒಂದು ವರ್ಷವಾಯಿತು, ಈಗಲಾದರೂ ಅದನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

† ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿರುವ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ವಿಷಯಗಳನ್ನು ಹೇಳುತ್ತೇನೆ. ನಮ್ಮ ದೇಶದಲ್ಲಿ ಸಹಕಾರ ಪದ್ಧತಿ ಪ್ರಾರಂಭವಾಗಿ ಎಷ್ಟೋ ರೈತರಿಗೆ ಅನುಕೂಲವಾಗುತ್ತಿದೆ. ಪಂಚಾಯತಿಗಳಲ್ಲಿ ಸರ್ವಿಸ್ ಕೋ-ಆಪರೇಟಿವ್ಸ್ ಷುರು ಆಗಿ ರೈತರಿಗೆ ಅನುಕೂಲವಾಗುತ್ತದೆ. ಆದರೆ ಎಷ್ಟುಮಟ್ಟಿನ ಅನುಕೂಲ ಸಿಕ್ಕಬೇಕೋ ಅಷ್ಟು ಸಿಕ್ಕುತ್ತಿಲ್ಲ. ಕೆಲವು ಸಹಕಾರ ಸಂಘಗಳಲ್ಲಿ ಇಪ್ಪತ್ತು ಮೂವತ್ತು ಸಾವಿರ ರೂಪಾಯಿ ಕೇಳಿದರೆ ಹತ್ತು ಸಾವಿರ ರೂಪಾಯಿ ಮಂಜೂರು ಮಾಡುತ್ತಿರುವುದರಿಂದ ನಿರುತ್ಸಾಹವಾಗಿದೆ. ಕೆಲವರು ನೂರು ರೂಪಾಯಿ ಸಾಲ ಕೇಳಿದಾಗ ಕೇವಲ ಇಪ್ಪತ್ತೈದು ರೂಪಾಯಿ ಕೊಟ್ಟಿರುವ ಸಂದರ್ಭಗಳಿವೆ. ಆದುದರಿಂದ ರೈತರು ಎಷ್ಟು ಸಾಲ ಕೇಳುತ್ತಾರೋ ಅಷ್ಟು ಕೊಡುವುದಕ್ಕಾಗಿ ಸರ್ವಿಸ್ ಕೋ-ಆಪರೇಟಿವ್ ಸಂಘಗಳಿಗೆ ಹಣಕೊಡಬೇಕೆಂದು ಸಲಹೆ ಮಾಡುತ್ತೇನೆ.

ಲಾರ್ಜ್‌ಸ್ಕೇಲ್ ಕೋ-ಆಗರೇಟಿವ್ ಸರ್ವಿಸ್‌ಗಳಿಗೆ, ನಾಲ್ಕಾರು ಗ್ರಾಮಗಳನ್ನು ಸೇರಿಸಿ ಮಾಡಿದ್ದಾರೆ, ಇವುಗಳಲ್ಲಿ ಒಂದು ತೊಂದರೆ ಇದೆ. ಯಾವುದಾದರೂ ಎರಡು ಗ್ರಾಮಗಳಲ್ಲಿ ಬೆಳೆ ಯಿಲ್ಲದೆ ಅವರು ಡಿಫಾಲ್ಟರ್ ಆದರೆ ಮಿಕ್ಕವರಿಗೂ ಅನುಕೂಲ ಸಿಕ್ಕುವುದಿಲ್ಲ. ಆದುದರಿಂದ ಬೇರೆ ಬೇರೆ ಒಂದೊಂದು ಗ್ರಾಮಕ್ಕೂ ಸರ್ವಿಸ್ ಕೋ-ಆಪರೇಟಿವ್ ಮಾಡಿ ಎಂದು ಜನರು ಕೇಳುತ್ತಿದ್ದಾರೆ. ಇದನ್ನು ಗಮನಿಸಿ ಒಂದೊಂದು ಗ್ರಾಮಕ್ಕೂ ಪ್ರತ್ಯೇಕವಾಗಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಒಳಕಗಾರರ ಸಂಘಗಳ ವಿಚಾರವನ್ನು ಶ್ರೀಮಾನ್ ಎ. ಎಸ್. ಪಾಟೀಲ್ ಅವರು ಹೇಳಿದರು. ಹಳ್ಳಿಗಳಲ್ಲಿ ರೈತನಿಗೆ ಬೇಕಾದ ಸಾಮಾನುಗಳು ಸಿಕ್ಕುತ್ತಿಲ್ಲ. ಸಿಕ್ಕಿದರೂ ದಳ್ಳಾಳಿಗಳ ಕೈಗೆ ಸಿಕ್ಕಿ ಬೆಲೆ ಹೆಚ್ಚಾಗುತ್ತದೆ. ಸಣ್ಣ ಕೈಗಾರಿಕೆ ಸಂಘಗಳು, ಸರ್ವಿಸ್ ಕೋ-ಆಪರೇಟಿವ್ಸ್; ಕನ್ಸ್ಯೂಮರ್ಸ್ ಸೊಸೈಟಿಗಳು ಎಂದಿವೆ, ಇವುಗಳಿಗೆ ಒಂದೊಂದಕ್ಕೂ ಬೇರೆ ಬೇರೆ ಷೇರು ವಸೂಲು ಮಾಡಿದರೆ ಕೊಡುವುದಕ್ಕೆ ರೈತರಿಗೆ ಕಷ್ಟವಾಗುತ್ತದೆ. ಒಂದು ಮಟ್ಟದಲ್ಲಿ ಹಳ್ಳಿಗಳಲ್ಲಿ ಮಲ್ಟಿ ಪರ್‌ಪಸ್ ಸೊಸೈಟಿಗಳೆಂದು ಮಾಡಿ ರೈತರಿಗೆ ಬೇಕಾದ ಗೊಬ್ಬರ ಮತ್ತು ಇತರ ಸಾಮಾನುಗಳಿಗೆ ಸಾಲ ಕೊಡಬೇಕು. ಸಣ್ಣ ಕೈಗಾರಿಕೆ ಸೊಸೈಟಿ, ಉಲ್ಲನ್ ಸೊಸೈಟಿ, ಕನ್ಸ್ಯೂಮರ್ಸ್ ಸೊಸೈಟಿ ಇವೆಲ್ಲದರ ಅನುಕೂಲವನ್ನೂ ಮಾಡುವುದಕ್ಕೆ ಮಲ್ಟಿ ಪರ್ಪಸ್ ಸೊಸೈಟಿಯಿಂದ ಖಂಡಿತವಾಗಿಯೂ ಅನುಕೂಲ ವಾಗುತ್ತದೆ. ಹೀಗೆ ಮಾಡಿದರೆ ಅಲ್ಲಿನ ಸೆಕ್ರೆಟರಿಯನ್ನೂ ಸರಕಾರವೇ ನೇಮಕ ಮಾಡಬೇಕು. ಹೀಗೆ ಮಾಡಿದರೆ ಸಹಕಾರ ಸಂಘಗಳ ಶಕ್ತಿ ಬೆಳೆಯಲು ಅನುಕೂಲವಾಗುತ್ತದೆ. ಕೆಲ ಕಾಲವಾದ ಮೇಲೆ ಸೆಕ್ರೆಟರಿಯ ಸಂಬಳವನ್ನು ಸೊಸೈಟಿಯೇ ಕೊಡಬಹುದು. ಈ ಸಭೆಯಲ್ಲಿ ಬಂದ ಕೆಲವು ಪ್ರಶ್ನೆ ಗಳನ್ನು ನೋಡಿದರೆ ಸಹಕಾರ ಸಂಘಗಳಲ್ಲಿ ಹಣ ಅಪವ್ಯಯವಾಗುತ್ತಿದೆಯೆಂಬುದು ವ್ಯಕ್ತವಾ ಯಿತು. ಈ ದೃಷ್ಟಿಯಿಂದಲೂ ಕೂಡ ಸರ್ಕಾರದಿಂದ ಸೆಕ್ರೆಟರಿಯನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ.

ಎನ್. ಇ. ಎಸ್. ಬ್ಲಾಕ್‌ಗಳ ವಿಚಾರದಲ್ಲಿ ಎರಡು ಮಾತು ಹೇಳಬೇಕಾಗಿದೆ. ನಮ್ಮ ಪ್ರದೇಶ ದಲ್ಲಿ ಹೆಣ್ಣುಮಕ್ಕಳ ಕೆಲಸ ಯಾವ ಮಟ್ಟಕ್ಕೂ ನಡೆಯುತ್ತಿಲ್ಲ. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣದ ಕೆಲಸ ಏನೂ ಆಗುತ್ತಿಲ್ಲ. ಏಕೆಂದರೆ ಅಲ್ಲಿ ಮುಖ್ಯ ಸೇವಕಿಯೂ ಇಲ್ಲ, ಗ್ರಾಮ ಸೇವಕಿಯೂ ಇಲ್ಲ. ಎಷ್ಟು ಹಣವಿತ್ತೋ ಅಷ್ಟು ಖರ್ಚಾಗಿಲ್ಲ; ಆಗುತ್ತಿಲ್ಲ. ಆದುದರಿಂದ ಮುಖ್ಯ ಸೇವಕಿ ಮತ್ತು ಗ್ರಾಮ ಸೇವಕಿಯರನ್ನು ಬೇರೆ ಕೇಂದ್ರಗಳಿಂದ ಕರೆಸಿ ತಮ್ಮ ಕ್ಷೇತ್ರದಲ್ಲಿ ಮಹಿಳೆ ಯರ ಮತ್ತು ಮಕ್ಕಳ ಕೆಲಸದ ವಿಷಯದಲ್ಲಿ ಹೆಚ್ಚಿನ ಕಾರ್ಯ ಮಾಡಿಸಬೇಕು.

ರೂರಲ್ ವಾಟರ್ ಸಪ್ಲೈ ಬಗ್ಗೆ ಹೇಳುವುದಾದರೆ, ಮೂರನೆಯ ಯೋಜನೆಯ ಅಂತ್ಯದಲ್ಲಿ ನಾವಿದ್ದೇವೆ. ಆದರೂ ಈಹೊತ್ತು ಹಳ್ಳಿಗಳಲ್ಲಿ ಕುಡಿಯುವ ನೀರನ್ನೊದಗಿಸಿಲ್ಲವೆಂದರೆ ಅದು ಒಳ್ಳೆಯದಲ್ಲ. ನಮ್ಮ ಕಡೆ 70–80 ಗ್ರಾಮಗಳಲ್ಲಿ ಕುಡಿಯುವ ನೀರಿಲ್ಲದೆ ಕಷ್ಟಪಡುತ್ತಿದ್ದಾರೆ. ಹೊಂಡಗಳಲ್ಲಿ ಮತ್ತು ಕೆರೆಗಳಲ್ಲಿ ನೀರನ್ನು ತೆಗೆದುಕೊಳ್ಳುವುದು ಕಷ್ಟ. ಸರಕಾರವನ್ನು ಕೇಳಿದರೆ ಬಾವಿಗಳಿಗಾಗಿ ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ. ಅಲ್ಲಿ ಬಾವಿಗಳನ್ನು ತೆಗೆಯುವುದಕ್ಕೆ ಏನು ತೊಂದರೆಯಿದೆ ಎಂಬುದನ್ನು ನೋಡಬೇಕು. ನಮ್ಮ ಕಡೆಯಂತೂ ಬಾವಿ ತೆಗೆಯಬೇಕಾದರೆ ಬಹಳ ಕಷ್ಟ; ನೆಲದಲ್ಲಿ ತಕ್ಷಣ ಬಂಡೆಗಳು ಸಿಕ್ಕುತ್ತವೆ. ಆದಕಾರಣ ಹಿಂದೆ ಗೊತ್ತುಮಾಡಿರುವ ರೇಟನ್ನೇ ಕೊಟ್ಟರೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಅದರಿಂದ ಕೆಲಸ ನಡೆಯದೆ ಕೊಟ್ಟ ಹಣ ಲ್ಯಾಪ್ಸ್ ಆಗುತ್ತಿದೆ. ಅಲ್ಲಿ ಮದ್ದು ಗುಂಡು ಡೈನಮೈಟ್ ಹಾಕಿ ಬಾವಿ ತೆಗೆಯಬೇಕಾಗಿದೆ. ಆದುದರಿಂದ ಸರ್ಕಾರದವರು ಹಿಂದಿನ ರೇಟುಗಳನ್ನು ಬದಲಾಯಿಸಿ ಬೇರೆ ರೇಟುಗಳನ್ನು ಕೊಡ ಬೇಕು. ಹೀಗೆ ಮಾಡಿ ಇದಕ್ಕಾಗಿ ಎಷ್ಟು ಹಣವಿದೆಯೋ ಅದನ್ನು ಖರ್ಚಾಗುವಂತೆ ಮಾಡಬೇಕು.

ಪ್ರೊಟೆಕ್ಟೆಡ್ ವಾಟರ್ ಸಪ್ಲೈ ವಿಚಾರದಲ್ಲಿ ಸರ್ಕಾರದವರು ಕಳುಹಿಸಿದ ಆದೇಶ ನಮಗೆ ಮುಟ್ಟಿತು. ಎಲ್ಲೆಲ್ಲಿ ಮಾಡಬೇಕೆಂಬ ಬಗ್ಗೆ ನಾವು ಅಂದಾಜು ತಿಳಿಸಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಿ ಹಣವನ್ನು ತರಿಸಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಈ ನೀರು ಸರಬರಾಜು ಏರ್ಪಾಡು ಮಾಡಿದರೆ ಹಳ್ಳಿಯ ಜನರಿಗೆ ಅನುಕೂಲವಾಗುತ್ತದೆ.

ನಮ್ಮ ಕಡೆ ಕೆಲವು ಹಳ್ಳಗಳ ಮತ್ತು ನದಿಗಳ ಪ್ರವಾಹದಿಂದ ಹಳ್ಳಿಗಳು ಕೊಚ್ಚಿಕೊಂಡು ಹೋಗುತ್ತಿವೆ. ಇಂಥ ಕಡೆ ಮನೆಗಳನ್ನು ಕಳೆದುಕೊಂಡವರು ಮನೆಗಳನ್ನು ಕಟ್ಟಿಸಬೇಕೆಂದರೆ ಎನ್. ಇ. ಎಸ್. ಬ್ಲಾಕ್‌ನಲ್ಲಿ ಹಣ ಸಿಕ್ಕುತ್ತಿಲ್ಲ. ಇದರಿಂದ ಕೆಲವು ಜನರಿಗೆ ತೊಂದರೆಯಾಗಿದೆ. ಹಿಂದು ಮುಂದು ನೋಡದೆ ಪ್ರವಾಹ ಪೀಡಿತ ಊರುಗಳಿಗೆ ಇದಕ್ಕಾಗಿ ಖರ್ಚು ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು. ಎಂತಹ ತುರ್ತು ಪರಿಸ್ಥಿತಿ ಇದ್ದರೂ ಜನರಿಗೆ ಇರುವುದಕ್ಕೆ ಮನೆ ಕೂಡ ಕಟ್ಟಿಸುವುದಿಲ್ಲವೆಂದರೆ ಅದು ಒಳ್ಳೆಯದಲ್ಲ. ಅಲ್ಲದೆ ಹಳ್ಳಿಗಳು ಬೆಳೆಯುತ್ತವೆ, ಜನಸಂಖ್ಯೆ ಹೆಚ್ಚಾ ಗುತ್ತಿದೆ. ಪ್ರತಿ ದಿವಸವೂ ಮನೆಗಳ ಆವಶ್ಯಕತೆ ಹೆಚ್ಚಾಗುತ್ತಿದೆ. ಶ್ರೀಮಾನ್ ಕೊಂಡಜ್ಜಿ ಬಸಪ್ಪ

(ಶ್ರೀಮತಿ ಬಸವರಾಜೇಶ್ವರಿ)

ನವರು ಹೇಳಿದ ಹಾಗೆ ಎಷ್ಟು ಜಮೀನನ್ನು ಇದಕ್ಕಾಗಿ ಅಕ್ವೈರ್ ಮಾಡಬೇಕೋ ಅಷ್ಟನ್ನು ಮಾಡಿ ಮನೆಗಳನ್ನು ಕಟ್ಟಿಸಿ ಹಳ್ಳಿಗಳಿಗೆ ಅಭಿವೃದ್ಧಿಗೆ ಸಹಾಯ ಮಾಡಬೇಕು. ಇಲ್ಲದಿದ್ದರೆ ಒತ್ತಡ ಹೆಚ್ಚಾಗಿ ಜನರಿಗೆ ತೊಂದರೆಯಾಗಿ, ಕೋರ್ಟುಗಳಿಗೆ ಹೋಗಿ ಅನೇಕ ತೊಂದರೆಗಳಿಗೊಳಗಾಗುತ್ತಾರೆ. ಕಡೆಯದಾಗಿ, ಶ್ರೀಮಾನ್ ರಂಗೇಗೌಡರು ಹಳ್ಳಿಗಳ ಸಹಕಾರ ಸಂಘಗಳಲ್ಲಿ ಎರಡು ಮೂರು ಜನ ಡಿಫಾಲ್ಟರುಗಳಾದರೆ ಆ ಹಳ್ಳಿಗೆ ಹಣ ಸಿಕ್ಕುವುದಿಲ್ಲವೆಂದು ಹೇಳಿದರು. ಇದುವರೆಗೆ ಶೇಕಡ 90ರಷ್ಟು ಹಣ ವಾಪಸ್ಸು ಬಾರದಿದ್ದರೆ ಮುಂದೆ ಅಲ್ಲಿಗೆ ಸಾಲ ಕೊಡುತ್ತಿರಲಿಲ್ಲ. ಆದರೆ ಈ ಸರಕಾರದವರು ಶೇಕಡ 60ರಷ್ಟು ಬಂದರೂ ಕೊಡುತ್ತೇವೆ ಎಂದು ನಿರ್ಣಯ ಮಾಡಿದ್ದಾರೆ, ಇದು ಸ್ವಾಗತಾರ್ಹ ವಾದುದು. ಇದರಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಹಳ್ಳಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಾರೆಂದು ನಂಬಿ, ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

† ಶ್ರೀ ವೀರಭದ್ರಪ್ಪ ಈರಪ್ಪ (ಯಲಬುರ್ಗಾ).—ಮಾನ್ಯ ಸಭಾಪತಿಗಳೇ, ಈ ದಿವಸ ಮಾನ್ಯ ಸಭೆಯ ಮುಂದೆ ಸಹಕಾರ ಇಲಾಖೆಯ ಮಾನ್ಯ ಸಚಿವರು ಮಂಡಿಸಿರುವ ಸಹಕಾರ ಖಾತೆ ಬೇಡಿಕೆಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಿ ಮಾತನಾಡಲು ಬಯಸುತ್ತೇನೆ. ಸಹಕಾರ ಸಂಘಗಳನ್ನು ಕುರಿತು ಕೆಲವು ವಿಚಾರಗಳನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಸಹಕಾರ ಚಳವಳಿಯು ನಮ್ಮ ದೇಶದಲ್ಲಿ ರೈತರಿಗೆ ಅತ್ಯಂತ ಅವಶ್ಯಕವಾಗಿದೆ ಎಂಬುದು ಸ್ಪಷ್ಟವಾದ ಮಾತು. ಸಹಕಾರ ಚಳವಳಿಯಿಂದ ಏನು ಲಾಭವಾಗಬೇಕಾಗಿತ್ತೋ ಅಷ್ಟು ಲಾಭವಾಗಿಲ್ಲ ಎಂದು ಹೇಳಬಹುದುಸುತ್ತೇನೆ. ಸಹಕಾರ ಚಳವಳಿಯಿಂದ ಜನರಲ್ಲಿ ಯಾವ ತರಹದ ವಿಚಾರ ಪ್ರಣಾಲಿ ಉಂಟಾಗಬೇಕೋ ಅದನ್ನು ಮಾಡುವುದಕ್ಕೆ ಈ ಖಾತೆಯಿಂದ ಸಾಧ್ಯವಾಗಿಲ್ಲ. ಕೇವಲ ರಿಜರ್ವ್ ಬ್ಯಾಂಕಿನಿಂದ ಹಣ ಪಡೆದು ಸೆಂಟ್ರಲ್ ಬ್ಯಾಂಕಿಗೆ ಸಾಲ ಕೊಡುವುದಕ್ಕೆ ಕೊಟ್ಟು, ಸಾಲ ವಸೂಲ್ಮಾಡುವುದು ಇಷ್ಟೇ ಕಾರ್ಯವಾಗಿದೆ. ಸಹಕಾರ ಚಳವಳಿಯ ಮುಖ್ಯ ಉದ್ದೇಶ ರೈತರಿಗೆ ಯಾವ ರೀತಿ ಕಲ್ಯಾಣವಾಗಬೇಕು ಎಂಬುದು ಆಗಿದೆ. ಅದಕ್ಕೆ ಅಗತ್ಯವಾದ ಪ್ರಚಾರ ಕಾರ್ಯ ಮಾಡಿಲ್ಲ ಎಂದು ಈ ಸಭೆಯ ಮುಂದೆ ಸ್ಪಷ್ಟವಾಗಿ ಹೇಳುತ್ತೇನೆ. ಅನೇಕ ಮಾನ್ಯ ಸದಸ್ಯರು ಸಹಕಾರ ಚಳವಳಿಯ ಬಗ್ಗೆ ಆರೋಪಣೆ ಮಾಡಿದ್ದಾರೆ. ಅನೇಕ ಆಕ್ಷೇಪಣೆ ಇವೆ. ಕಾರ್ಯತಃ ಇವು ನಡೆಯುತ್ತಿವೆ. ಅದಕ್ಕೆ ಸರಕಾರ ಅಷ್ಟೊಂದು ಗಮನ ಕೊಟ್ಟಿಲ್ಲ. ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಕೆಲವು ಉದಾಹರಣೆ ಕೊಡುತ್ತೇನೆ. ನಮ್ಮ ಯಲಬುರ್ಗಾ ತಾಲ್ಲೂಕಿನಲ್ಲಿ ಒಂದು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಇದೆ. ಅವರ ಡೈರೆಕ್ಟರರೊಬ್ಬರು ನಾಲ್ಕು ವರ್ಷಗಳ ಹಿಂದೆ 500 ರೂಪಾಯಿ ಷೇರ್ ಹಣ ಸ್ವೀಕರಿಸಿ ಅದನ್ನು ಬ್ಯಾಂಕಿಗೆ ಕೊಟ್ಟಿಲ್ಲ ಎಂಬುದನ್ನು ಸಹಕಾರ ಮಂತ್ರಿಗಳಿಗೆ ಹೇಳಿ ಅವರ ಗಮನಕ್ಕೆ ತಂದಿದ್ದರೂ ಕೂಡ ಇದೂವರೆಗೆ ಯಾವ ಕ್ರಮ ತೆಗೆದುಕೊಂಡಿಲ್ಲ. ಒಂದು ವೇಳೆ ಏನು ಕ್ರಮ ತೆಗೆದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಅದೇ ರೀತಿ ಕೊಪ್ಪ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಡೈರೆಕ್ಟರ್ ಒಬ್ಬರು ಹಣ ದುರುಪಯೋಗಪಡಿಸಿಕೊಂಡ ಬಗ್ಗೆ ಮನವಿ ಕಳಿಸಿದ್ದೇವೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಿಲ್ಲ. ನಮ್ಮ ಗುಲ್ಬರ್ಗ ಡಿವಿಜನ್ನಿನಲ್ಲಿ ರಾಯಚೂರು, ಗುಲ್ಬರ್ಗ, ಬೀದರ್ ಈ ಮೂರು ಜಿಲ್ಲೆಗಳಲ್ಲಿ 1200 ಬ್ಯಾಂಕುಗಳಿವೆ. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಧಾನ್ಯ ಕೊಂಡು ಆ ಧಾನ್ಯದ ಚೀಲಗಳನ್ನು ಈ ಬ್ಯಾಂಕು ಇಟ್ಟುಕೊಂಡಿದೆ. ಆದರೆ ಅದನ್ನು ಯಾರು ತಂದರು ಎಲ್ಲಿ, ಯಾವಾಗ, ಹೇಗೆ ತಂದರು ಎಲ್ಲಿ ಇದೆ, ಎಂಬುದನ್ನು ವಿಚಾರ ಮಾಡದೆ ಹಾಗೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದನ್ನು ಸರಿಯಾಗಿ ವಿಚಾರಣೆ ಮಾಡಬೇಕೆಂದು ಮಾನ್ಯ ಸಹಕಾರ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಸೆಂಟ್ರಲ್ ಬ್ಯಾಂಕಿನಿಂದ ಕೊಟ್ಟಿರುವ ಸಾಲ ರೈತರಿಂದ ವಸೂಲ್ಮಾಡುವುದು ಸಾಧ್ಯವಾಗಿಲ್ಲ. ಸಹಕಾರ ಸಂಘಗಳ ಕೆಲಸ ಕಾರ್ಯಗಳು ಹೆಚ್ಚಿದ್ದು ಸರಿಯಾಗಿ ನಡೆಯುತ್ತಿಲ್ಲ. ನಮ್ಮ ಜಿಲ್ಲೆಯ ಒಂದು ಹುದ್ದೆಗೆ ಕಳೆದ ನಾಲ್ಕೈದು ವರ್ಷಗಳಿಂದ ಸಹಕಾರ ಇಲಾಖೆಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ದರ್ಜೆಯವರನ್ನು ಸೆಕ್ರೆಟರಿ ಎಂದು ನೇಮಕ ಮಾಡಿದ್ದರೂ ಕೂಡ ಸರಿಯಾಗಿ ಕೆಲಸ ಬ್ಯಾಂಕಿನಿಂದ ಆಗಿಲ್ಲ. ರೈತರ ಮೇಲೆ ಇರುವ ಬಾಕಿ ವಸೂಲಾಗಿಲ್ಲ. ರಾಯಚೂರು ಜಿಲ್ಲೆಯ ಒಂದು ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನಲ್ಲಿ ಹಣ ಪೋಲು ಆಗಿದೆ. ಅದಕ್ಕೆ ಸರಿಯಾಗಿ ಗಮನಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ರೈತರಿಗೆ ವಿಶ್ವಾಸ ಉಂಟಾಗುವ ಹಾಗೆ ಮಾಡಬೇಕು. ಇನ್ನೊಂದು ಸೂಚನೆ ಮಾಡಲು ಬಯಸುತ್ತೇನೆ. ಸಾಲ ಕೊಟ್ಟಿರುವ ಹಣದಲ್ಲಿ ಶೇಕಡಾ 60ರಷ್ಟು ವಸೂಲಾಗಿದ್ದರೆ ಪುನಃ ಸಾಲ ಕೊಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಇದೊಂದು ದೊಡ್ಡ ಪ್ರಮಾಣದ ನಿರ್ಣಯ ಎಂದು ನನಗೆ ಅನಿಸುತ್ತದೆ. ನಮ್ಮ ಜಿಲ್ಲೆಯಲ್ಲಿ ಮೇಲಿಂದ ಮೇಲೆ ಬರಗಾಲ ಬರುತ್ತದೆ.

ಹಣ ತಿರುಗಿ ಕೊಡುವುದನ್ನು ತಪ್ಪಿಸಬೇಕೆಂಬುದು ಮನಸ್ಸಿನಲ್ಲಿ ಇರದೇ ಇದ್ದರೂ ಕೂಡ ಅಭಾವ ಪರಿಸ್ಥಿತಿ ಮೂಲಕ ಅನೇಕರಿಗೆ ಕೊಡುವುದು ಸಾಧ್ಯವಾಗುವುದಿಲ್ಲ. ಉಳಿದ ಬರಗಾಲ ಪೀಡಿತ ಜಿಲ್ಲೆಗಳಲ್ಲಿ ಸಹ ಇದೇ ರೀತಿಯ ಪರಿಸ್ಥಿತಿ ಇದೆ. ಆದುದರಿಂದ ಸಹಕಾರ ಖಾತೆ ಒಂದು ನಿರ್ಣಯ ಮಾಡಲಿಕ್ಕೆ ಅಡ್ಡಿಯಿಲ್ಲ ಎಂದು ಒಂದು ಸೂಚನೆ ಮಾಡುತ್ತೇನೆ. ಯಾವ ಸೊಸೈಟಿಗಳಲ್ಲಿ ಎಷ್ಟು ಜನ ರೈತರಿಗೆ ಸಾಲ ಕೊಡುತ್ತಾರೋ ಅಂಥ ರೈತರು ಪುನಃ ಸಾಲ ಬೇಡಿದರೆ ಅವರಿಗೆ ಕೊಡಬೇಕು. ಉಳಿದ ರೈತರಿಗೂ ಸಾಲ ಕೊಡಬೇಕು. ಎಷ್ಟೆಷ್ಟು ಮಂದಿ ಸಾಲ ತಿರುಗಿ ಕೊಡುತ್ತಾರೋ ಅವರಿಗೆ ಕೊಡುವ ಒಂದು ವ್ಯವಸ್ಥೆ ಮಾಡಿದರೆ ವಸೂಲಾಗುವುದಕ್ಕೆ ತಡವಾಗುವುದಿಲ್ಲ. 100ಕ್ಕೆ 90ರಷ್ಟು ಸಾಲ ತಿರುಗಿ ಕೊಡಲು ಬೇರೆ ಸಾಲ ಸಿಕ್ಕುವುದಿಲ್ಲ. ಆದುದರಿಂದ ಎಷ್ಟು ವಸೂಲಾಗುತ್ತದೆಯೋ ಅಷ್ಟು ಸಾಲ ತಿರುಗಿ ಕೊಡುತ್ತಾರೆ. ಇಲ್ಲದಿದ್ದರೆ ಅದು ನೆನೆಗುದಿಗೆ ಬೀಳುತ್ತದೆ. ಈಗ ಇರತಕ್ಕ ನಿರ್ಣಯ ಅಷ್ಟು ಯಶಸ್ವಿಯಾಗಿಲ್ಲ. ಆದುದರಿಂದ ಒಂದು ವಿಧಾಯ ಸೂಚನೆ ಏನೆಂದರೆ ಸೊಸೈಟಿ ಎಷ್ಟು ಜನರಿಗೆ ಸಾಲ ಕೊಡುತ್ತದೆಯೋ ಅವರಿಗೆ ಪುನಃ ಸಾಲ ಕೊಡಬೇಕು. ಇದು ನನ್ನ ಅನುಭವ ದಿಂದ ಹೇಳುವ ಮಾತು.

ಇದಲ್ಲದೆ ಗ್ರಾಮಾಭ್ಯುದಯದ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಗ್ರಾಮಗಳ ಅಭಿವೃದ್ಧಿ ಯಾಗಬೇಕಾದರೆ ಸಹಕಾರಸಂಘಗಳು, ಪಂಚಾಯತಿಗಳು ಇರಬೇಕು ಸರಿಯಾಗಿ ಕೆಲಸಮಾಡಬೇಕು. ಹೆಚ್ಚು ಅನುಕೂಲ ಒದಗಿಸಿಕೊಡುವುದಕ್ಕೆ ಸರಕಾರ ಗಮನ ಕೊಡಬೇಕು. ಶಾಲೆಗಳು ಇರಬೇಕು. ನಮ್ಮ ಜಿಲ್ಲೆಯಲ್ಲಿ 1200 ಶಾಲೆಗಳಲ್ಲಿ 300 ಶಾಲೆಗಳಿಗೆ ಕಟ್ಟಡ ಇವೆ ಎಂದು ಒಂದು ಸಲ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಇನ್ನು ಉಳಿದ 900 ಶಾಲೆಗಳಿಗೆ ಕಟ್ಟಡಗಳಿಲ್ಲ. ಈ ರೀತಿಯಾದರೆ ಶಿಕ್ಷಣ ಪ್ರಸಾರ ಆಗುವುದು ಹೇಗೆ? ಅಭಿವೃದ್ಧಿಯಾಗುವುದು ಹೇಗೆ? ರೈತರು ಮುಂದೆ ಬರುವುದು ಹೇಗೆ? ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲ ಎಷ್ಟೋ ಗ್ರಾಮಗಳಿಗೆ ರಸ್ತೆ ಇಲ್ಲ. ಇಂಥ ಪರಿಸ್ಥಿತಿ ಇರುವುದರಿಂದ ಗ್ರಾಮಗಳು ಹಿಂದೆ ಉಳಿದಿವೆ. ಆದುದರಿಂದ ಗ್ರಾಮಾಭ್ಯುದಯ ಕಾರ್ಯಕ್ರಮ ಮೊದಲು ತೆಗೆದುಕೊಳ್ಳಬೇಕು. ಸಹಕಾರ ಸಂಘ, ಪಂಚಾಯತಿ ಶಾಲೆಗಳನ್ನು ಮಾಡಬೇಕು. ಇದಲ್ಲದೆ ಸಹಕಾರ ಸಂಘಗಳ ಲೆಕ್ಕ ಪರಿಶೀಲನೆ ಮಾಡುವುದಕ್ಕೆ ಆಡಿಟರ್ ನೇಮಕ ಮಾಡಬೇಕು. ಯಾಕೆಂದರೆ ಅನೇಕ ಕಡೆ ಲೆಕ್ಕ ತಪಾಸು ಮಾಡಿಲ್ಲ. ಇದರಿಂದ ಅವ್ಯವಹಾರಕ್ಕೆ ಆಸ್ಪದ ವಾಗುತ್ತದೆ. ಯಾರು ಬೇಕೆಂದು ಮಾಡುವುದಿಲ್ಲ ಆದರೆ ದುಡ್ಡು ಕೈಯಲ್ಲಿ ಸಿಕ್ಕಾಗ್ಗೆ ಮನುಷ್ಯನ ಸ್ವಭಾವ ಏನು ಮಾಡುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಅಧಿಕಾರಿಗಳು ಇದ್ದಾರೆ ಎಂದು ತಿಳಿದು ಬಂದರೆ ಎಲ್ಲವನ್ನೂ ಸರಿಯಾಗಿ ಮಾಡುತ್ತಾರೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಕಾಳಜಿ ತೆಗೆದು ಕೊಳ್ಳಬೇಕು. ಈ ಸಮಯದಲ್ಲಿ ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ವಿ. ವಿ. ಮಿರ್ಜಾಂಕರ್(ಕುಮಟ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಸಮರ್ಥಿಸುತ್ತಾ ಒಂದೆರಡು ಸಲಹೆಗಳನ್ನು ಮಾಡಲು ಬಯಸುತ್ತೇನೆ. ಇವತ್ತು ನಮ್ಮ ಮುಂದೆ ಇರುವ ಸಹಕಾರ ಬೇಡಿಕೆ ಬಗ್ಗೆ 90,70,500 ರೂಪಾಯಿ ನಾವು ಮಂಜೂರು ಮಾಡುವವರಾಗಿದ್ದೇವೆ, ಈ ಹಣ ಸದುಪಯೋಗವಾಗಿ ಜನತೆಗೆ ಉಪಯೋಗ ದೊರ ಕುವ ಬಗ್ಗೆ ನಮ್ಮ ಸಹಕಾರ ಮಂತ್ರಿಗಳು ಹಾಗೂ ಮೇಲಧಿಕಾರಿಗಳು ಯಾವಾಗಲೂ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿ ಅವರ ಈ ಪ್ರಯತ್ನದಲ್ಲಿ ಅವರಿಗೆ ಉತ್ತಮ ಫಲ ಸಿಗಲಿ ಎಂದು ಹಾರೈಸಿ ಅದಕ್ಕಾಗಿ ಒಂದೆರಡು ಸೂಚನೆಗಳನ್ನು ಸಹ ಮಾಡಲು ನಾನು ಬಯಸುತ್ತೇನೆ.

ಪ್ರತಿಯೊಂದು ಡಿಪಾರ್ಟಮೆಂಟಿನಲ್ಲಿ ನ್ಯೂನ್ಯತೆಗಳು ಕಂಡು ಬರುತ್ತವೆ. ಅದರಲ್ಲಿಯೂ ಪ್ರೊಸೀಜರಲ್ ಡಿಲೇ ಎನ್ನುವುದು ಬೆಳೆಯುತ್ತಾ ಹೋಗಿದೆ. ಜನರೊಳಗೆ ಸಹಕಾರದ ಬಗ್ಗೆ ವಿಶ್ವಾಸ ಬೆಳೆಯಬೇಕಾಗಿತ್ತು. ಅದರ ಬಗ್ಗೆ ನನಗೆ ಸಂಶಯವಾಗುತ್ತಾ ಇದೆ. ಜನರಲ್ಲಿ ಶ್ರದ್ಧೆ ಕಡಮೆ ಯಾಗುತ್ತಾ ಬರುತ್ತಿದೆ.

3 P.M.

ಜನರ ನಂಬಿಕೆ ಸ್ವಲ ಕಡಿಮೆಯಾಗುತ್ತಾ ಬರಬಹುದು. Principles of Co-operation ಅಂದರೆ, friend, philosopher and guide ಅಂತ ಹೇಳುತ್ತಾ ಇದ್ದೇವೆ. ಆದರೆ ಹೇಳಿದ್ದೇ ಹೇಳುತ್ತಿದ್ದೇವೆ, ಕೇಳಿದ್ದೇ ಕೇಳುತ್ತಿದ್ದೇವೆ. ಇದು ತಮ್ಮ ತಮ್ಮ ಅನುಭವದಿಂದ ಎಲ್ಲರಿಗೂ ಗೊತ್ತಿರಬಹುದು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಸಹಕಾರ ಸಂಘಗಳನ್ನು ಮಾಡಿದರೆ ಯೋಗ್ಯವಾದಂಥ ಸಹಾಯ ಸರಕಾರದಿಂದ ಸಿಗಬಹುದು, ಸಿಗುತ್ತದೆ ಅಂತ ಹೇಳಿ, ಸಹಕಾರ ಸಂಘ ಗಳನ್ನು ಕಟ್ಟುವಲ್ಲಿ, ಪ್ರತಿ ಹಳ್ಳಿ ಹಳ್ಳಿಯಲ್ಲಿ ಅನೇಕ ಸಂಘಗಳಿಂದ ಜನರ ವಿಶ್ವಾಸವನ್ನು ಕಟ್ಟಿ ಕೊಂಡದ್ದೂ ಇದೆ, ಆದರೆ ಕೆಲವೊಂದು ಸಂಸ್ಥೆಗಳಲ್ಲಿ ನಡೆಯುವಂಥ ರೀತಿಯನ್ನು ನೋಡಿದರೆ ಇನ್ನು ಮುಂದೆ ಕೋ-ಆಪರೇಟಿವ್ ಮೂವ್‌ಮೆಂಟ್ ಎಷ್ಟರ ಮಟ್ಟಿಗೆ ಯಶಸ್ವಿಯಾಗಬಹುದು ಅಂತ ಹೇಳಿ

(ಶ್ರೀಮತಿ ವಿ. ವಿ. ಮಿರ್ಜಾಂಕರ್)

ಸಂಶಯ ಹುಟ್ಟುತ್ತದೆ. ಉದಾರಣೆಗೆ ಹೇಳಬೇಕಾದರೆ ಒಂದು ಟೀಚರ್ಸ್ ಕೋಆಪರೇಟೀವ್ ಬ್ಯಾಂಕ್ ಅಂತ ಮಾಡಿತ್ತು. ಅಲ್ಲಿ ಫ್ರಾಡ್ ನಡೆಯಿತು. ಎಷ್ಟೋ ಹಣ ಸೆಕ್ರೆಟರಿ ಅವರ ಕೈಯಲ್ಲಿ ಇಟ್ಟುಕೊಂಡಿರಬೇಕಾದರೆ, ಅದು ಯಾವ ಅಧಿಕಾರಿಗಳ ಗಮನಕ್ಕೂ ಬರಲಿಲ್ಲವೋ? ಇಂಥ ಶಿಕ್ಷಕರ ಹಣ ಈ ರೀತಿ ಹಾಳಾದ್ದನ್ನು ನೋಡಿ, ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳದನ್ನು ನೋಡಿ ಜನರಲ್ಲಿ ಸ್ವಲ್ಪ ಭಯ ಹುಟ್ಟುತ್ತಾ ಇದೆ. ಇನ್ನೊಂದು ಉದಾಹರಣೆ ಹೇಳಬೇಕಾದರೆ ಒಂದು ಕ್ಯಾಶ್ ಪ್ರೋಸೆಸಿಂಗ್ ಸೊಸೈಟಿ ಅಂತ ಹೇಳಿ 1961ರಲ್ಲಿ ಸರ್ಕಾರದವರು ಅದಕ್ಕೆ ಪರ್ಮಿಶನ್ ಕೊಟ್ಟರು. ನಾನು ಇದೇ ಸಭೆಯಲ್ಲಿ ಒಂದೆರಡು ತಿಂಗಳ ಹಿಂದೆ ಒಂದು ಪ್ರಶ್ನೆ ಕೇಳಿ, ಉತ್ತರ ತೆಗೆದು ಕೊಂಡಾಗ ಸೊಸೈಟಿಗೆ ನಾಮಿನೇಶನ್ಸ್ ಕೂಡ ಮಾಡಿಲ್ಲ ಎಂಬ ಉತ್ತರ ಕೂಡ ಬಂದಿತು. ಅಥವಾ ಮಾಡಿದ್ದರೆ, ಯಾವಾಗ ಮಾಡಿತು ಎಂದು ಹೇಳಬೇಕು. ಇನ್ನೂ ತನಕ ಸೊಸೈಟಿಯವರಿಗೆ ಅದರ ಬಗ್ಗೆ ಏನೂ ಗೊತ್ತಾಗಲಿಲ್ಲ. 1961-64ರ ಪೀರಿಯಡ್ಡಿನಲ್ಲಿ ಇನ್ನೊಂದು ಸೊಸೈಟಿ ರಿಜಿಸ್ಟರಾಗಿ ಅದಕ್ಕೆ ಧನ ಸಹಾಯ ಕೂಡ ಸಿಕ್ಕಿದೆ. ಅಂದ ಮೇಲೆ ಇಷ್ಟೊಂದು ಹಣ ಇದ್ದಂಥ ಸೊಸೈಟಿಗೆ ಈ ರೀತಿ ತೊಂದರೆ ಬರುವುದಕ್ಕೆ ಕಾರಣವೇನು ಅಂತ ಗೊತ್ತಾಗಲಿಲ್ಲ. ಇಂಥ ಅನೇಕ ಸಮಸ್ಯೆಗಳಿವೆ. ನಾನು ಮೊದಲೇ ಹೇಳಿದಂತೆ, ಇದರಿಂದ ಜನರ ವಿಶ್ವಾಸ ಕಡಿಮೆಯಾಗ ಬಹುದು. ಇಂಥ ತೊಂದರೆಗಳು ಆಗದ ರೀತಿಯಿಂದ ಖಾತೆಯವರು ಜಾಗರೂಕತೆ ವಹಿಸಬೇಕು ಅಂತ ಹೇಳಿ ನಾನು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ಹೊಸದಾಗಿ ಸ್ಥಾಪನೆಯಾದಂಥ ಕೆಲವೊಂದು ಸೊಸೈಟಿಗಳಿಗೆ ಸಕಾಲದಲ್ಲಿ ಸಹಾಯ ಸಿಕ್ಕದೇನೆ ಒಂದು ಕಷ್ಟ ಪರಿಸ್ಥಿತಿಯಲ್ಲಿ ಇದ್ದದ್ದು ನಮಗೆ ಕಂಡು ಬಂದಿದೆ. ಸೆಂಟ್ರಲ್ ಬ್ಯಾಂಕ್, ಅಂಥ ದೊಡ್ಡ ಸಂಸ್ಥೆ, ಅದಕ್ಕೆ ಧಾರಾಳವಾಗಿ ಧನ ಸಹಾಯ ಮಾಡುತ್ತಾ ಇರಬೇಕಾದರೆ, ಇಂಥ ಸಣ್ಣ ಸಂಸ್ಥೆಗಳಿಗೆ (ಸೊಸೈಟಿಗಳಿಗೆ) initial stagesನಲ್ಲ, until they are in a position to stand on their own legs, ಇಂಥ ಪರಿಸ್ಥಿತಿಯಲ್ಲಿ, ಸ್ವಲ್ಪ ಧನ ಸಹಾಯ ಮಾಡುವಂಥ ಕ್ರಮ ಕೈಗೊಳ್ಳಬೇಕು ಅಂತ ಹೇಳಿ ನಾನು ಸೂಚನೆ ಮಾಡುತ್ತಾ ಇದ್ದೇನೆ.

ಇಂಡಸ್ಟ್ರಿಯಲ್ ಕೋಆಪರೇಟೀವ್ಸ್ ಸಲುವಾಗಿ ಹೇಳಬೇಕಾದರೆ, ಈಗಿನ ಪ್ಯಾಟರ್ನ್ ಪ್ರಕಾರ, ಎಲ್ಲಾ ಸೊಸೈಟಿಗಳಿಗೂ ಬ್ಲಾಕ್ ಡೆವಲಪ್‌ಮೆಂಟಿನಲ್ಲಿದ್ದಂಥ ಎಕ್ಸ್‌ಟೆನ್‌ಷನ್ ಆಫೀಸಿರುಗಳು ಆಗಾಗ ಹೋಗಿ, ಯೋಗ್ಯ ಮಾರ್ಗದರ್ಶನಮಾಡಬೇಕು ಅಂತ ಹೇಳಿದೆ. ಆದರೆ Extension Officerಗಳು, ಸರಿಯಾದ ತರಪೇತಿ ಪಡೆದಂಥವರು ಇಲ್ಲ ಹೀಗಾದರೆ ಬರೀ ಒಂದು ಸೊಸೈಟಿ ಸ್ಥಾಪನೆ ಮಾಡಿ, ಲಿಕ್ವಿಡೇಶನ್ ಆದರೆ, ಲಿಕ್ವಿಡೇಶನ್ ಪ್ರೊಸೀಡಿಂಗ್ಸ್ ತೆಗೆದುಕೊಂಡರೆ, ಕೆಲಸ ಆಗದು, ಆಗಾಗ್ಗೆ ಸಲಹೆ ಕೊಡುವಂಥ ability, ಅವರಿಗೆ ಇಲ್ಲದೇನೆ ಕಾರ್ಯಗಳು ಬಹಳ ಕುಂಟಿತವಾಗಿ ನಡೆಯುತ್ತಾ ಇವೆ ಎಂದು ಹೇಳಬಯಸುತ್ತೇನೆ.

ಇನ್ನು ಕೆಲವು ಸೊಸೈಟಿಗಳಿಗೆ, ಕೋಆಪರೇಟಿವ್ ಡಿಪಾರ್ಟ್‌ಮೆಂಟ್ ಬಿಟ್ಟು, ಇನ್ನಿತರ ಡಿಪಾರ್ಟ್‌ಮೆಂಟುಗಳ ಕೋ-ಆಪರೇಷನ್ ಸಿಗುತ್ತಿಲ್ಲ. ಜಮೀನು ಒದಗಿಸಿದರೆ ಹಣ ವಿರುವುದಿಲ್ಲ, ಹಣ ಒದಗಿಸಿದರೆ ಜಮೀನು ಇರುವುದಿಲ್ಲ. ಹೀಗಾಗಿ ಎಷ್ಟೋ ಸೊಸೈಟಿಗಳು ಸ್ಥಾಪನೆಯಾಗಿ 3-4 ವರ್ಷವಾದರೂ, ಪ್ರೋಗ್ರೆಸ್ ತೋರಿಸದೇನೆ ಹಾಗೇ ಉಳಿದಿವೆ. ಎಲ್ಲಿಯೂ ಸಹ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಶೇರು ಬಂಡವಾಳ ಮುಂತಾದುವನ್ನು ಹೆಚ್ಚಿಸಬೇಕು ಎಂದು ಮೇಲಿನ ಅಧಿಕಾರಿಗಳಿಗೆ ಹೇಳಿದರೆ, ಸೊಸೈಟಿಗಳಿಗೆ ಬರುವ ತೊಂದರೆಗಳನ್ನು ಸಕಾಲದಲ್ಲಿ ಸಾಲ್ವ್ ಮಾಡಲಿಕ್ಕೆ ಯಾವ ಅಧಿಕಾರಿಗಳೂ ಇದು ವರೆಗೆ ಸಹಾಯ ಕೊಟ್ಟಿಲ್ಲ ಇದು ಅನೇಕ ಸೊಸೈಟಿಗಳ ಮುಖಾಂತರ ತಿಳಿದು ಬಂದಿದೆ. ಈ ರೀ ಯಲ್ಲಿ ಆಗದ ಹಾಗೆ ಯಾವ ಕ್ರಮ ಕೈಗೊಳ್ಳುವುದಕ್ಕೆ ಆಗುತ್ತದೆ ಅಂತ ಹೇಳಿ ನೋಡಿ ಸೊಸೈಟಿಗಳಿಗೆ ಆಸಿಸ್ಟೆನ್ಸ್ ಒದಗಿಸಬೇಕು ಎಂದು ಇದೇ ಸಮಯದಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ.

ಈಗ ತಾಲ್ಲೂಕು ಬೋರ್ಡಿಗೆ ಒಂದು ಹೆಚ್ಚಿನ ಅಧಿಕಾರ ಕೊಟ್ಟಿದ್ದಾರೆ. ಆದರೆ ಈ ತಾಲ್ಲೂಕು ಬೋರ್ಡು ಯಾವ ರೀತಿ ಕೆಲಸ ಮಾಡುತ್ತಾ ಇದೆ ಅಂತ ಹೇಳಿ ಅನೇಕ ಪ್ರಶ್ನೆಗಳನ್ನು ಈ ಸಭೆಯಲ್ಲಿ ಕೇಳುತ್ತಾ ಇದ್ದೇವೆ. ಆದರೆ ಸರಿಯಾದ ಉತ್ತರ ಕೂಡ ನಮಗೆ ಎಲ್ಲ ತಾಲ್ಲೂಕು ಬೋರ್ಡುಗಳ ಬಗ್ಗೆ ದೊರೆತಿಲ್ಲ. B.D.O.ಗಳು ಹಾಗೂ ತಾಲ್ಲೂಕು ಬೋರ್ಡು ಪ್ರೆಸಿಡೆಂಟರು ಹೊಂದಿಕೊಂಡು, ಕಾನೂನು ಮೀರದಂತೆ ನಡೆದರೆ, ಸಾಮಾನ್ಯ ಜನರಿಗೆ ಸಕಾಲಕ್ಕೆ ಸಹಾಯ ಒದಗುತ್ತದೆ ಅಂತ ಹೇಳಿ ನಾನು ಹೇಳುತ್ತೇನೆ.

ತಾಲ್ಲೂಕು ಬೋರ್ಡುಗಳಿಗೆ ಹೆಚ್ಚಿನ ಅಧಿಕಾರ ಕೊಡುವುದರ ಮೊದಲು, ಅವುಗಳಲ್ಲಿ ಕೆಲಸಗಳನ್ನು ನಡೆಸಿಕೊಂಡು ಹೋಗುವಂಥ, ತರಪೇತಿ ಪಡೆದಂಥ ಸಿಬ್ಬಂದಿಯನ್ನು ಮೊದಲು ನಾವು ಪೂರೈಸಲು ಹೆಚ್ಚು ಗಮನ ಕೊಡಬೇಕು ಎಂದು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ನಮ್ಮಲ್ಲಿ

ಎಷ್ಟೋ ಗ್ರಾಮ ಸೇವಕರ ಜಾಗ ಇನ್ನೂ ತನಕ, ಅನೇಕ ಬ್ಲಾಕುಗಳಲ್ಲಿ, ತುಂಬಿದ್ದಿಲ್ಲ. ತರಪೇತಿ ಪಡೆದಂಥ ಕೋಆಪರೇಟೀವ್ ಎಕ್ಸ್‌ಟೆನ್‌ಶನ್ ಆಫೀಸರುಗಳು ಇಲ್ಲ. ಹೀಗಾಗಿ, ಅನೇಕ ಕೆಲಸಗಳು ಅರ್ಧಂಬರ್ಧವಾಗಿ ನಿಂತು ಹೋಗಿವೆ. ಈ ಕೆಲಸಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿಕೊಂಡು ಹೋಗಲು, ಬ್ಲಾಕುಗಳಿಗೆ ಆದಷ್ಟು ಬೇಗ ಸಿಬ್ಬಂದಿಯನ್ನು ಪೂರೈಸಬೇಕು ಅಂತ ಹೇಳಿ, ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

[SRI H. R. KESHAVAMURTHY (CHAIRMAN) in the Chair]

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ದಿವಸ ಹೆಚ್ಚು ಕಮ್ಮಿ ಎಂಟು-ಒಂಬತ್ತು ಕೋಟಿ ರೂಪಾಯಿ ಡಿಮ್ಯಾಂಡು, ಹಳ್ಳಿಗಳ ಅಭಿವೃದ್ಧಿಗಾಗಿ, ಸಹಕಾರ ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟ್ ಕಾರ್ಯಕ್ರಮಗಳಿಗಾಗಿ ಬೇಕೆಂದು ನಮ್ಮ ಎದುರಿಗೆ ಇದೆ. ಇದರಲ್ಲಿ ಹರಿಜನರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಕೊಟ್ಟ ಹಣ ದುರುಪಯೋಗವಾಗಿರುವುದು ಮತ್ತು ಕೆಲವು ಐಟಮ್ಮುಗಳಲ್ಲಿ ಹಣ ಕೂಡ ಲ್ಯಾಪ್ಸ್ ಆಗಿದೆ ಎಂದು ಏನು ಎರಡು ಟೋಕನ್ ಕಟ್ಟುಗಳು ನಮ್ಮ ಮುಂದಿವೆ, ಅವುಗಳ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಇದರಲ್ಲಿ ಮುಖ್ಯವಾಗಿ ಎರಡು ಪ್ರಶ್ನೆ ಇವೆ. ಈ ಹರಿಜನ ಕಮ್ಯೂನಿಟಿ ವಿಚಾರದಲ್ಲಿ ಹಸಿವು, ಕಳಂಕ, ಇವೆರಡು ಪ್ರಶ್ನೆ ಇವೆ. ಅಸ್ಪೃಶ್ಯರು ಅಂತ ಇರುವುದರ ಜೊತೆಗೆ, ಹಸಿವು ಇರುವುದು ರಾಷ್ಟ್ರೀಯ ತತ್ವಕ್ಕೆ ತರುವ, ಅಪಾಯಕರವಾದ ವಿಚಾರ. ಈ ದೃಷ್ಟಿಯಿಂದ ನಾವು ಶತಾಯ ಗತಾಯ ಈ ವಿಚಾರದಲ್ಲಿ ಪ್ರಗತಿ ಸಾಧಿಸದೆ ಇದ್ದರೆ ನಮಗೆ ಒಳ್ಳೆಯದಲ್ಲ.

ವೈಯುಕ್ತಿಕವಾಗಿ ಹೇಳುವುದಾದರೆ ಆದರಿಂದ ನಮ್ಮ ರಾಷ್ಟ್ರಕ್ಕೆ ಒಳ್ಳೆಯದಲ್ಲ. ಆ ದೃಷ್ಟಿಯಿಂದ ಈ ಹಿನ್ನೆಲೆಗೆ ಅಷ್ಟೋ ಇಷ್ಟೋ ಹಣವನ್ನು ತೆಗೆದಿಟ್ಟಿರುವುದನ್ನು ಹೇಗೆ ಖರ್ಚುಮಾಡುತ್ತೀರಾ? ಅದರಿಂದ ಹೇಗೆ ನಿಜವಾಗಿಯೂ ಪ್ರತಿಫಲ ಬರುತ್ತದೆ, ಹೇಗೆ ಕಾರ್ಯ ಮಾಡಬೇಕೆನ್ನುವುದು ಮುಖ್ಯವಾದ ಪ್ರಶ್ನೆ. ನಮ್ಮ ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳು ಯಾರಿದ್ದಾರೆ ಅವರಿಗೂ ಇದಕ್ಕೂ ಸ್ವಲ್ಪ ಸಂಬಂಧ ಇದೆ ಆ ದೃಷ್ಟಿಯಿಂದ ಅವರು ಈ ಹಿನ್ನೆಲೆಯನ್ನು ನೋಡುವುದು ಬಹಳ ಮುಖ್ಯ. ಅದರ ವಿಚಾರದಲ್ಲಿ ಯಾರು ಏನೂ ಮಾತನಾಡುವ ಹಾಗೆ ಇಲ್ಲ. ಕೆಲವು ವರ್ಷಗಳಿಂದ ಅವರು ತಮ್ಮ ಜೀವವನ್ನೇ ಈ ಪ್ರಶ್ನೆಗಾಗಿ ತೆಯ್ದರು. ನಾನು ಅವರ ಹತ್ತಿರ ಮಾತನಾಡುವಾಗ ಅವರು ಹೇಳಿದರು, ಇಷ್ಟಾದರೂ ಕೂಡ ನಾನು ಮಂತ್ರಿ ಆಗದೇ ಇರುವಾಗ ಎಷ್ಟು ಕೆಲಸ ಮಾಡುತ್ತಾ ಇದ್ದೇನೋ ಅಷ್ಟನ್ನೂ ಕೂಡ ಮಂತ್ರಿಯಾದ ಮೇಲೆ ಮಾಡುವುದಕ್ಕೆ ಆಗುತ್ತಾ ಇಲ್ಲ ಎಂದು ಅಷ್ಟು ನಿಸ್ಸಹಾಯಕರಾಗಿ ಹೇಳಿದರು. ಇನ್ನೊಂದು ವಿಚಾರವನ್ನು ಈ ಜನಾಂಗಕ್ಕೆ ಅಥವಾ ಕೋಮಿಗೆ ಸೇರಿದ ಮಾನ್ಯ ಸದಸ್ಯರು ಇಲ್ಲಿ ಮಾತನಾಡಿದರು ಅವರು ಮಾತನಾಡಿದ್ದರಲ್ಲಿ ಎರಡು ವಿಚಾರಗಳು ಬಹಳ ಚೆನ್ನಾಗಿ ಎದ್ದು ಕಾಣುತ್ತಾ ಇದ್ದವು. ಅದೇನೆಂದರೆ ಒಂದು ಅತೀವವಾದ ನೋವು, ಇಷ್ಟಾದರೂ ಹೀಗಾಗುತ್ತಾ ಇದೆಯಲ್ಲಾ ಅಂತ ಇನ್ನೊಂದು ಆಕ್ರೋಷ, ಹೀಗೆ ಹೀಗೆಲ್ಲಾ ಮೋಸ ಆಗುತ್ತಾ ಇದೆಯಲ್ಲಾ ಎಂದು ಮನಸ್ಸಿನಲ್ಲಿ ನೊಂದುಕೊಂಡು ಹೇಳುತ್ತಾ ಇರುವುದು ಕಂಡು ಬಂತು. ಈ ಎರಡು ಮುಖ್ಯವಾದ ವಿಚಾರಗಳು ಈ ಸಾರಿ ಈ ಸಭೆಯಲ್ಲಿ ಮಾತನಾಡಿದ ಮಾನ್ಯ ಸದಸ್ಯರು ಮಾಡಿದ ಭಾಷಣಗಳಲ್ಲಿ ಎದ್ದು ಕಾಣುತ್ತಾ ಇದ್ದವು. ಹೀಗಾಗಬೇಕಾದರೆ ಕಾರಣವೇನು? ಮಂತ್ರಿಗಳಿಗೆ ಸರಿಯಾದ ಹಿನ್ನೆಲೆ ಇದೆ, ಆ ಜನಾಂಗದವರನ್ನು ಮುಂದೆ ತಂದೇ ತರಬೇಕೆಂಬ ಒಂದು ತರಹದ ಛಲ ಅವರಲ್ಲಿ ಇದೆ, ಹೃದಯ ಇದೆ, ಆದರೂ ಕೂಡ ಅವರ ಕೈಯಲ್ಲಿ ಆಗುತ್ತಾ ಇಲ್ಲ. ಇದು ಮುಖ್ಯವಾದ ಮೂಲ ಪ್ರಶ್ನೆ ಇದನ್ನು ಅವರಿಂದ ಬಿಡಿಸುವುದಕ್ಕಾಗುವುದಿಲ್ಲ. ನಿಜವಾಗಿಯೂ ಯಾವ ಒಂದು ರಾಷ್ಟ್ರಕ್ಕೇ ಆಗಲಿ ಆಧಾರ, ಅಸ್ತಿತ್ವ, ಅಡಿಪಾಯ ಎನ್ನುವುದು ಯಾವುದು ಎಂದರೆ ಇದೇ ಎಂಬುದನ್ನು ಮನಗಾಣಬೇಕು. ಆ ದೃಷ್ಟಿಯಿಂದ ನಾನು ನಾಲ್ಕು ಮಾತುಗಳನ್ನು ಹೇಳುತ್ತೇನೆ. ಏನೆಂದರೆ ಅವನು ಸಿಕ್ಕಿದರೆ ಏನು ಮಾಡುತ್ತಾರೆ ಎಂದರೆ ಪಾರ್ಟ್‌ಸ್ಕೈಟೆಡ್‌ನೆಸ್‌ದಿಂದ ಅವನಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸಹಾಯ ಮಾಡಿಬಿಟ್ಟರೆ ಆಯಿತು, ಅಲ್ಲಿಯವರೆಗೂ ನಮಗೆ ಉಳಿಗಾಲವಿಲ್ಲ ಎಂದು ಹೇಳುವವರು ಈಗಿನ ಕಾಲದಲ್ಲಿ ಬಹಳ ಜನರು ಇದ್ದಾರೆ ಅಂತಹ ಒಂದು ನಿಕಟ ಸಂಪರ್ಕವನ್ನು ಇಟ್ಟುಕೊಂಡಿರುತ್ತಾರೆ. ಆ ದೃಷ್ಟಿಯಿಂದ ಹಣ ಲ್ಯಾಪ್ಸ್ ಆಗುತ್ತಾ ಇದೆ ಅಥವಾ ಹಣ ಕೊಟ್ಟರೂ ಕೂಡ ಅಧಿಕಾರಿಗಳು ಹಣವನ್ನು ಕೊಡಬೇಕಾದರೆ ಪೂರ್ತಿ ಹಣದಲ್ಲಿ ಸರಾಸರಿ ಏನಿಲ್ಲ ಎಂದರೂ ಕೂಡ 15 ರಿಂದ 70 ಪರ್ಸೆಂಟ್ ವರೆಗೂ ತಿಂದು ಹಾಕುತ್ತಾ ಇದ್ದಾರೆ. ಈಗ ಒಂದೆರಡು ವರ್ಷದಿಂದ ನೋಡಿದರೆ ಮೂರು ಕಾಸೂ ಯಾರಿಗೂ ಸಿಕ್ಕಿಲ್ಲ, ಈ ಒಂದೆರಡು ವರ್ಷದಲ್ಲಿ ಚೆನ್ನಾಗಿ ಕೆಲಸ ಮಾಡಿದ್ದರೆ ಎಷ್ಟು ಕೊಡುತ್ತೇವೆ ಎಂದು ವಾಗ್ದಾನ ಮಾಡಿದ್ದರೋ ಅದಕ್ಕಿಂತ ಹೆಚ್ಚು ಹಣ ಖರ್ಚುಮಾಡುವುದಕ್ಕೆ ಅವಕಾಶ ಸಿಕ್ಕುತ್ತಾ ಇತ್ತು. ಆದ್ದರಿಂದ ಈ ತಕ್ಷಣದ ಪರಿಸ್ಥಿತಿಯಲ್ಲಿ ಇದನ್ನು

(ಶ್ರೀ ವಿ. ಎಂ. ದೇವ್)

ಸರಿಪಡಿಸಬೇಕಾದರೆ ಏನು ಮಾಡಬೇಕೆಂಬುದು ಮುಖ್ಯವಾದ ಪ್ರಶ್ನೆ. ಎಷ್ಟು ಹಣವನ್ನು ಈ ಇಲಾಖೆಯಲ್ಲಿ ಖರ್ಚುಮಾಡುತ್ತೀರೋ ಅದನ್ನು ಪಂಚಾಯಿತ್ತು ಹಣದ ಜೊತೆಗೆ ಸೇರಿಸಿ ಸರಕಾರದವರೇ ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಕಾಲೋನಿಯನ್ನು ಕಟ್ಟಬೇಕು. ಎಷ್ಟು ಹಣ ಇದೆಯೋ ಅಷ್ಟಕ್ಕಾದರೂ ಇಲಾಖೆಯ ಮೂಲಕ ಕಟ್ಟಬೇಕೆಂದು ಹೇಳುತ್ತೇನೆ. ಎಷ್ಟು ದುಡ್ಡು ಬೇಕು ಎಂಬುದರ ಲೆಕ್ಕಾಚಾರವನ್ನು ತರಿಸಿಕೊಂಡು ಅವನಿಗೆ ಎಷ್ಟು ದುಡ್ಡು ಬೇಕೋ ಅದರಲ್ಲ ಇಷ್ಟನೇ ಒಂದು ಭಾಗವನ್ನಾದರೂ ಕೊಡಬೇಕೆಂದು ಮಾಡಿದರೆ ಆಗ ಏಕೆ ಇಷ್ಟು ಹಣ ಲ್ಯಾಪ್ಸ್ ಮಾಡಿದಿರಿ ಎಂದು ಕೇಳುವುದಕ್ಕಾದರೂ ಒಂದು ದಾರಿ ಇರುತ್ತದೆ. ಎಲ್ಲವನ್ನೂ ತಿಳಿದ ಮಂತ್ರಿಗಳು ಇದ್ದರೂ ಕೂಡ ಆಡಳಿತಕ್ಕೂ ಅದಕ್ಕೂ ಹೊಂದಾಣಿಕೆ ಇರುವುದಿಲ್ಲ ಒಂದಕ್ಕೊಂದಕ್ಕೆ ನಿಕಟ ಸಂಪರ್ಕ ಇದೆ. ಆ ದೃಷ್ಟಿಯಿಂದ ನಾವು ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಇಲ್ಲದೇ ಇದ್ದರೆ ಖಂಡಿತವಾಗಿಯೂ ಒಂದು ಸಾಸುವೆ ಕಾಳಿನಷ್ಟೂ ಕೂಡ ಅವರು ಮುಂದೆ ಹೆಜ್ಜೆಯನ್ನು ಇಡುವುದಕ್ಕಾಗುವುದಿಲ್ಲ. ಇದಕ್ಕೆ ಅಸ್ತಿತ್ವ, ಅಡಿಪಾಯ ಯಾರು ಎಂಬುದನ್ನು ಆಗಲೇ ಹೇಳಿದೆ. ಈಗಾಗಲೇ ಕಾಲ ಬದಲಾಗಿರುವುದರಿಂದ ಮನುಷ್ಯರು ರೋಸಿ ಹೋಗಿದ್ದಾರೆ, ಮನುಷ್ಯ ಮನುಷ್ಯನನ್ನು ಅಡಿಯಾಳಾಗಿ ಇಟ್ಟುಕೊಂಡು ಎಷ್ಟು ದಿವಸವಾದರೂ ಇರುತ್ತೇವೆ ಎನ್ನುವ ಮಾತು ಸುಳ್ಳು. ಅದರಿಂದ ಎಲ್ಲರೂ ಕೂಡ ನಾಶವಾಗಿಹೋಗುತ್ತಾರೆ ಎಂದು ಹೇಳಬೇಕಾಗುತ್ತದೆ. ಇದನ್ನು ಯಾವ ರೀತಿ ಯಲ್ಲಿ ಸರಿಪಡಿಸುವುದು ಎಂಬುದನ್ನು ಯೋಚನೆ ಮಾಡಬೇಕು. ಆ ರೀತಿ ಮಾಡದೇ ಇರುವುದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದು ಕಡೆ ಆಕ್ರೋಶ ಇದೆ.

ಮೋಸ ಆಗುತ್ತಿದೆಯಲ್ಲಾ ಎಂದು, ಇನ್ನೊಂದು ಕಡೆ ನಮಗೆ ಆಗಬೇಕಾದ ಕೆಲಸ ಆಗುತ್ತಾ ಇಲ್ಲವಲ್ಲಾ ಎಂದು ಅತೀವವಾದ ನೋವು ಎದ್ದು ಕಾಣುತ್ತಾ ಇದೆ. ಈ ರೀತಿ ಮೋಸ ಮಾಡುತ್ತಾ ಹೋದರೆ ನಮ್ಮವರಾಗಲಿ, ಪರಕೀಯರಾಗಲಿ ಯಾರೊಬ್ಬರಿಗೂ ಕೂಡ ಉಳಿಗಾಲ ಇರುವುದಿಲ್ಲ. ಏನೋ ಒಂದು ಕೆಲಸ ಮಾಡಿ ಕಣ್ಣಿಗೆ ಮಣ್ಣು ಎರಚುತ್ತಾ ಇದ್ದಾರೆ ಎಂದು ಜನರ ಮನಸ್ಸಿನಲ್ಲಿ ಈಗಾಗಲೇ ಬಂದಿದೆ. ಆ ದೃಷ್ಟಿಯಿಂದ ನಾನು ತಮಗೆ ಎಚ್ಚರಿಕೆಯನ್ನು ಕೊಡುತ್ತಾ ಇದ್ದೇನೆ. ಮಾನ್ಯ ಸದಸ್ಯರೆಲ್ಲರೂ ಮೂಲ ಭೂತವಾಗಿ ಇದಕ್ಕೆ ಪರಿಹಾರಗಳನ್ನು ಕಂಡುಹಿಡಿಯಬೇಕು ಆಡಳಿತದಲ್ಲಿ ಒಂದು ಮೂಲ ಭೂತವಾದ ಬದಲಾವಣೆ ಬರಬೇಕು ಮತ್ತು ಅದರ ಜೊತೆಗೆ ಕೆಲಸ ಮಾಡುವುದರಲ್ಲಿ ಮೂಲ ಭೂತವಾದ ಬದಲಾವಣೆಯಾಗಬೇಕು. ಈ ದೃಷ್ಟಿಯಿಂದ ಏನು ಮಾಡಿದ್ದೀರಿ ? ದುಡ್ಡು ಕೊಡುವುದರ ಮೂಲ ಉದ್ದೇಶ ಏನು ? ಮನುಷ್ಯ, ಮನುಷ್ಯ ಎಂದು ತಿಳಿದುಕೊಳ್ಳಬೇಕಾದರೆ ಸಮಾಜದಲ್ಲಿ ಅವನಿಗೆ ಒಂದು ಅಸ್ತಿತ್ವ ಸಿಕ್ಕಬೇಕಾದರೆ ಜವಾಬ್ದಾರಿಯಾದ ಸ್ಥಾನ ಸಿಕ್ಕಬೇಕಾದರೆ ಎರಡು ಮುಖ್ಯವಾದ ಮೂಲ ಆಧಾರಗಳು ಇವೆ. ಒಂದನೆಯದು ಎಂದರೆ ಆಸ್ತಿ, ಎರಡನೆಯದು ಎಂದರೆ ವಿದ್ಯೆ. ಇದಕ್ಕೆ ತಕ್ಕ ಅನುಕೂಲವಾದ ಒಂದು ಸೌಕರ್ಯವನ್ನು ಮಾಡಿಕೊಡಬೇಕು. ಹಾಗೆ ಮಾಡಬೇಕಾದರೆ ಎಲ್ಲರಿಗೂ ಆಸ್ತಿ ಸಿಕ್ಕಬೇಕಾದರೆ ಎಲ್ಲರೂ ಏಳಿಗೆಗೆ ಬರಬೇಕಾದರೆ ಅದಕ್ಕೆ ನಿಜವಾಗಿಯೂ ಕೂಡ ಒಂದು ತಾತ್ವಿಕವಾದ ಹಿನ್ನಲೆ ಏನಾದರೂ ಒಂದು ದಾರಿಯನ್ನು ಕಂಡುಹಿಡಿಯಬೇಕು. ಇಲ್ಲದೇ ಇದ್ದರೆ ಏನನ್ನೂ ಸಹ ಮಾಡುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯಿಂದ ಒಬ್ಬರನ್ನು ಮೋಸ ಮಾಡಿ ಮತ್ತೊಬ್ಬರು ಸಾವುಕಾರರು ಆಗುತ್ತೇವೆ ಎನ್ನುವ ಮಾತು ಸುಳ್ಳು. ಆ ರೀತಿ ಮಾಡುತ್ತಾ ಹೋಗುವುದರಿಂದ ಯಾರ ಮನಸ್ಸಿನಲ್ಲೂ ಶಾಂತಿ ಇರುವುದಿಲ್ಲ. ಆದ್ದರಿಂದ ನಾನು ಕೇಳಿಕೊಳ್ಳುವುದಾದರೂ ಇಷ್ಟೇ. ತಾತ್ಕಾಲಿಕವಾಗಿಯಾದರೂ ಬೇರೆ ಯಾವುದಾದರೂ ಒಂದೇ ಒಂದು ಹೆಡ್‌ನಿಂದ ಅಷ್ಟು ಹಣವನ್ನು ಈ ಬಾಬಿಗೆ ಕೊಡಿ. ಪಂಚಾಯಿತಿಯಲ್ಲೂ ಕೂಡ ಸ್ವಲ್ಪ ಹಣ ಇದೆ ಅದನ್ನೂ ಇದರ ಜೊತೆಗೆ ಸೇರಿಸಿ ಡಿಪಾರ್ಟ್‌ಮೆಂಟಲ್ ಆಗಿ ನೀವು ಕಾಲೋನಿಯನ್ನು ಕಟ್ಟಿ ಎಲ್ಲ ಕೋಮಿನವರಿಗೂ ತಾರತಮ್ಯವಿಲ್ಲದೇ ಮನೆಗಳನ್ನು ಅಲಾಟ್ ಮಾಡಿದರೆ ಅವರ ಮಟ್ಟಿಗೆ ಅಷ್ಟೋ ಇಷ್ಟೋ ಸಾರ್ಥಕವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ ; ಈಗ ದೇಶದಲ್ಲಿ ಹಣ ಹಾಳುಮಾಡುವುದು ವಿಪರೀತವಾಗಿದೆ. 300 ರೂಪಾಯಿ ಸಾಲ ತೆಗೆದುಕೊಳ್ಳ ಬೇಕಾದರೆ ಎರಡು ವರ್ಷ ಅಧಿಕಾರಿಗಳ ಹತ್ತಿರ ಅಲೆಯಬೇಕು. ಅದೇ ಅವನು ಎರಡು ವರ್ಷ ಕೂಲಿ ಮಾಡಿದ್ದರೆ ಅವನಿಗೆ 300 ರೂಪಾಯಿಗಿಂತ ಜಾಸ್ತಿ ಹಣ ಬರುತ್ತಾ ಇತ್ತು. ಆ ದೃಷ್ಟಿಯಿಂದ ನೀವು ಮಾಡುತ್ತಾ ಇರುವ ಕೆಲಸ ಏನು ಎಂದರೆ ಅದಕ್ಕೆ ಇಂಗ್ಲೀಷ್‌ನಲ್ಲಿ ಸ್ಯಾಬೊಟೇಜ್ ಎಂದು ಹೇಳುತ್ತಾರೆ. ಇದಕ್ಕೆ ಅವಕಾಶ ಕೊಡದೆ ಈ ಪ್ರಶ್ನೆಯನ್ನು ತಾತ್ವಿಕವಾಗಿ ಯೋಚನೆ ಮಾಡಿ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯ ಬೇಕು. ಅದಕ್ಕೆ ತಾತ್ಕಾಲಿಕವಾಗಿ ಏನು ಮಾಡಬೇಕೆಂಬುದನ್ನು ನನಗೆ ತಿಳಿದಮಟ್ಟಿಗೆ ನಾನು ಸೂಚನೆ ಮಾಡಿದ್ದೇನೆ ಅದನ್ನು ದಯಮಾಡಿ ಆಳವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೋ-ಆಪರೇಟೀವ್ ವಿಚಾರ. ಇದರಲ್ಲಿ ಈಗಿನ ಸ್ವರೂಪ ಏನು ಎಂದರೆ ಇದಕ್ಕೆ ಹೆಚ್ಚಾಗಿ ಹಣ ಸರಕಾರದಿಂದ ಬರುತ್ತಾ ಇದೆ. ಅಫಿಷಿಯಲ್ಸ್ ಇರಬೇಕೇ, ನಾನ್ ಅಫಿಷಿಯಲ್ಸ್ ಇರಬೇಕೇ ಎಂದು ಹೇಳಿ ಮುಂದುವರಿದು ಹೋಗುತ್ತಾ ಇರುವುದನ್ನು ತಡೆದು ಹಿಡಿಯುವ ಪರಿಸ್ಥಿತಿಯನ್ನು ಉಂಟುಮಾಡುತ್ತಾ ಇದ್ದಾರೆ. ಅಷ್ಟೋ ಇಷ್ಟೋ ಶೇರ್ ಹಾಕುತ್ತೀರಿ. ಮ್ಯಾನೇಜೀರಿಯಲ್ ಕಾಸ್ಟ್ ಒಂದೆರಡು ವರ್ಷ ಕೊಡಬೇಕೆಂದು ಮಾಡಿದ್ದೀರಿ. ಆದರೆ ಅದು ಹೇಗೆ ವ್ಯವಸ್ಥಿತವಾಗಿ ನಡೆಯುತ್ತಾ ಇದೆಯೋ ಎಂಬುದನ್ನು ಯೋಚನೆ ಮಾಡಬೇಕು. ಈಗ ಏನು ನಡೆಯುತ್ತಿದೆ ಎಂದರೆ ಈ ಮ್ಯಾನೇಜೀರಿಯಲ್ ಕಾಸ್ಟ್ ಜೊತೆಗೆ ಸೆಕ್ರೆಟರಿಗಳು, ಡೈರೆಕ್ಟರುಗಳು ಇನ್ನೂ ಸ್ವಲ್ಪ ಹಣವನ್ನು ಹಂಚಿಕೊಳ್ಳುತ್ತಾ ಇದ್ದಾರೆ ಎಂದು ಕಾಣುತ್ತಾ ಇದೆ. ಇದಕ್ಕೆ ಕಾರಣವೇನು ? ಈಗಿರತಕ್ಕ ಬೈಲಾ ಪ್ರಕಾರ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಅಕಸ್ಮಾತ್ತಾಗಿ ಒಂದು ಸರಿಯಾಗಿ ನಡೆಯಿತು ಎಂದರೆ ಅದೂ ಅದೃಷ್ಟವಶಾತ್ ಅದು ಎಕ್ಸೆಪ್ಷನ್ ಅಷ್ಟೆ. ಆ ದೃಷ್ಟಿಯಿಂದ ಆಗುತ್ತದೆಯೋ ಹೊರತು ಇನ್ಯಾವ ದೃಷ್ಟಿಯಿಂದಲೂ ಆಗುವುದಿಲ್ಲ. ಈಗ ದೇಶದ ಜನತೆಯ ಮಟ್ಟ, ಸ್ಥಿತಿ ಹೇಗಿದೆ ಎಂಬುದನ್ನು ನೋಡಬೇಕು. ಒಂದು ಕಡೆ ಹಣ ಬೇಕಾದಷ್ಟಿದೆ, ಶ್ರೀಮಂತರು ಹೆಚ್ಚು ಶ್ರೀಮಂತರೇ ಆಗುತ್ತಿದ್ದಾರೆ, ಬಡವರು ಕಡುಬಡವರಾಗುತ್ತಿದ್ದಾರೆ. ಆಸ್ತಿಯ ಮೌಲ್ಯವೆಷ್ಟಿರಬೇಕೋ ಅದಕ್ಕಿಂತ ಹೆಚ್ಚಾಗಿದೆ. ಜನರ ಹಿತದೃಷ್ಟಿಯಿಂದ ಸಹಕಾರ ಸಂಘಗಳನ್ನು ಮಾಡಿದರೆ ಅವುಗಳಿಂದ ಉನ್ನತಿ ಸಾಧನೆಯಾಗುತ್ತಿಲ್ಲ ; ತೋಳ ಕುರಿ ಕಾಯುವ ಹಾಗಾಗಿದೆ. ಸರ್ಕಾರದ ಹಣ ಜಾಸ್ತಿಯಾಗಿ ಈ ಸಂಘಗಳಲ್ಲಿರುವುದರಿಂದ ಒಳ್ಳೆಯ ಮ್ಯಾನೇಜರನ್ನಿಟ್ಟು ಸರಿಯಾದ ಕೆಲಸ ತೆಗೆದುಕೊಳ್ಳಬೇಕು. ಹಳೆಯ ಮೈಸೂರಿನಲ್ಲೂ ಎಷ್ಟೋ ಕಡೆ ಹಣ ದುರುಪಯೋಗವಾಗಿತ್ತು, ಇದು ಹೊಸದಲ್ಲ. ಆದುದರಿಂದ ತೆಗಳುವುದು ಬೇಡ. ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎಂಬುದನ್ನು ನೋಡಿ ಲೋಪದೋಷಗಳನ್ನು ಸರಿಪಡಿಸಿ ಒಳ್ಳೆಯ ರೀತಿಯಲ್ಲಿ ನಡೆಯುವಂತೆ ಮಾಡದಿದ್ದರೆ ಯಾರಿಗೂ ಸಹಕಾರ ಖಾತೆಯಿಂದ ಸುಖವಾಗುವುದಿಲ್ಲ. ಒಳ್ಳೆಯ ಬಣ್ಣಬಣ್ಣದ ಮಾತನಾಡಿ ಕನಿಕರ ಹುಟ್ಟುವಂತೆ ಮಾಡಿ ಜನರ ಕಣ್ಣಿಗೆ ಕಾಣದಂತೆ ಮೋಸ ಮಾಡಲು ಏನು ಬೇಕೋ ಅದನ್ನು ಮಾಡುತ್ತಾರೆ ಎಂದು ಹೇಳುವ ಕಾಲ ಬಂದಿದೆ. ಆದುದರಿಂದ ಎಚ್ಚತ್ತು ದೇಸದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು.

ಇನ್ನೊಂದು ಈಗ ಎಮರ್ಜೆನ್ಸಿ ಎಂದು ಎಲ್ಲವನ್ನೂ ಮರೆತಿರುವ ಹಾಗೆ ಕಾಣುತ್ತದೆ. ಜನರಿಗೆ ಸ್ವಾತಂತ್ರ್ಯವೇ ಬೇಡ ಎನ್ನುವ ಭ್ರಮೆಯುಂಟಾಗುವಂತಿದೆ. ಇದು ಬಹಳ ಕೆಟ್ಟದ್ದು. ದೇಶದ ರಕ್ಷಣೆಗಾಗಿ ವಾಲಂಟಿಯರ್ ಫೋರ್ಸ್ ಏನಿದೆ ಅದರಿಂದ ದೇಶಕ್ಕೆ ಉಪಯೋಗವಾಗುವ ಹಾಗಿರಬೇಕು. ಅಪಾಯವೇನಾದರೂ ಅದರೆ ಜನರು ಕರೆದರೆ ಈ ಫೋರ್ಸ್ ಸಹಾಯ ಮಾಡುವಂತಿರಬೇಕು. ಹಾಗಿಲ್ಲದೆ ಬರೀ ಸಂಸ್ಥೆ ಮಾಡಿದರೆ ಊರ್ಜಿತವಾಗುವುದಿಲ್ಲ. ಆ ದೃಷ್ಟಿಯಿಂದ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು. ವ್ಯವಹಾರದ ಅಂಗದಲ್ಲಿ ಕಾರ್ಯಾಂಗದಲ್ಲಿ ಮೂಲಭೂತವಾದ ಬದಲಾವಣೆಯಾಗಬೇಕು. ಒಟ್ಟಿನಲ್ಲಿ ನೀವು ಕೊಟ್ಟ ಮಾತು, ಸಮಾಜವಾದ ಉಳಿಸಿಕೊಳ್ಳಬೇಕು, ಈಗ ಅದು ಅಳಿಯುವ ಕಾಲ ಬಂದಿದೆ, ಇದು ಖಂಡಿತ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೆ, ನಮ್ಮ ಮುಂದಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ದೇಶದ ಜನತೆಯ ಆರ್ಥಿಕ, ನೈತಿಕ, ಸಾಮಾಜಕ ಹಾಗೂ ಸಂಸ್ಕೃತಿಕ ಜೀವನದ ಮೇಲೆ ಅವಲಂಭಿಸಿರುವ ಈ ಬೇಡಿಕೆಗಳಿಗೆ ಹಣವನ್ನು ಕೇಳುವಾಗ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿಲ್ಲ ಎಂದು ನಾನಾದರೂ ಕೂಡ ಹೇಳಬಯಸುತ್ತೇನೆ. ರೂರಲ್ ಡೆವಲಪ್‌ಮೆಂಟ್ ಯೋಜನೆಯೇನಿದೆ ಅದರಲ್ಲಿ ಹಣ ಬಹಳ ಮಟ್ಟಿಗೆ ಪೋಲಾಗುತ್ತಿದೆ. ಈ ಯೋಜನೆ ಪ್ರಕಾರ ಹರಿಜನರಿಗೆ ಮನೆ ಕಟ್ಟಲು ಅವಕಾಶ ಮಾಡಲಾಗಿದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುವುದಾದರೆ ತುರುವೇಕೆರೆ ತಾಲ್ಲೂಕು ಹೊಸಹಳ್ಳಿಯಲ್ಲಿ 25 ಮನೆಗಳನ್ನು ಕಟ್ಟಲು ಅವಕಾಶ ಮಾಡಿದ್ದರು. ಅಲ್ಲಿ ಒಬ್ಬ ಮಹಾಶಯ ಇದಕ್ಕಾಗಿ ಮೀಸಲಾಗಿಟ್ಟಿದ್ದ ಹಣವನ್ನು ತೆಗೆದುಕೊಂಡು ಕಟ್ಟಿದ್ದ ಮನೆಗಳು ಈಗಾಗಲೆ ಬಿದ್ದು ಹೋಗುವ, ಸ್ಥಿತಿಯಲ್ಲಿವೆ. ಅವನ್ನು ಕಟ್ಟಿ ಕೇವಲ 3-4 ವರ್ಷಗಳಾದುವು. ಮೊನ್ನೆ ಡಿಸ್ಟ್ರಿಕ್ಟ್ ಡಿವಲಪ್‌ಮೆಂಟ್ ಕಮೀಷನರು ಅಲ್ಲಿಗೆ ಬಂದು ಅದನ್ನು ನೋಡಿ ಮನನೊಂದು ಅವುಗಳ ರಿಪೇರಿಗಾಗಿ ಮತ್ತೆ 3 ಸಾವಿರ ರೂಪಾಯಿಗಳನ್ನು ಕೊಡಿಸಿದ್ದಾರೆ. ಮತ್ತೆ ಆ ಹಣದಲ್ಲೂ ಕೂಡ ರಿಪೇರಿಮಾಡಿದವರು ತಮ್ಮ ಭಾಗವನ್ನು ಪಡೆದರು. ಈ ರೀತಿಯಾಗಿ ಸರ್ಕಾರ ಕೊಡುವ ಹಣ ಪೋಲಾಗುತ್ತಿದೆ. ಕುಡಿಯುವ ನೀರನ್ನೊದಗಿಸುವ ಜವಾಬ್ದಾರಿ ಸರ್ಕಾರದ ಮೇಲೆ ಇದ್ದರೂ ಇಲ್ಲಿಯತನಕ ಅದಕ್ಕೆ ವ್ಯವಸ್ಥೆಯನ್ನು ಮಾಡದಿರುವುದು ವಿಷಾದಕರ. ಉದಾಹರಣೆಗೆ ತುರುವೇಕೆರೆ ತಾಲ್ಲೂಕಿನಲ್ಲಿ ಸುಮಾರು 160 ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಲ್ಲ. ರೂರಲ್ ವಾಟರ್ ಸಪ್ಲೈ ಡೆವಲಪ್‌ಮೆಂಟ್ ಸ್ಕೀಂ, ಎನ್.ಇ.ಎಸ್. ಸ್ಕೀಂ ಮುಂತಾದುವೆಲ್ಲಾ ಇದ್ದರೂ ಕೂಡ ಅಷ್ಟು ಗ್ರಾಮ

(ಶ್ರೀ ಬಿ. ಬೈರಪ್ಪಾಜಿ)

ಗಳಿಗೆ ಕುಡಿಯುಲು ನೀರನ್ನೊದಗಿಸದಿದ್ದರೆ ಸರ್ಕಾರಕ್ಕೆ ನಿಜವಾಗಿಯೂ ಸಹಾನುಭೂತಿ ಇದೆಯೋ ಎಂದು ಕೇಳುತ್ತೇನೆ.

ರೂರಲ್ ಕಮ್ಯೂನಿಕೇಷನ್ ಸ್ಕೀಮಿಗೆ ಸರ್ಕಾರ ಹಣ ಒದಗಿಸುತ್ತಿದೆ. ಆದರೆ ಮಾರ್ಚ್ 15ನೆಯ ತಾರೀಖು ಒದಗಿಸಿ ಅದನ್ನು ಖರ್ಚು ಮಾಡಬೇಕೆಂದರೆ ಹೇಗೆ ಸಾಧ್ಯ? ಅದರ ಉದ್ದೇಶ ಕಳುಹಿಸುವಾಗಲೇ ಖರ್ಚು ಮಾಡಬಾರದೆಂಬುದು ಎಂದು ಇದರಿಂದ ಅರ್ಥವಾಗುತ್ತದೆ. ಈ ರೀತಿ ಮಾಡುವುದು ತುಂಬಾ ಅನ್ಯಾಯವಲ್ಲವೇ? ಕೊಟ್ಟಂಥ ಹಣ ಸಾರ್ವಜನಿಕ ಉಪಯೋಗಕ್ಕಾಗಿ ಖರ್ಚಾಗದಿದ್ದರೆ ಏಕೆ ಕಳುಹಿಸಬೇಕು? ಇಂಥ ಒಂದು ಅವ್ಯವಸ್ಥೆಯನ್ನು ಮುಂದಾದರೂ ನಿಲ್ಲಿಸಿ ಕೊಡುವ ಹಣವನ್ನು ಖರ್ಚುಮಾಡಲು ಅವಕಾಶ ಇರುವ ಹಾಗೆ ಸ್ವಲ್ಪ ಮುಂಚಿತವಾಗಿ ಕಳುಹಿಸ ಬೇಕೆಂದು ಸೂಚನೆಮಾಡುತ್ತೇನೆ.

ಸಹಕಾರ ಸಂಸ್ಥೆ ವಿಚಾರ ಒಂದು ಕರ್ಮ ಖಾಂಡವಾಗಿದೆ. ಇವನ್ನು ನೋಡಿದರೆ "ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ" ಎಂಬ ಗಾದೆ ಜ್ಞಾಪಕಕ್ಕೆ ಬರುತ್ತದೆ. ತಾಲ್ಲೂಕು ಮಟ್ಟದಲ್ಲಿ ಕೆಲವು ಮುಖಂಡರಿರುತ್ತಾರೆ.

ಅವರು ದೊಡ್ಡ ದೊಡ್ಡ ಸೊಸೈಟಿಗಳನ್ನು ಕೈಯಲ್ಲಿಟ್ಟುಕೊಂಡಿರುತ್ತಾರೆ. ನಾನು ಯಾವ ಪಕ್ಷ ಪಂಗಡದವರು ಎನ್ನುವುದನ್ನು ಇಲ್ಲಿ ಹೇಳಲು ಹೋಗುವುದಿಲ್ಲ. ಯಾವುವೇ ಪಕ್ಷಕ್ಕೆ ಸೇರದೇ ಇರುವಂತಹ ಕೆಲವು ಮುಖಂಡರುಗಳು ಸಾರ್ವಜನಿಕ ಸೇವೆ ಮಾಡುತ್ತೇವೆ ಎಂದು ಖಾದಿ, ದಾರಿಗಳಾಗಿ ಜನಗಳನ್ನು ಪ್ರತಿನಿತ್ಯವೂ ವಂಚಿಸಿ ಮೋಸಗೊಳಿಸುತ್ತಿದ್ದಾರೆ. ಇಂತಹ ಮುಖಂಡರು ಕೆಲವರು ಸಹಕಾರ ಸಂಸ್ಥೆಗಳಲ್ಲಿ ಸೇರಿಕೊಂಡು ಸೊಸೈಟಿಗಳಲ್ಲಿರುವ ಹಣವನ್ನು ಲೂಟಿ ಮಾಡುವುದಕ್ಕೇ ಹೊರಟಿದ್ದಾರೆ. ಇದರಿಂದೇನಾಗಿದೆ ಎಂದರೆ

[MR. SPEAKER in the Chair.]

ಸರ್ವಿಸ್ ಕೋ-ಆಪರೇಟಿವ್ಸ್ ಎಂದು ಮಾಡಿರುವಂತಹ ಸಂಸ್ಥೆಗಳಲ್ಲಿ ಸಣ್ಣ ಸಣ್ಣ ಮರಿ ಮುಖಂಡರುಗಳು ಬೇರೆ ಹುಟ್ಟಿಕೊಂಡಿದ್ದಾರೆ. ಹಣ ಸರಕಾರದವರು ಹೇಗಿದ್ದರೂ ಕೊಡುತ್ತಿದ್ದಾರೆ. ಇದನ್ನು ನಾವೇಕೆ ತಿನ್ನಬಾರದು ಎಂದು ಲಪಟಾಯಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇಂತಹ ಮುಖಂಡರು ಎಲ್ಲ ಕ್ಷೇತ್ರಗಳಲ್ಲಿಯೂ ಇರುತ್ತಾರೆ. ಪ್ರಮುಖವಾಗಿ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿ, ತಾಲ್ಲೂಕ್ ಲ್ಯಾಂಡ್ ಮಾರ್ಟ್‌ಗೇಜು ಸೊಸೈಟಿ, ತಾಲ್ಲೂಕ್ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟೀವ್ ಸೊಸೈಟಿ ಇದರಲ್ಲಿರುವಂತಹ ಮುಖಂಡರು ಬಹಳ ಚೆನ್ನಾಗಿ ಉತ್ತಮವಾಗಿ ಕೆಲಸ ಮಾಡುತ್ತಿದ್ದರೆ ಸಣ್ಣ ಸಹಕಾರ ಸಂಸ್ಥೆಗಳಲ್ಲಿಯೂ ಕೆಲಸಗಳು ಚೆನ್ನಾಗಿ ನಡೆಯುತ್ತಿವೆ. ಉದಾಹರಣೆಯಾಗಿ ಹೇಳಬೇಕಾದರೆ ನಮ್ಮ ತುರುವೇಕೆರೆಯಲ್ಲಿದ್ದ ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಯಲ್ಲಿ ಜನರು ಕೊಟ್ಟಿದ್ದ ಆಡಿಷನಲ್ ಶೇರುಗಳನ್ನೇ ತಿಂದುಬಿಟ್ಟಿದ್ದಾರೆ. ಇದರ ಬಗ್ಗೆ ಕಳೆದ ಅಸೆಂಬ್ಲಿ ಅಧಿವೇಶನದಲ್ಲಿ ಒಂದು ಪ್ರಶ್ನೆ ಬಂದಾಗ ಆಗಿದ್ದ ಸಹಕಾರ ಶಾಖೆಯ ಮಂತ್ರಿಗಳಾದ ಶ್ರೀ ಮಾಲಿ ಮರಿಯಪ್ಪನವರು ಇಲ್ಲಿದ್ದ ಸೊಸೈಟಿಯಲ್ಲಿ ಹಣ ತಿಂದುಹಾಕಿರುವುದು ನಿಜ, ತನಿಖೆ ನಡೆಸುತ್ತೇವೆ ಮತ್ತು ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಅಲ್ಲಿ ಯಾವ ತನಿಖೆಯೂ ನಡೆದಂತೆ ಕಾಣಲಿಲ್ಲ. ಹೀಗೆ ಜನ ಕೊಟ್ಟ ಹಣವನ್ನು ಸಾರ್ವಜನಿಕ ಮುಖಂಡರುಗಳು ಮಾರೆಯುತ್ತ ಇರುವ ಪರಿಸ್ಥಿತಿ ಇಂದು ಒದಗಿದೆ. ಈ ರೀತಿಯಾದರೆ ಜನ ಸಹಕಾರ ಸಂಸ್ಥೆಗಳಲ್ಲಿ ನಂಬಿಕೆಯನ್ನು ಯಾವ ರೀತಿ ಇಡಬಹುದು; ಅವರು ಕೊಟ್ಟಂತಹ ಹಣಕ್ಕೆ ಯಾವ ಭದ್ರತೆ ಬರುತ್ತದೆ? ಎಲ್ಲಿ ಯಾವುದೇ ಪಕ್ಷದವರು ಅಧ್ಯಕ್ಷರಾಗಿರಲಿ ಅವರು ಕಾನೂನು ಪ್ರಕಾರ ಕೆಲಸ ಮಾಡದೇ ಹೋದರೆ ಅವರಿಗೆ ಶಿಕ್ಷೆಗಳನ್ನು ವಿಧಿಸಲು ಅವಕಾಶವಿರಬೇಕು. ಆದರೆ ರಾಜಕೀಯ ಹವ್ಯಾಸಗಳ ಗೊಂದಲಕ್ಕೆ ಸಿಕ್ಕಿಕೊಂಡು ಇಲ್ಲಿ ಕೆಲಸ ಮಾಡಲು ಅವಕಾಶ ಕೊಡಬಾರದು. ಇಂತಹ ಪರಿಸ್ಥಿತಿಗಳು ಮುಂದಾದರೂ ಬರಲು ಎಡೆಕೊಡಬಾರದು ಎಂದು ಇಲ್ಲಿ ಹೇಳುತ್ತೇನೆ. ತಾಲ್ಲೂಕು ಮಟ್ಟದಲ್ಲಿದ್ದುದು ಹೋಬಳಿ ಮಟ್ಟಕ್ಕೆ ಬಂದು ಈ ಗ್ರಾಮಾಂತರ ಮಟ್ಟಕ್ಕೂ ಬಂದಿದೆ. ತುಮಕೂರು ಜಿಲ್ಲೆಗಾಗಿ ಗ್ರಾಮಾಂತರ ಜನಕ್ಕೆ ಒಂದು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಎಂದು ಮಾಡಿದ್ದಾರೆ. ಅಲ್ಲಿ ಡೈರೆಕ್ಟರುಗಳನ್ನು ನಾಮಕರಣ ಮಾಡುವ ವಿಚಾರದಲ್ಲಿ ಶಾಸನದಲ್ಲಿ ಸರಿಯಾಗಿ ಮಾಡಬೇಕು ಎಂದು ಹೇಳುತ್ತ ಅದು ಇನ್ನೂ ಬಗೆಹರಿಯದೇ ಅಧಿಕಾರಿಗಳು ಕೂಡ ಸಾಲಗಳನ್ನು ಕೊಡಲು ಸರಕಾರದ ನಿರ್ದೇಶನ ಸರಿಯಾಗಿಲ್ಲದೆ ಇಲ್ಲಿನ ಜನಕ್ಕೆ ಸಾಲದ ಸೌಕರ್ಯಗಳು ಸಿಗದೇ ಇನ್ನು ಅದೇ ಮಟ್ಟದಲ್ಲಿಯೇ ಇದೆ. ಈ ರೀತಿಯಾದರೆ ತಾವು ಪ್ರಾರಂಭ

ಮಾಡಿದ ಕೆಲಸ ಯಶಸ್ವಿಯಾಗದೇ ಹೋದರೆ ಇದರಲ್ಲಿ ಸರಕಾರದ ನೀತಿಯೇನು ಎಂದು ನಾನು ತಿಳಿಯಬಯಸುತ್ತೇನೆ. ರಾಜಕೀಯ ಪ್ರಭಾವಗಳಿಗೋಸ್ಕರ ಡೈರೆಕ್ಟರು ನಾಮಕರಣ ಮಾಡಿದ ಯಾರನ್ನೋ ಒಬ್ಬರನ್ನು ಕೆಲಸ ಮಾಡಬೇಕು. ಇಲ್ಲದೇ ಇದ್ದರೆ ಇಲ್ಲ ಎಂದರೆ ಹೇಗೆ ? ಈ ಬ್ಯಾಂಕಿನ ಬಗ್ಗೆ ತಾವು ಸ್ವಲ್ಪ ಗಮನ ಕೊಡಬೇಕು. ಇದು ಯಾವ ಸ್ಥಿತಿಯಲ್ಲಿದೆ ಮತ್ತು ಗ್ರಾಮಾಂತರ ಸಹಕಾರ ಸಂಘಗಳು ಯಾವ ರೀತಿ ಕೆಲಸ ಮಾಡಬೇಕು, ಮತ್ತು ಈ ಬ್ಯಾಂಕಿನ ಮೂಲಕ ಸಣ್ಣ ಪುಟ್ಟ ಕೈಗಾರಿಕೆಯ ಉದ್ಯಮಿಗಳಿಗೆ ಸಾಲ ಕೊಟ್ಟು ಸಹಾಯಮಾಡಬೇಕು. ಆದ್ದರಿಂದ ನಶಿಸಿ ಹೋಗುತ್ತಿರುವ ಸಣ್ಣ ಪುಟ್ಟ ಕೈಗಾರಿಕೆಯ ಉದ್ಯಮಿಗಳಿಗೆ ಸೌಕರ್ಯಗಳನ್ನು ಒದಗಿಸಿ ಕೊಡಬೇಕು ಎಂದು ಸರಕಾರಕ್ಕೆ ಸೂಚನೆ ಕೊಡುತ್ತಿದ್ದೇನೆ.

ಇನ್ನು ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವಿಸ್ಸು ಸ್ಕೀಮು ಎಂದು ಏನು ಮಾಡಿದ್ದಾರೆ ಇದು ಬಹು ಕೆಳಮಟ್ಟಕ್ಕೆ ಇಳಿಯುತ್ತಿದೆ. ಇದರಿಂದ ಜನತೆಗಾಗಲೀ ದೇಶಕ್ಕಾಗಲೀ ಯಾವ ಅನುಕೂಲಗಳೂ ಆಗುತ್ತಿಲ್ಲ ಎಂದು ನಾನು ವಾಸ್ತವವಾಗಿ ಹೇಳುತ್ತೇನೆ. ಇಲ್ಲಿ ನಡೆಯುವ ಕೆಲಸಗಳು ಹೇಗಿವೆ ಎಂದರೆ ಮೂಗಿಗಿಂತ ಮೂಗುತಿ ಭಾರ ಎನ್ನುವಂತಾಗಿದೆ, ಪ್ರಿ ಎಕ್ಸ್‌ಟೆನ್‌ಷನ್, ಸೆಕೆಂಡು ಸ್ಟೇಜು ಎಲ್ಲ ಆದ ಮೇಲೆ ಒಂದು ಲಕ್ಷದಷ್ಟು ಒಂದು ವರ್ಷಕ್ಕೆ ಕೊಡುತ್ತಾರೆ. ಇದರಲ್ಲಿ ನಾನು ನೋಡುತ್ತಿರುವಂತೆ ಬರೀ ಸಂಬಳ ಸಾರಿಗೆಗಾಗಿ ಇವರುಗಳು ಓಡಾಡುವ ಜೀಪುಗಳಿಗಾಗಿ ಇವರು ಕೊಡುವ ಹಣ ವ್ಯಯವಾಗುತ್ತಿದೆಯೇ ಹೊರತು ಕೆಲಸವೇನೂ ಆಗುವುದಿಲ್ಲ. ಇದರಲ್ಲಿ ಸ್ಟಾಪ್ ಪ್ಯಾಟರ್ನ್ ಇದೆ ಎನ್ನುತ್ತಾರೆ ಆದರೆ ಈಗ ರಾಜ್ಯ ಸರಕಾರ ಅನುಸರಿಸುತ್ತಿರುವ ನೀತಿ ಬದಲಾವಣೆ ಮಾಡುವುದಕ್ಕೆ ಆಗಿಲ್ಲ. ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಬದಲಾವಣೆ ಮಾಡಲು ಸಲಹೆಗಳನ್ನು ಕೊಡಬಹುದು. ಸೋಷಿಯಲ್ ವೆಲ್‌ಫೇರು ಆಫೀಸರು, ಲೇಡಿ ಸೋಷಿಯಲ್ ವೆಲ್‌ಫೇರು ಆಫೀಸರು ಫಾರ್ ಎಜುಕೇಷನ್ ಮತ್ತು ಗ್ರಾಮ ಸೇವಕಿಯರು ಇವರುಗಳಿಗಾಗಿ ವೆಚ್ಚವಾಗುತ್ತಿರುವ ಹಣವನ್ನುಳಿಸಲು ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಸಲಹೆ ಮಾಡಬಹುದು. ಇಲ್ಲಿ ನಡೆಯುತ್ತಿರುವ ಅಕ್ರಮಗಳು ಹಾಗೂ ಅನ್ಯಾಯಗಳನ್ನು ತಪ್ಪಿಸಲು ಏಕೆ ತಕ್ಕ ಕ್ರಮ ಕೈಗೊಳ್ಳಬಾರದು ? ಎಂದು ನಾನು ಇಲ್ಲಿ ಕೇಳಬಯಸುತ್ತೇನೆ. ಇಷ್ಟು ಹೇಳಿ ಈ ಪ್ರಾಮುಖ್ಯವಾದ ಇಲಾಖೆಯಲ್ಲಿರುವ ಬೇಡಿಕೆಗಳಿಗಾಗಿ ಹಣ ಖರ್ಚುಮಾಡುತ್ತಿದ್ದರೂ ಲೋಪ ದೋಷಗಳು ಇವೆ. ಅಂತಹ ಕೆಲಸಗಳಿಗಾಗಿ ಸರಕಾರದ ಹಣವನ್ನು ಖರ್ಚುಮಾಡಿದರೆ ಜನತೆಗೆ ನಿರೀಕ್ಷಿಸಿದಷ್ಟು ಫಲ ದೊರೆಯುತ್ತಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri N. O. SAMAJI (Belgaum II).—(Spoke in Marathi).

Sri C. J. MUCKANNAPPA (Sira).—The time should be extended. These subjects directly touch the rural population.

Mr. SPEAKER.—How shall we find the time? Agriculture is equally important. If Hon'ble Members spend all the time on this Subject, there will not be much time for Agriculture Demand. It is left to the House. If the House wants to extend time in regard to this Demand, the House may do it; I have no objection. If on the other hand, the House feels like spending 5 to 6 hours on Agriculture Demand, the required time may be taken for it, because my own feeling is that every member will say that he is an agriculturist. Now I will call upon Sri R. N. Lakshmipathi to speak. He may take 10 minutes.

†ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರೀಬಿದನೂರು).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರಿಗೆ ಸಹಕಾರ ಮತ್ತು ರಾಷ್ಟ್ರೀಯ ವಿಸ್ತರಣೆ ಯೋಜನೆ ಈ ಎರಡು ಅತಿ ಮುಖ್ಯವಾದಂಥ ಇಲಾಖೆಗಳು ಸೇರಿವೆ. ಈ ರಾಷ್ಟ್ರೀಯ ವಿಸ್ತರಣೆ ಯೋಜನೆಯಲ್ಲಿ ಪಂಚಾಯತಿ ಮತ್ತು ಹಳ್ಳಿಗಳಿಗೆ ಸಂಬಂಧಪಟ್ಟ ಅನೇಕ ರೈತರಿಗೆ ಅನುಕೂಲವಾದಂಥ ಇಲಾಖೆಗಳು ಇವರಿಗೆ ಸೇರಿವೆ. ಇದರಲ್ಲಿ ಮುಖ್ಯವಾದುದು ಅಂದರೆ ಸಹಕಾರ ಇಲಾಖೆ. ಅವರಲ್ಲಿ ಒಂದು ಪ್ರಾರ್ಥನೆ ಏನೆಂದರೆ ಯಾವ ಒಂದು ಸಹಕಾರ ಸಂಸ್ಥೆಯಾಗಲೀ ಅಥವಾ ಹತ್ತಾರು ಜನಗಳಿಗೆ ಅನುಕೂಲವಾಗುವಂಥ ಸಂಘವಾಗಲೀ ಸರಿಯಾಗಿ ಕೆಲಸ ಮಾಡಬೇಕಾದರೆ ಸಂಘದ ನಾಯಕರಾಗಿರುವವರು, ಮಂತ್ರಿಗಳಾಗಿರುವವರು ಮೊದಲನೆಯದಾಗಿ ಸಹಕಾರ ಮನೋಭಾವನೆಯಿಂದ ಇರಬೇಕು ಎಂದು ನನ್ನ ಕೋರಿಕೆ. ನನಗೆ ತಿಳಿದಿರುವಹಾಗೆ ನಮ್ಮ ಜಿಲ್ಲೆಯಲ್ಲಿರತಕ್ಕ ಒಂದು ಸಂಸ್ಥೆಯ ವ್ಯವಹಾರ ನೋಡಿದರೆ ಮಂತ್ರಿಗಳು ಏನೊಂದು ಸಹಕಾರ ಮನೋಭಾವನೆ, ಸೌಹಾರ್ಧ ಇದರಲ್ಲಿ ಇರಬೇಕೆಂದು

(ಶ್ರೀ ಆರ್. ಎಚ್. ಲಕ್ಷ್ಮೀಪತಿ)

ಹೇಳಿದ್ದಾರೋ ಅದು ಆ ರೀತಿಯಾಗಿ ಸರಿದೂಗಿಸಿಕೊಂಡು ಹೋಗುವಂಥ ಮನೋಭಾವ ಕಾಣುತ್ತಾ ಇಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಪದೇ ಪದೇ ನಾನು ಸಹಕಾರ ಸೊಸೈಟಿಗಳ ವಿಚಾರವಾಗಿ ಹೇಳುತ್ತಾ ನಮ್ಮ ಸಕ್ಕರೆ ಕಾರ್ಖಾನೆ ನಿದರ್ಶನವನ್ನು ಕೊಡುತ್ತಿದ್ದೆ. ಅನೇಕ ಸಂಸ್ಥೆಗಳು ಮೇಲ್ಮಟ್ಟದ ಮಂತ್ರಿಗಳ ಪ್ರಭಾವಕ್ಕೆ, ರಾಜಕೀಯಕ್ಕೆ ಬಿದ್ದುದರ ಫಲವಾಗಿ ಅಲ್ಲಿ ಏನೊಂದು ಸಹಕಾರ ಪದ್ಧತಿಯಿಂದ ಜನಗಳಿಗೆ ಅನುಕೂಲವಾಗಬೇಕೋ ಅದು ಸಿಗುತ್ತಾ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಯನ್ನು ನಮ್ಮ ಜಿಲ್ಲೆಯಲ್ಲಿ ನಾಮಕರಣಮಾಡಬೇಕಾಗಿದೆ. ಅದನ್ನು ಇನ್ನೂ ಮಾಡಲಿಲ್ಲ. ಅದೇನು ಕಾರಣವೋ ನನಗೆ ಗೊತ್ತಾಗಲಿಲ್ಲ. ಶ್ರೀಮಾನ್ ರಾಮಕೃಷ್ಣಹೆಗ್ಗಡೆಯವರ ಬಗ್ಗೆ ವೈಯುಕ್ತಿಕವಾಗಿ ಆರೋಪಣೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ತಿಳಿದುಕೊಂಡಿದ್ದೆ. ಅವರ ಸಹಪಾಠಿಗಳ ಪ್ರಭಾವಕ್ಕೆ ಬಿದ್ದು ನಮ್ಮ ಜಿಲ್ಲೆಯ ರಾಜಕೀಯದಲ್ಲಿ ತೊಡಗುತ್ತಿದ್ದಾರೆ. ಆ ರೀತಿ ಅವರು ಮಾಡಬಾರದು. ನಮ್ಮಲ್ಲಿ ಜಿಜ್ಞಾಸೆ ಇರಬಹುದು. ಅದು ಹೇಗಾದರೂ ಇರಲಿ, ಒಟ್ಟಿನಲ್ಲಿ ಈ ಸಹಕಾರ ಇಲಾಖೆ ದಕ್ಷತೆಯಿಂದ ಕೆಲಸಮಾಡಬೇಕು. ಏನೇನು ಸಾಧನೆ ಮಾಡಬೇಕೋ ಅವನ್ನು ಸಾಧಿಸಿದರೆ ಮಾನ್ಯ ಮಂತ್ರಿಗಳಿಗೂ ಕೀರ್ತಿಬರುತ್ತದೆ. ಏಕೆಂದರೆ ಈ ಸ್ಥಾನ ಯಾವಾಗಲೂ ಸ್ಥಿರವಾಗಿರುವುದಿಲ್ಲ. ಅದರ ಕೆಲಸದಲ್ಲಿ ಯಾವಾಗಲೂ ಶಾಶ್ವತವಾದ ಸೌಭಾಗ್ಯವನ್ನು ಕಲಿಸುವ ಸಹಕಾರವನ್ನು ನೀಡಬೇಕು. ಅದಕ್ಕೆ ಎಲ್ಲರೂ ಸಹಕಾರಿಗಳಾಗಿರಬೇಕು. ಆದ್ದರಿಂದ ಸಹಕಾರಮಂತ್ರಿಗಳು ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರೊಡನೆ ಸಹಕಾರದ ಯಾವ ಒಂದು ಮನೋಭಾವನೆಯನ್ನು ಇಟ್ಟುಕೊಳ್ಳಬೇಕೋ ಅದನ್ನು ಇಟ್ಟುಕೊಂಡರೆ ಬಹಳ ಒಳ್ಳೆಯದು. ಆದರೆ ಇದುವರೆಗೆ ನಮ್ಮ ಜಿಲ್ಲೆಯಲ್ಲಿ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗೆ ನಾಮಕರಣ ಮಾಡದೇ ಇರುವುದಕ್ಕೆ ಕಾರಣವೇನು ಎಂಬುದನ್ನು ನಾನು ಕೇಳುತ್ತೇನೆ. ಏಕೋ ಇದರಲ್ಲಿ ರಾಜಕೀಯವಿರಬೇಕು ಎಂಬುದಾಗಿ ನಾನು ಹೇಳುತ್ತೇನೆ. ಮಂತ್ರಿಗಳಿಗೆ ಬೇಕಾದಂಥ ಪಕ್ಷ ರಾಜಕೀಯ ಒತ್ತಡದಿಂದ ಆ ರೀತಿ ಇಟ್ಟಿದ್ದಾರೆಂದು ನನಗೆ ಕಾಣುತ್ತದೆ. ಸೊಸೈಟಿಗಳು ಚೆನ್ನಾಗಿ ಕೆಲಸಮಾಡಿದರೆ ಮಂತ್ರಿಗಳಿಗೇ ಕೀರ್ತಿ ಬರುತ್ತದೆ. ಸಂಸ್ಥೆಯ ಉದ್ದೇಶ ಏನು ಇರುತ್ತದೋ ಅದು ಹತ್ತಾರು ಜನಗಳಿಗೆ ಅನುಕೂಲವಾಗುವಹಾಗೆ ಇರಬೇಕು. ಈ ದೃಷ್ಟಿಯಿಂದ ಕೆಲಸಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನು ನಮ್ಮ ಸಕ್ಕರೆ ಕಾರ್ಖಾನೆ ವಿಷಯ ತೆಗೆದುಕೊಂಡು ಹೇಳುವುದಾದರೆ ನಮ್ಮಲ್ಲಿ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದರು. ಅವರು ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದರು. ಅವರು ಒಂದು ಕಾರ್ಯಕ್ಷೇತ್ರದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದ್ದರು. ಯಾವ ಒಂದು ಆಸೆಯಿಂದ ಕೆಲಸ ಮಾಡುತ್ತಿರಲಿಲ್ಲ. ಯಾರೊಬ್ಬರಿಂದಲೂ ಆರೋಪಣೆಯಾಗಲೀ, ಪ್ರಶಂಸೆಯಾಗಲೀ ಪಡೆಯುತ್ತಿರಲಿಲ್ಲ. ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು. ಅಂತಹವರನ್ನು ಬದಲಾಯಿಸಿದ್ದಾರೆ. ಕಾರಣವೇನು ? ಅವರು ಚೆನ್ನಾಗಿ ಕೆಲಸಮಾಡುತ್ತಿರಲಿಲ್ಲವೆಂದು ಹೇಳಿದರು. ಯಾವಾಗಲೂ ವ್ಯಕ್ತಿಗೆ ಸಹಾಯವಾಗುವ ರೀತಿಯಲ್ಲಿ ಸೊಸೈಟಿಗಳಲ್ಲಿ ಆಫೀಸರುಗಳನ್ನು ನೇಮಿಸಿದರೆ ನಿಜವಾಗಿ ಅಂತಹ ಸೊಸೈಟಿಗಳು ಉಳಿಯುವುದಿಲ್ಲ. ಆದ್ದರಿಂದ ಅಂತಹ ಸಂಸ್ಥೆಗಳ ವಿಷಯದಲ್ಲಿ ಜಾಗ್ರತೆಯಿಂದ ಕೆಲಸಮಾಡಬೇಕು. ಈ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದಂತಹವರು ಅದರಲ್ಲೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದವರು ಸಕ್ಕರೆ ಪ್ರೊಡಕ್ಷನ್ ಹೆಚ್ಚಿಗೆ ಬರಬೇಕೆಂಬ ಉದ್ದೇಶದಿಂದ ಕೆಲಸಮಾಡುತ್ತಿದ್ದರು. ಅವರ ಪ್ರಭಾವವನ್ನು ಮಂತ್ರಿಗಳ ಮೇಲೆ ಬೀರಬೇಡಿ ಎಂದು ಹೇಳಿದರು. ಅಲ್ಲಿ ಯಾವ ಅಧಿಕಾರಿ ಬಂದರೂ, ಅವರು ಅಲ್ಲಿಯ ವ್ಯಕ್ತಿಗಳಿಗೆ ಅಧೀನರಾಗಿರಬೇಕು. ಅಂತಹ ವ್ಯಕ್ತಿಗಳಿಗೆ ಅನುಸರಿಸಿಕೊಂಡು ಹೋದರೆ ಮಾತ್ರ ಆ ಸಂಸ್ಥೆ ಉಳಿಯುತ್ತದೆ, ಇಲ್ಲದಿದ್ದರೆ ಸಂಸ್ಥೆಯೇ ಹಾಳಾಗುತ್ತದೆ. ಈ ರೀತಿ ನಮ್ಮ ಜಿಲ್ಲೆಯ ಸಕ್ಕರೆ ಕಾರ್ಖಾನೆಯ ಸ್ಥಿತಿ ಆಗಿರುತ್ತದೆ, ಇನ್ನು ಮುಂದೆ ಯಾದರೂ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ವಿಷಯ ಬಂದರೆ ನೇರವಾಗಿ ಪರೀಕ್ಷೆಮಾಡಿ ತೀರ್ಮಾನಕ್ಕೆ ಬಂದರೆ ಖಂಡಿತವಾಗಿ ಅವರಿಗೆ ತಕ್ಕ ಗೌರವಗಳನ್ನು ಸಲ್ಲಿಸುತ್ತಾರೆಂದು ನಾನು ಹೇಳುತ್ತೇನೆ. ನಿಜವಾಗಿ ಅವರು ಯಾರ ಪ್ರಭಾವಕ್ಕೂ ಒಳಗಾಗಬಾರದೆಂದು ತಮ್ಮ ಮೂಲಕ ಅವರಿಗೆ ಹೇಳುತ್ತೇನೆ.

ಇನ್ನು ಸೊಸೈಟಿಗಳ ವಿಷಯ ಸೊಸೈಟಿಗಳಿಂದ ಜನಗಳಿಗೆ ಅನುಕೂಲವಾಗಬೇಕೆಂಬ ಒಳ್ಳೆಯ ಉದ್ದೇಶದಿಂದ ಸರ್ಕಾರದವರು ರಚನೆ ಮಾಡುತ್ತಿದ್ದಾರೆ. ಆದರೆ ಕೆಲವು ಕಡೆಗಳಲ್ಲಿ ಇದರಲ್ಲಿ ಅನೇಕ ವಿಧವಾದಂಥ ನ್ಯೂನತೆಗಳಿವೆ, ಅಲ್ಲಿ ಒಂದು ರಾಜಕೀಯ ವಿದೆ, ದುಡ್ಡು ತಿಂದು ಹಾಕಿದ್ದಾರೆ, ಅನಾಚಾರವಿದೆ, ಎಂದು ದೂರುಗಳು ಬರುತ್ತಲೇ ಇರುತ್ತವೆ. ಯಾವ ಸೊಸೈಟಿಗೇ ಆಗಲೀ ಅಫಿಷಿಯಲ್ ಬಾಡಿಯನ್ನು ನೇಮಿಸಬೇಕು. ಆಗ ಅವರಿಗೆ ಭಯವಿರುತ್ತದೆ. ಸೊಸೈಟಿಯ ಕೆಲಸ

ಕಾರ್ಯಗಳೂ ಸಹ ಚೆನ್ನಾಗಿ ನಡೆಯುತ್ತವೆ, ಇಲ್ಲದಿದ್ದರೆ ಅನೇಕ ಕೆಲಸ ಕಾರ್ಯಗಳಿಗೆ ಚ್ಯುತಿ ಬರುತ್ತದೆ. ಆದ್ದರಿಂದ ಈ ಸೊಸೈಟಿಗಳ ಆಡಳಿತವನ್ನು ಮಾತ್ರ ನಾನ್-ಅಫಿಷಿಯಲ್ ಬಾಡಿಗೆ ಬಿಡಬೇಡಿ ಎಂಬುದಾಗಿ ನಾನು ಹೇಳುತ್ತೇನೆ. ಸ್ವಂತವಾಗಿ ನಾಲ್ಕೈದು ಸಣ್ಣಸಣ್ಣ ಕೋ ಆಪರೇಟಿವ್ ಸಂಘಗಳನ್ನು ಸೇರಿಸಿ ಅವಕ್ಕೆಲ್ಲಾ ಒಬ್ಬ ಅಫಿಷಿಯಲ್ ಸೆಕ್ರೆಟರಿಯನ್ನು ನೇಮಿಸಿ.

ಇನ್ನು ಆಡಿಟ್ ವಿಷಯ. ಆಡಿಟ್ ಇಲಾಖೆಯಲ್ಲಿ ಬಹಳ ಲೋಪ ದೋಷಗಳಿವೆ. ಹಿಂದೆ ನಾನು ಒಂದೆರಡು ಸೊಸೈಟಿಗಳ ಲುಕ್ಸಾನು ಸಹ ತಿಳಿಸಿದ್ದೇನೆ, ಸೊಸೈಟಿ ಆಡಿಟ್ ಲೆಕ್ಕಗಳೂ ಸಹ ಸರಿಯಾಗಿಲ್ಲ. ಏಕೆಂದರೆ ಸೊಸೈಟಿ ಆಡಿಟರ್ ಮತ್ತು ಸೆಕ್ರೆಟರಿ ಒಂದಾಗಿದ್ದಾರೆಂಬ ದೂರುಗಳೂ ಕೂಡ ಬರುವುದರಿಂದ ಸಂಬಂಧಪಟ್ಟ ಮಂತ್ರಿಗಳಾದವರು ಕೆಲವು ಕಡೆಗಳಲ್ಲಿ ಸರ್‌ಪ್ರೈಜ್ ವಿಜಿಟ್ಟನ್ನು ಕೊಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕು.

ಇನ್ನು ನಮ್ಮ ಜಿಲ್ಲೆಯಲ್ಲಿ ನಾಲ್ಕೈದು ಸೊಸೈಟಿಗಳಿಗೆ ಹಣ ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಗೌರೀಬಿದನೂರು ತಾಲ್ಲೂಕಿನಲ್ಲಿ ವಿಶೇಷವಾಗಿ ಹಣವನ್ನು ಕೊಟ್ಟಿದ್ದಾರೆ. ಇದಕ್ಕಾಗಿ ನಮ್ಮ ಜಿಲ್ಲೆಯ ರೈತರು ಎಷ್ಟೋ ಹಣವನ್ನು ಅಂದರೆ ಸಾವಿರ, 800, 500, ಹೀಗೆ ಷೇರು ಮೊಬಲಗನ್ನು ಇಟ್ಟಿದ್ದಾರೆ. ಸೊಸೈಟಿಯವರು ಬಾಕಿ ವಸೂಲಿಗಾಗಿ ರೈತರ ಪರವಾಗಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಲ್ಲಿ ಷೇರು ಮೊಬಲಗನ್ನು ಬಿಟ್ಟು ವಿನಾಯಿತಿ ಕೊಡಬೇಕೆಂದು ಕೇಳಿದ್ದಾರೆ. ಏಕೆಂದರೆ ರೈತನಿಗೆ ಬಹಳ ಕಷ್ಟಕಾಲವಿದೆ. ಪೂರ್ತಿ ಹಣಕ್ಕೆ ಬಡ್ಡಿ, ಸುಸ್ತಿ ಬಡ್ಡಿ, ಎಗ್ಸಿಕ್ಯೂಟಿವ್ ಚಾರ್ಜಸ್, ಆರ್ಬಿಟ್ರೇಷನ್ ಫೀಸ್, ಹಾಕುತ್ತಾರೆ. ನೂರಕ್ಕೂ ಹೆಚ್ಚು ಖರ್ಚು ಬೀಳುತ್ತದೆ ಅದನ್ನು ಕಡಿಮೆ ಮಾಡಬೇಕಾಗಿದೆ. ರೈತನ ಷೇರು ಬಂಡವಾಳಕ್ಕೆ ವಿನಾಯಿತಿ ಕೊಟ್ಟು ರೈತನಿಗೆ ಸಹಾಯ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

4 00 P.M.

ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಯಾವ ಒಂದು ತಾಲ್ಲೂಕನ್ನೇ ತೆಗೆದು ಕೊಂಡರೂ ಕೂಡ ಅಲ್ಲಿ ಹಿಂದೆ ಅಮಲ್ದಾರರು ಮಾತ್ರ ಇದ್ದರು. ಅವರೇ ಪ್ರತಿಯೊಂದು ಕೆಲಸವನ್ನೂ ಮಾಡುತ್ತಿದ್ದರು. ಇತ್ತೀಚೆಗೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಬಂದ ಮೇಲೆ ತಾಲ್ಲೂಕುಗಳಿಗೆ ಬಿ.ಡಿ.ಒ. ಮತ್ತು ಡೆಪ್ಯುಟಿ ಬಿ.ಡಿ.ಒ. ಹೀಗೆ ಅನೇಕ ಸಿಬ್ಬಂದಿಯನ್ನು ಸರ್ಕಾರದವರು ಕೊಟ್ಟಿದ್ದಾರೆ. ಆದರೆ ಈಗ ಅಲ್ಲಿ ಎಷ್ಟರ ಮಟ್ಟಿಗೆ ಕೆಲಸ ಕಾರ್ಯಗಳು ನಡೆದಿವೆ ಎನ್ನುವುದನ್ನು ನೋಡುವುದಾದರೆ ಮೊದಲು ಅಮಲ್ದಾರರು ಇದ್ದಾಗ ಎಷ್ಟು ಕೆಲಸ ನಡೆಯುತ್ತಿತ್ತೋ ಈಗಲೂ ಅಷ್ಟೇ ಕೆಲಸ ನಡೆಯುತ್ತಿದೆ. ಹೆಚ್ಚು ಸಿಬ್ಬಂದಿ ಇದ್ದರೂ ಹೆಚ್ಚು ಕೆಲಸವೇನೂ ಆಗಿಲ್ಲ. ಪ್ರತಿಯೊಬ್ಬ ಅಧಿಕಾರಿಯೂ ಕೂಡ ಜೀಪು ಇದ್ದರೆ ಮನೆ ಬಿಟ್ಟು ಹೊರಗಡೆ ಕೆಲಸ ಮಾಡುವುದಕ್ಕೆ ಹೊರಡುತ್ತಾರೆ, ಇಲ್ಲದೆ ಹೋದರೆ ಈಚೆಗೆ ಹೊರಡುವುದೇ ಇಲ್ಲ. ಆದ್ದರಿಂದ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಅಬಾಲಿಷ್ ಮಾಡಿ ಅಮಲ್ದಾರರಿಗೇ ಒಂದು ಜೀಪು ಕೊಟ್ಟು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟಿರತಕ್ಕ ಸಿಬ್ಬಂದಿಯನ್ನು ತಾಲ್ಲೂಕು ಅಮಲ್ದಾರರಿಗೇ ಕೊಟ್ಟು ಪ್ರತಿಯೊಂದು ಕೆಲಸಕಾರ್ಯಗಳನ್ನು ಅವರಿಗೆ ವಹಿಸಿದರೆ ನಾವು ಅಮಲ್ದಾರರಿಂದ ಹೆಚ್ಚಿನ ಕೆಲಸಗಳನ್ನು ನಿರೀಕ್ಷಿಸಬಹುದು. ಆದಷ್ಟು ಮಟ್ಟಿಗೆ ಸಿಬ್ಬಂದಿಗೋಸ್ಕರ ಹೆಚ್ಚು ಖರ್ಚು ಮಾಡುವುದನ್ನು ನಿಲ್ಲಿಸಬೇಕು. ಈ ಇಲಾಖೆಯಿಂದ ಜನತೆ ಏನೊಂದು ಕೆಲಸವನ್ನು ನಿರೀಕ್ಷಣೆ ಮಾಡುತ್ತಾರೆಯೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಗ್ರಾಮಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಿಗಳ ಸಂಬಂಧದಲ್ಲಿ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ಸಮಿತಿಯ ವರದಿಯು ಬರುತ್ತದೆ ಎಂದು ಹೇಳಿದ್ದಾರೆ. ಅದರಿಂದ ರೈತನಿಗೆ ಏನಾದರೂ ಅನುಕೂಲವಾಗುತ್ತದೆಯೇ ಎಂಬುದನ್ನು ನಾವು ನೋಡಬೇಕಾಗಿದೆ. ಆ ಸಮಿತಿಯ ವರದಿ ಬರುವವರೆಗೂ ಯಾವ ಸಿಬ್ಬಂದಿಯನ್ನೂ ಹೆಚ್ಚು ಮಾಡಕೂಡದು. ನಮ್ಮ ಅಧಿಕಾರಿಗಳು ಚೆನ್ನಾಗಿ ದಕ್ಷತೆಯಿಂದ ಕೆಲಸ ಮಾಡಬೇಕು. ಇಲಾಖೆಗಳಲ್ಲಿ ಕೆಲಸ ಕಾರ್ಯಗಳು ನಡೆಯುವ ಬಗ್ಗೆ ಮಂತ್ರಿಗಳಾಗಲೀ ಅಥವಾ ಇತರೆಯವರು ಯಾರೇ ಆಗಲೀ ತಮ್ಮ ಪ್ರಭಾವವನ್ನು ಬೀರಬಾರದು. ಆ ರೀತಿ ಮಾಡುವುದಾದರೆ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುತ್ತವೆ ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ ಈ ದಿವಸ ಸರ್ಕಾರ ದವರು ರೂರಲ್ ಡೆವಲಪ್‌ಮೆಂಟ್ ಕೋ ಆಪರೇಷನ್, ಕಮ್ಯೂನ್ಯಿಟಿ ಡೆವಲಪ್‌ಮೆಂಟ್ ವರ್ಕ್ಸ್ ಮತ್ತು ಮಿಸಲೇನಿಯಸ್ ಈ ಬೇಡಿಕೆಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇವುಗಳಿಗೆ ಈ ಸಭೆಯ ಮುದ್ರೆಯನ್ನು ಒತ್ತಿಸಿಕೊಂಡು ಹೋಗುತ್ತಿದ್ದಾರೆ. ಆದರೆ ನಾವು ಈ ಬೇಡಿಕೆಗಳಿಗೆ ಆತ್ಮೀಯತೆಯಿಂದ ಹಣವನ್ನು ಕೊಡುತ್ತಿಲ್ಲ. ಸರ್ಕಾರದವರು ಜುಲುಮೆಯಿಂದ ಈ ಬೇಡಿಕೆಗಳಿಗೆ ನಮ್ಮ ಒಪ್ಪಿಗೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇವರು ಈ ರೀತಿ ಮಾಡುತ್ತಾ ಇರುವುದಕ್ಕೆ ಏನು ಹೇಳುತ್ತಾರೆಂದರೆ "Rob peter and pay paul" ಎಂದು ಜನಗಳನ್ನು ಶೋಷಣೆ ಮಾಡಿ ಅವ ರಿಂದ ಹಣವನ್ನು ತೆಗೆದುಕೊಂಡು ಬಂದು ಜನಗಳ ಕಣ್ಣೆದುರಿಗೇ ಸರ್ಕಾರದವರು ಆ ಹಣವನ್ನು ಅಪವ್ಯಯ ಮಾಡುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಜನಗಳ ಸ್ಥಿತಿಗತಿಗಳನ್ನು ಇವೊತ್ತು ನಾವು ಕಣ್ಣಾರೆ ನೋಡುತ್ತಿದ್ದೇವೆ. ಆ ಜನಗಳು ಹೇಳುವುದನ್ನು ನಾವು ಕಿವಿಯಾರ ಕೇಳುತ್ತಿದ್ದೇವೆ. ಆ ವಿಚಾರಗಳನ್ನೆಲ್ಲಾ ನಾವು ಇವೊತ್ತು ಬಹಳ ಜಿಗುಪ್ಸೆಯಿಂದ ಸರ್ಕಾರದವರ ಮುಂದೆ ಇಡಬೇಕಾಗಿದೆ. ರೂರಲ್ ಡೆವಲಪ್‌ಮೆಂಟ್, ಕಮ್ಯೂನಿಟಿ ಡೆವಲಪ್‌ಮೆಂಟ್, ಮತ್ತು ಎನ್. ಇ. ಎಸ್. ಯೋಜನೆ ಇವುಗಳ ಮುಖಾಂತರ ಸರ್ಕಾರದವರು ಏನು ಹಣವನ್ನು ಖರ್ಚು ಮಾಡುತ್ತಿದ್ದಾರೋ ಅದು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಸಾಮಾನ್ಯ ಮನುಷ್ಯನಿಗೆ ಹೋಗು ತ್ತಿದೆಯೋ ಎಂಬುದನ್ನು ಆಲೋಚನೆ ಮಾಡಿ ನೋಡಬೇಕು. ಈ ಇಲಾಖೆಯ ಮಾನ್ಯ ಮಂತ್ರಿಗಳು ತಮ್ಮ ಚೇಂಬರ್‌ನಲ್ಲಿ ಕುಳಿತುಕೊಂಡಿದ್ದರೂ ಕೂಡ ಅವರು ಅವರ ದಿವ್ಯದೃಷ್ಟಿಯಿಂದ ನೋಡಿದರೆ ಅವರಿಗೆ ಅದು ಗೊತ್ತಾಗುತ್ತದೆ. ಇವೊತ್ತು ಹಳ್ಳಿಗಾಡಿನಲ್ಲಿರತಕ್ಕವರು Down Trodden and Rural Folk ಆಗಿದ್ದಾರೆ. ಈ ಎನ್.ಇ.ಎಸ್. ಬಾಕುಗಳನ್ನು ಆಫೀಸರ್ ಬ್ರೀಡಿಂಗ್ ಸೆಂಟರ್ ಎಂದು ಹೇಳಬಹುದು. ಮತ್ತು ಎನ್. ಇ. ಎಸ್. ಸ್ಕೀಮ್ ಎನ್ನುವುದನ್ನು ನಾವಲ್ ಈಟಿಂಗ್ ಸ್ಕೀಮ್ ಎಂದು ಹೊಸದಾಗಿ ಇದಕ್ಕೆ ನಾಮಕರಣ ಮಾಡಬಹುದು. ಇದು ಒಂದು ಹೊಸದಾಗಿ ದುಡ್ಡನ್ನು ತಿನ್ನತಕ್ಕ ವಿಧಾನ ಎಂದು ಹೇಳಬಹುದು. ಈ ಯೋಜನೆಯ ಮುಖಾಂತರ ಸರ್ಕಾರ ದವರು ಏನು ದುಡ್ಡನ್ನು ಖರ್ಚು ಮಾಡುತ್ತಿದ್ದಾರೆಯೋ ಆ ದುಡ್ಡು ಪ್ರಜೆಗಳ ಹಿತಕ್ಕೋಸ್ಕರ ಖರ್ಚಾಗುವಂತೆ ಕಾಣುವುದಿಲ್ಲ. ಈ ಯೋಜನೆಗೆ ಸಂಬಂಧಪಟ್ಟ ಆಫೀಸುಗಳಲ್ಲಿ ಕೆಲಸ ಮಾಡತಕ್ಕ ಆಫೀಸರುಗಳು ಸೂಟ್ ಹಾಕಿಕೊಂಡು ಜೀಪುಗಳಲ್ಲಿ ಓಡಾಡುತ್ತಿರುತ್ತಾರೆ. ಈ ರೀತಿ ಇವರು ಓಡಾಡುವುದರಿಂದ ಬೀದಿಯಲ್ಲಿ ಪೆಟ್ರೋಲ್ ಮಾಡಿದಹಾಗುಗುತ್ತದೆಯೇ ಹೊರತು ಇದರಿಂದ ಜನ ಗಳಿಗೆ ಯಾವ ಅನುಕೂಲವೂ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯ ಕಡೆಗೆ ಸ್ವಲ್ಪ ಹೆಚ್ಚು ಗಮನ ಕೊಡಬೇಕು. 100ಕ್ಕೆ 80 ಭಾಗ ವ್ಯವಸಾಯಗಾರರು ಇರತಕ್ಕ ಈ ನಮ್ಮ ದೇಶದಲ್ಲಿ ವ್ಯವಸಾಯ ಮುಂದುವರಿಯುವುದಕ್ಕೆ ಯಾವ ವಿಧಾನವನ್ನು ಅನು ಸರಿಸಬೇಕೋ, ಏನು ಸೌಲಭ್ಯವನ್ನು ಒದಗಿಸಬೇಕೋ ಅದನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಹಿಂದೆ ಅಗ್ರಿಕಲ್‌ಚರಲ್ ಶಾಖೆಯ ಮಂತ್ರಿಗಳಾಗಿದ್ದವರು ಜಪಾನ್ ಮೆಥೆಡ್ ಆಫ್ ಪ್ಯಾಡಿ ಕಲ್ಟಿವೇಷನ್ ಮಾಡಬೇಕು ಎಂದು ಹೇಳುತ್ತಿದ್ದರು. ಈಗ ಇರುವ ಮಂತ್ರಿ ಗಳೇನಿದ್ದಾರೆಯೋ ಅವರು ಚೈನಾಮೆಥೆಡ್ ಆಫ್ ಪ್ಯಾಡಿ ಕಲ್ಟಿವೇಷನ್ ಮಾಡಿದರೆ ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಜಪಾನ್ ಮೆಥೆಡ್ ಆಫ್ ಪ್ಯಾಡಿ ಕಲ್ಟಿವೇಷನ್ ನಮ್ಮಲ್ಲಿ ಮೊದಲಿನಿಂದಲೂ ಇದೆ. ಈ ಜಪಾನ್ ಮೆಥೆಡ್ ಆಫ್ ಪ್ಯಾಡಿ ಕಲ್ಟಿವೇಷನ್ನಿಗೆ ನಮ್ಮಲ್ಲಿ ಒಂದು ಗಾದೆಯನ್ನು ಹೇಳು ತ್ತಾರೆ. ಅದೇನೆಂದರೆ 'ಇಂಗು ಜೀರಿಗೆ ಇವೆರಡು ಇದ್ದರೆ ಮಂಗಮುಂಡೆ ಬೇಕಾದರೂ ಅಡಿಗೆ ಮಾಡುತ್ತಾಳೆ' ಎಂದು. ಹಾಗೆಯೇ ಸರಿಯಾಗಿ ಉಳುವೆ ಮಾಡಿ ಗೊಬ್ಬರ ವಗೈರೆಗಳನ್ನು ಸರಿಯಾಗಿ ಜಮೀನಿಗೆ ಹಾಕಿ ವ್ಯವಸಾಯವನ್ನು ಮಾಡಿದರೆ ಬೆಳೆ ಚೆನ್ನಾಗಿ ಬಂದೇ ಬರುತ್ತದೆ. ಆದ್ದರಿಂದ ಸರ್ಕಾರದವರು ರೈತನಿಗೆ ಬೇಕಾದ ಒಳ್ಳೆಯ ಬೀಜ, ಗೊಬ್ಬರ, ಮತ್ತು ವ್ಯವಸಾಯದ ಸಲಕರಣೆ ಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಈಗ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಏನಾಗಿದೆ ಎಂದರೆ ಅನುಕೂಲಸ್ಥರಾಗಿರತಕ್ಕವರಿಗೆ ಇನ್‌ಫ್ಲುಯೆನ್ಸ್ ಇರುವವರಿಗೆ ಗೊಬ್ಬರ ಸಿಕ್ಕುತ್ತದೆಯೇ ಹೊರತು ಬಡವರಿಗೆ ಸಿಕ್ಕುವುದು ಸ್ವಲ್ಪ ಕಷ್ಟವಾಗಿದೆ.

ನ್ಯಾಯವಾಗಿರತಕ್ಕ ರೈತರಿಗೆ ಗೊಬ್ಬರವನ್ನು ಕೊಡುವುದಿಲ್ಲ. ಕ್ರಿಮಿನಾಶಕಗಳನ್ನು ರೈತ ರಿಗೆ ಕೊಡದೆ ತಿಗಣೆಗಳನ್ನು ಸಾಯಿಸಲು ಉಪಯೋಗಿಸಿಕೊಳ್ಳುತ್ತಾರೆ. ಇವೆಲ್ಲವೂ ರೈತರಿಗೆ ಸರಿ ಯಾಗಿ ಸಿಕ್ಕುವ ಹಾಗೆ ಮಾಡಬೇಕು. ಸಾಮಾನ್ಯ ರೈತನಿಗೆ, ಬಡವನಿಗೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಅಭಿವೃದ್ಧಿ ಕೇಂದ್ರಗಳಿಂದ ಏನು ಸಹಾಯ ಮಾಡುತ್ತಿದ್ದೀರಿ? ರಾಷ್ಟ್ರೀಯ ವಿಸ್ತ ರಣಾ ಯೋಜನೆಯಲ್ಲಿ ಒಂದೂವರೆ ಲಕ್ಷ ರೂಪಾಯಿ ಸಾಲ ಕೊಟ್ಟಿದ್ದೀರಿ. ಇದೆಲ್ಲ political fans ಅಥವಾ ಪುಢಾರಿಗಳು ಎಂದು ಏನು ಹೇಳುತ್ತಾರೆಯೋ ಆ ತರಹ ಜನಗಳಿಗೆ ಮಾತ್ರ ಸಿಕ್ಕು ತ್ತಿದೆಯೇ ಹೊರತು ಸಾಮಾನ್ಯವಾಗಿ ಬಡ ರೈತನಿಗೆ, son of the soil, actual tiller, ಇಂಥ

ವರಿಗೆ ಸಾಲ ದೊರಕುತ್ತಿಲ್ಲ. ಯಾರಿಗೆ ಸಾಲದ ಆವಶ್ಯಕತೆ ಇರುತ್ತದೆಯೋ ಯಾರು ಅದನ್ನು ಪಡೆಯಲು ಯೋಗ್ಯರೋ ಅಂಥವರಿಗೆ ಮಾತ್ರ ಸಾಲಗಳನ್ನು ಕೊಡಬೇಕು. ಅದಿಲ್ಲದೆ ಸರ್ಕಾರವೇ ಅನ್ಯಾಯ ಮಾಡಿದರೆ ಅವರನ್ನು ಕೇಳುವವರು ಯಾರು? Community Development, ಹೇಗಿರಬೇಕು ಎಂದರೆ ಬಡ ರೈತನಿಗೆ ಅವರು ಮಾಡತಕ್ಕ ಪ್ರಯತ್ನದ ಫಲದ ಅರಿವಾಗಬೇಕು. ಆಗ ನಾವು ಕಮ್ಯುನಿಟಿ ಡೆವಲಪ್‌ಮೆಂಟ್ ಎಂದು ಹೇಳಬಹುದು.

ಜಮೀನು ಅಡಮಾನ ಬ್ಯಾಂಕು ಸಾಹುಕಾರರ ಸಂಸ್ಥೆಯಾಗಿದೆ. ಅಲ್ಲಿ ಬಡವನಿಗೆ ಸಾಲ ಸಿಕ್ಕುತ್ತಿಲ್ಲ. ಬ್ಯಾಂಕಿನವರು ಸೆಕ್ಯೂರಿಟಿ ಕೇಳಿದರೆ ಅವನಿಗೆ ಜಮೀನಿರುವುದಿಲ್ಲ. ಅವನು ಬಡವ. ಅವರವರ ಜಮೀನುಗಳನ್ನು ವಾರ ಅಥವಾ ಗುತ್ತಿಗೆಗೆ ಮಾಡಿಕೊಂಡು ಸಾಗುವಳಿ ಮಾಡುತ್ತಿರುವ ರೈತನಿಗೆ ಜಮೀನು ಅಡಮಾನ ಬ್ಯಾಂಕಿನಿಂದ ಏನು ಸಹಾಯವಾಗುತ್ತದೆ? ನಮ್ಮ ಸಂಸ್ಥಾನದಲ್ಲಿ ಕೋಟಿಗಟ್ಟಲೆ ಜನ ರೈತರಿದ್ದಾರೆ. ಇವರಿಗೆ ಈ ಬ್ಯಾಂಕಿನಿಂದ ಸಾಲ ಸಿಕ್ಕುತ್ತಿಲ್ಲ. ಸಾಹುಕಾರರಿಗೆ ಅಥವಾ ಮಧ್ಯವರ್ತಿ ಜನಗಳಿಗೆ ಸಿಕ್ಕುತ್ತದೆ. ಇದು ಸಾಹುಕಾರರ ಸಂಸ್ಥೆ. ನಿಜವಾದ ಸಹಾಯ, ಸಾಲ, ಬಡವನಿಗೆ, ನೇಗಿಲ ಯೋಗಿಗೆ ದೊರಕುವಂತಾಗಬೇಕು. ಅವನಿಗೆ ಜಮೀನಿಲ್ಲದೆ ಇದ್ದರೂ credi worthiness ಇದೆ. ತೆಗೆದುಕೊಂಡಿರುವ ಸಾಲವನ್ನು ಜೀತ ಮಾಡಿಯಾದರೂ ತೀರಿಸುತ್ತಾನೆ. ಸರ್ಕಾರದ ಹಣವನ್ನು ಅವನಿಗೆ ಕೊಟ್ಟರೆ ಯಾವ ರೀತಿಯಲ್ಲಿಯಾದರೂ ಸರ್ಕಾರಕ್ಕೆ ಸೇವೆ ಸಲ್ಲಿಸಿಯಾದರೂ ಅವನು ಹಣವನ್ನು ವಾಪಸ್ಸು ಮಾಡುತ್ತಾನೆ. ಆದುದರಿಂದ ನಾನು ಅರಿಕೆ ಮಾಡಿಕೊಳ್ಳುವುದು ದಯವಿಟ್ಟು ಇಂಥಾ ಸಾಲಗಳನ್ನು ಜಮೀನು ಅಡಮಾನ ಬ್ಯಾಂಕಿನಿಂದ ಕೊಡುವಾಗ ನಿಜವಾದ ರೈತನು ಯಾವನಿದ್ದಾನೆ ಅವನಿಗೆ ಕೊಡಬೇಕು, ಯಾವ ರೀತಿಯಲ್ಲಾದರೂ ಅವನಿಗೆ ಸಾಲ ದೊರಕುವಂತೆ ಮಾಡಬೇಕು.

Industrial Co-operative Societies ಮುಖಾಂತರ ಸಣ್ಣ ಪುಟ್ಟ ಕೈಗಾರಿಕೆ ಮಾಡುವವರಿಗೆ ಸಾಲವನ್ನು ಕೊಡುತ್ತಿದ್ದರು. ಈಗ ಹೊಸದಾಗಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಒಂದು ಬ್ಯಾಂಕ್ ಪ್ರಾರಂಭ ಮಾಡಿದ್ದಾರೆ. Industrial Society ಮಾಡುತ್ತಿದ್ದ ಕೆಲಸವನ್ನು ಮಾಡುವುದಕ್ಕೆ, industrial loan ಕೊಡುವುದಕ್ಕೆ ಈ ಬ್ಯಾಂಕನ್ನು ಸ್ಥಾಪನೆ ಮಾಡಿದ್ದಾರೆ. ಈಗ ಸೊಸೈಟಿಯಲ್ಲಿ ಕೈಗಾರಿಕಾ ಸಾಲವನ್ನು ಕೇಳಿದರೆ ಕೊಡುವುದಕ್ಕಾಗುವುದಿಲ್ಲ. ಸರ್ಕಾರದವರನ್ನು ಕೇಳಿದರೆ ಬ್ಯಾಂಕಿನವರನ್ನು ಕೇಳಿ ಎಂದು ಹೇಳುತ್ತಾರೆ ಅವರನ್ನು ಕೇಳಿದರೆ ನಮ್ಮದು ಆರ್ಗನೈಜ್ ಆಗಿಲ್ಲ ಎಂದು ಹೇಳುತ್ತಾರೆ. ಇದರಿಂದ Industrial Societies ಕೆಲಸ ಮಾಡದೆ ಇವೆ. Rural Industrial Societies ಮಾಡುವುದರ ಉದ್ದೇಶ ಆ ಭಾಗದಲ್ಲಿರುವ ಕೈಗಾರಿಕೆಗಳಿಗೆ ಸಹಾಯವಾಗಬೇಕು ಎನ್ನುವುದೇ ಆಗಿದೆ. ಆದುದರಿಂದ ಇವು ಸರಿಯಾಗಿ ಕೆಲಸ ಮಾಡುವಂತೆ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ)—ಸ್ವಾಮಿ, ನಮ್ಮ ಮುಂದೆ ಇರತಕ್ಕ ಮೂರು ವಿಷಯಗಳೂ ಬಹಳವಾಗಿ ಹಳ್ಳಿಯ ಜನಗಳ ಮೇಲೆ ಪರಿಣಾಮ ಮಾಡತಕ್ಕದ್ದು. ಸರ್ಕಾರ ಏನು ಹೇಳುತ್ತದೆಂದರೆ ಸಹಕಾರ ತತ್ವದ ಮೇಲೆಯೇ ಎಲ್ಲವೂ ನಡೆಯಬೇಕು ಎಂದು ಹೇಳುತ್ತದೆ. ವ್ಯವಸಾಯ ಮೊದಲ್ಗೊಂಡು ಅಕ್ಕಿ, ಬೇಳೆ, ಉಪ್ಪು, ಮೆಣಸಿನಕಾಯಿ ಇವುಗಳ ಕೊಳ್ಳುವಿಕೆ ಮತ್ತು ಮಾರಾಟ ಎಲ್ಲವೂ ಸಹಕಾರ ತತ್ವದ ಮೇಲೆಯೇ ನಡೆಯಬೇಕೆಂದು ಹೇಳುತ್ತಾರೆ. ಎರಡನೆಯದು ಏನು ಹೇಳುತ್ತಾರೆಂದರೆ ಸೊಸೈಟಿಗಳ ಮುಖಾಂತರ ಎಲ್ಲ ವ್ಯವಹಾರವನ್ನು ಮಾಡಬೇಕು, Land Martgage Bank, Credit Societies, Service Societies, Multi-purpose Societies, Schools and Colleges ಸಹಕಾರ ಸಂಸ್ಥೆಗಳಿಂದ ನಡೆಯಬೇಕು, ಸಕ್ಕರೆ ಕಂಪೆನಿಗಳು ಕೂಡ ಜಾಯಿಂಟ್ ಸ್ಟಾಕ್ ಕಂಪೆನಿಗಳಾಗಿರದೆ ಸೊಸೈಟಿಗಳ ಮುಖಾಂತರವೇ ನಡೆಯಬೇಕು ಎಂದು ಹೇಳುತ್ತಾರೆ. ಪಂಚಾಯತಿ ಹೇಗೆ ಕೆಲಸ ಮಾಡುತ್ತದೆ, ಅದರ ಸೆಕ್ರೆಟರಿ ಹೇಗೆ ಕೆಲಸ ಮಾಡುತ್ತಾರೆ, ತಾಲ್ಲೂಕು ಬೋರ್ಡ್ ಹೇಗೆ ಕೆಲಸ ಮಾಡುತ್ತದೆ, village level worker ಹೇಗೆ ಕೆಲಸ ಮಾಡುತ್ತಾನೆ, Industrial Extension Officer ಹೇಗೆ ಕೆಲಸ ಮಾಡುತ್ತಾನೆ, ಸೊಸೈಟಿ ಇನ್ಸ್‌ಪೆಕ್ಟರ್ ಹೇಗೆ ಕೆಲಸ ಮಾಡುತ್ತಾನೆ ಇದನ್ನೆಲ್ಲ ಹೇಳಿದರೆ ಒಳ್ಳೆಯದೆಂದು ಕಾಣುತ್ತದೆ. ಇವತ್ತು ಲಕ್ಷಾಂತರ ರೂಪಾಯಿ ಸೊಸೈಟಿಗಳಲ್ಲಿ misappropriate ಆಗಿದೆ. ಸರ್ಕಾರ ತನ್ನ ಆಡಳಿತವನ್ನು ಬಿಗಿ ಮಾಡಬೇಕು.

ನನ್ನ ಕೈಯ್ಯಲ್ಲಿ ರಿಸರ್ವ್ ಬ್ಯಾಂಕಿನವರು ಹೊರಡಿಸಿರುವ Statistical Statement relating to co-operative movement in India ಎನ್ನುವ ಪುಸ್ತಕವಿದೆ. ಅದರಲ್ಲಿ ಮೈಸೂರಿಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಕೊಟ್ಟಿದ್ದಾರೆ. ಇದರ ಮೇಲೆ not to be

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

released before 6th March 1964 ಎಂದು ಇದೆ. ಯಾರ ಹತ್ತಿರವೋ ಒಂದು ಕಾಪಿಯನ್ನು ನಾನು ತಂದಿದ್ದೇನೆ.

Reserve Bank publication Statistical Statement relating to the Co-operative Movement in India, page 289, item 109.

Mr. SPEAKER.—I suppose the Member is aware that quoting from books are not permitted.

Sri C. J. MUCKANNAPPA.—This is Reserve Bank publication. It is not some story I am reading. It is some survey of the Reserve Bank.

Mr. SPEAKER.—So, a distinction should be made between a story and the book from the Reserve Bank. So far as rules are concerned. Members may draw the facts from anywhere but they should not read any book.

Sri C. J. MUCKANNAPPA.—I am not reading. I will give only the figures. Embezlement cases. Primary Credit Institutions 79, Primary Non-credit societies 2; Primary Credit......

Mr. SPEAKER.—He said that he was not reading; what else is he doing now?

Sri C. J. MUCKANNAPPA.—Sir, I cannot learn by heart all the figures; I will have to read it from here. The Chair may please presume that this is a note. (laughter)

ಸೆಂಟ್ರಲ್ ಕ್ರೆಡಿಟ್ ಇನ್‌ಸ್ಟಿಟ್ಯೂಷನ್ಸ್ 8, ಪ್ರೈಮರಿ ಕ್ರೆಡಿಟ್ ಇನ್‌ಸ್ಟಿಟ್ಯೂಷನ್ಸ್ 95 ಮತ್ತು ಪ್ರೈಮರಿ ನಾನ್ ಕ್ರೆಡಿಟ್ ಇನ್‌ಸ್ಟಿಟ್ಯೂಷನ್ಸ್ 113, societies where embezlement has taken place, Sir.

ಸ್ವಾಮಿ, ರಿಸರ್ವ್ ಬ್ಯಾಂಕಿನ ವರದಿಯಲ್ಲಿ ಇದೇ ಭಾಗದಲ್ಲಿ ಮೈಸೂರು ಸಂಸ್ಥಾನದಲ್ಲಿ ಶೇಕಡ ಹದಿನಾಲ್ಕರಷ್ಟು ಎಂಬೆಸಲ್‌ಮೆಂಟ್ ಕೇಸುಗಳಿವೆ ಎಂದು ತೋರಿಸಿದ್ದಾರೆ. ಆಡಿಟ್ ವಿಷಯದಲ್ಲಿ ಎಲ್ಲವನ್ನೂ ಮಾಡಿದ್ದೇವೆಂದು ಹೇಳಿದರು, ಆದರೆ ಸಾವಿರದ ಏಳುನೂರ ತೊಂಬತ್ತು ಆಡಿಟ್ ವರದಿಗಳು ಪೆಂಡಿಂಗ್ ಆಗಿವೆ ಮತ್ತು ಇಪ್ಪತ್ತೆಂಟು ಸಾವಿರ ಡಿಸ್‌ಪ್ಯೂಟೆಡ್ ಕೇಸುಗಳು ಎಂದು ಹೇಳಿದ್ದಾರೆ. ಇದರಲ್ಲಿ ಎಂಟು ಸಾವಿರ ಮಾತ್ರ ತೀರ್ಮಾನವಾಗಿವೆ, ಇನ್ನೂ ಇಪ್ಪತ್ತು ಸಾವಿರ ಹಾಗೆಯೇ ಉಳಿದಿವೆ. ಇವುಗಳನ್ನು ಯಾವಾಗ ತೀರ್ಮಾನ ಮಾಡಿ ನ್ಯಾಯವನ್ನು ದೊರಕಿಸುತ್ತಾರೆಂದು ಕೇಳುತ್ತೇನೆ. ಇನ್ನೂ ಹೇಳಬೇಕಾದ ವಿಷಯ ಬಹಳವಿದೆ, ಸಹಕಾರ ಸಂಘಗಳ ಮೂಲಕ ವಿದ್ಯುಚ್ಛಕ್ತಿ ಪಂಪುಗಳನ್ನು ಕೊಡಬೇಕೆಂದು ಹೇಳುತ್ತಿದ್ದಾರೆ, ಅದರ ಬಗ್ಗೆ ಹೇಳಬೇಕು, ಆದರೆ ನನಗೆ ಕಾಲಾವಕಾಶವಿಲ್ಲ. ಈ ಸಹಕಾರ ಚಳುವಳಿಯಲ್ಲಿ ಕಳೆದ ನಾಲ್ಕು ವರ್ಷ ಬಹಳ ತಾಪಾತ್ರಯವಾಗಿತ್ತು. ಈಗಿನ ಮಂತ್ರಿಗಳು ಇನ್ನೂ ತರುಣರು, ಉತ್ಸಾಹದಿಂದ ಕೆಲಸ ಮಾಡುತ್ತಾರೆಂಬ ನಂಬಿಕೆ ಇದೆ. ಇವರು ಈ ಇಲಾಖೆಯ ಕೆಲಸವನ್ನು ಧೈರ್ಯವಾಗಿ ಮಾಡಿದ್ದಾರೆ. ಒಂದು ಸಹಕಾರ ಸಂಘವನ್ನು ಸೂಪರ್‌ಸೀಡ್ ಮಾಡಿದ್ದಾರೆ, ಅದರ ಬಗ್ಗೆ ಎಷ್ಟೋ ಒತ್ತಾಯ ಬಂದರೂ ಅವರು ಆಜ್ಞೆಯನ್ನು ಬದಲಾವಣೆ ಮಾಡಿಲ್ಲ. ಪಕ್ಷದ ಪ್ರಭಾವಕ್ಕೂ ಅವರು ಬಲಿಯಾಗಬಾರದು. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ದೊಡ್ಡ ಶಿವಾರದ ಸೊಸೈಟಿಯಲ್ಲಿ ಹನ್ನೆರಡರಿಂದ ಹದಿನಾಲ್ಕು ಸಾವಿರ ರೂಪಾಯಿ ದುರುಪಯೋಗವಾಗಿದೆ. ಅಲ್ಲಿ ಕೇಳಿದರೆ ಬ್ಯಾಲೆನ್ಸ್ ಷೀಟ್ ಕೊಡುವುದಿಲ್ಲ. ಈ ಬಗ್ಗೆ ನನ್ನಲ್ಲಿ ಒಂದು ಪತ್ರವಿದೆ, ಅದನ್ನು ಕೊಡುತ್ತೇನೆ. ಇದನ್ನು ಕೂಲಂಕಷವಾಗಿ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳದೇಹೋದರೆ ಈ ಸಹಕಾರ ಸಂಘದಿಂದ ದೇಶಕ್ಕೆ ತೊಂದರೆಯಾಗುತ್ತದೆ. ಗೂಳಿಗಳು ಮೈದಾನದಲ್ಲಿ ಸ್ವೇಚ್ಛೆಯಾಗಿ ಹುಲ್ಲು ಮೇಯುತ್ತಿರುವಂತೆ ಅನೇಕರು ಈ ಸಹಕಾರ ಸಂಘಗಳಲ್ಲಿ ಮೇಯುತ್ತಾ ತಮ್ಮ ಜೀವನವನ್ನು ಮಾಡುತ್ತಿದ್ದಾರೆ. ಸರಕಾರ ರಿಜರ್ವ್ ಬ್ಯಾಂಕಿನಿಂದ ಸಾಲ ಮಾಡಿಕೊಡುತ್ತಾರೆ. ಆ ಹಣಕ್ಕೆ ಸರಕಾರದವರು ಜವಾಬ್ದಾರರು ಮತ್ತು ದೇಶದ ಜನತೆ ಜವಾಬ್ದಾರರು. ದೇಶದ ಹೆಸರಿನಲ್ಲಿ ಕೆಲವು ಜನರು ಪಾಳೆಯಗಾರರಾಗಿ ಹೀಗೆ ಮಾಡುವು

ದಾದರೆ ದೇಶಕ್ಕೆ ಒಳ್ಳೆಯದಲ್ಲ. ನನ್ನಲ್ಲಿರುವ ಈ ಕಾಗದವನ್ನು ಮಂತ್ರಿಗಳಿಗೆ ಕಳುಹಿಸುತ್ತೇನೆ, ಆದರ ಮೇಲೆ ಅವರು ಸೂಕ್ತ ಕ್ರಮ ತೆಗೆದುಕೊಳ್ಳಲಿ.

ಇನ್ನು ಖಾದಿ ಮತ್ತು ಗ್ರಾಮೋದ್ಯೋಗದ ವಿಚಾರ ಹೇಳುವುದಾದರೆ, 1964-65ರ ಬಡ್ಜೆಟ್ ಅಂದಾಜಿನಲ್ಲಿ ಮುವತ್ನಾಲಕ್ಕು ಲಕ್ಷ, ತೊಂಬತ್ತೇಳು ಸಾವಿರದ ಐನೂರು ರೂಪಾಯಿ ಅಂದಾಜು ಮಾಡಿದ್ದಾರೆ. ಇದರ ಒಟ್ಟು ವ್ಯವಹಾರ ಐವತ್ತು ಲಕ್ಷ ರೂಪಾಯಿ ಆಗುತ್ತಿದೆ. ಈ ವಿಷಯವನ್ನು ನಾನು ಹೇಳುತ್ತಿರುವುದು ನಾಲ್ಕನೆಯ ಸಾರಿ. ಇದಕ್ಕೆ ಕೊಡುತ್ತಿರುವ ಹಣ ಕೇಂದ್ರ ಸರಕಾರ ದಿಂದ ಬಂದದ್ದಿರಬಹುದು ಅಥವಾ ರಾಜ್ಯ ಸರಕಾರದ್ದಿರಬಹುದು, ಏನೇ ಆದರೂ ದೇಶದ ಜನತೆ ಇದಕ್ಕೆ ಜವಾಬ್ದಾರರು. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರ ಖಚಿತವಾದ ಅಭಿಪ್ರಾಯವೇನೆಂದರೆ, ಯಾರು ಇದನ್ನು ವರ್ಷಕ್ಕೆ ಆರುತಿಂಗಳು ಉಪಕಸಬಾಗಿಟ್ಟುಕೊಂಡಿ ದ್ದಾರೋ ಅವರಿಗೆ ಸಹಾಯ ಕೊಡಿ ಎಂಬುದು. ಆದರೆ ಯಾರು ಮಗ್ಗದ ಮೇಲೆ ಕುಳಿತು ಕೆಲಸ ಮಾಡುತ್ತಾನೋ ಅವನಿಗೆ ಇದರಿಂದ ಸಹಾಯ ತಲಪಿಲ್ಲ; ಶ್ರೀಮಂತರಿಗೆ ತಲಪಿದೆ. ಅನೇಕ ಅನಾಮಧೇಯ ಸಹಕಾರ ಸಂಘಗಳ ಹೆಸರಿಗೆ ಬಿಲ್ಲು ಹಾಕಿ ಲೆಕ್ಕಾ ಬರೆಯುತ್ತಿದ್ದಾರೆ. ಉಣ್ಣೆ ಕೇಂದ್ರ ಸಹಕಾರ ಸಂಘ ಎಂಬ ಒಂದು ಸಂಘವಿದೆ, ಅಲ್ಲಿ ಒಂದುನೂರ ಹತ್ತು ಕೋಟಿ ರೂಪಾಯಿ ಗಳ ವ್ಯವಹಾರ ನಡೆಯುತ್ತಿದೆ. ಅಲ್ಲಿ ಒಂದು ಪ್ರತಿಸರಕಾರ, ಎಂದರೆ, ಪ್ಯಾರಲೆಲ್ ಸರಕಾರವೇ ನಡೆಯುತ್ತಿದೆ. ಈ ಸರಕಾರವನ್ನು ಪದಚ್ಯುತಿಗೊಳಿಸುವುದಕ್ಕೆ ನಡೆಯುತ್ತಿದೆ. ಆ ಸರಕಾರಕ್ಕೆ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರೇ ಮುಖ್ಯ ಮಂತ್ರಿಗಳು. ಅದನ್ನು ಸರಿ ಯಾಗಿ ನೋಡಿ, ಅಲ್ಲಿನ ದುರಾಡಳಿತಕ್ಕೆ ಯಾರು ಜವಾಬ್ದಾರರೋ ಅವರನ್ನು ಬಲಿ ಹಾಕದಿದ್ದರೆ ಮುಂದೆ ಬಹಳ ತೊಂದರೆಯಾಗುತ್ತದೆ. ಆ ಪ್ರತಿಸರಕಾರದ ಮುಖ್ಯ ಮಂತ್ರಿಯನ್ನು ಕಂಡರೆ ಎಲ್ಲರಿಗೂ ಹೆದರಿಕೆ. ಆ ಸಹಕಾರ ಸಂಘದ ಆಡಳಿತವನ್ನು ನೋಡಿ, ನಾಚಿಕೆಯಿಂದ ಕೆಲವರು ಹೊರಗೆ ಬಂದಿದ್ದಾರೆ. ಅದನ್ನು ನೋಡಿ, ಅಲ್ಲಿನ ದುರಾಡಳಿತವನ್ನು ತಪ್ಪಿಸದೇಹೋದರೆ ಮುಂದೆ ಬಹಳ ತೊಂದರೆಗೆ ಅವಕಾಶವಾಗುತ್ತದೆಂದು ಮುಖ್ಯ ಮಂತ್ರಿಗಳು, ಹಣಕಾಸಿನ ಸಚಿವರು ಮತ್ತು ಈ ಸಭೆಯ ಗಮನಕ್ಕೆ ತಂದಿದ್ದೇನೆ. ಈ ವಿಷಯದಲ್ಲಿ ಕೂಲಂಕಷವಾಗಿ ವಿಮರ್ಶೆ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

†ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಮಾನ್ಯ ಅಧ್ಯಕ್ಷರೆ, ರೂರಲ್ ಡಿವೆಲಪ್‌ಮೆಂಟ್ ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ ವಿಷಯದಲ್ಲಿ ಕೇವಲ ಕೆಲವು ನಿಮಿಷಗಳಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಕಮ್ಯೂನಿಟಿ ಡೆವಲಪ್‌ಮೆಂಟ್ ಸ್ಥಾಪನೆ ಮಾಡುವಾಗ ಯಾವ ವಿಚಾರ ಅಥವಾ ಧ್ಯೇಯವನ್ನಿಟ್ಟುಕೊಂಡಿದ್ದೆವೋ ಆ ಧ್ಯೇಯ ಸಾಧನೆಯ ಕಡೆಗೆ ನಾವು ಹೋಗಲಿಲ್ಲ. ಎವ್ಯಾಲ್ಯುಯೇಷನ್ ಕಮಿಟಿಯವರು ಕೂಡ ಈ ವಿಷಯವನ್ನು ಹೇಳಿದ್ದಾರೆ. ಗ್ರಾಮಾಂತರಗಳಲ್ಲಿ ಮ್ಯಾನ್‌ಪವರ್ ಸಮರ್ಪಕವಾಗಿ ಉಪಯೋಗ ಮಾಡಿಕೊಳ್ಳುವ ಕಾರ್ಯದಲ್ಲಿ ವಿಫಲರಾಗಿದ್ದೇವೆ. ಈ ಹೊತ್ತು ಎಲ್ಲ ಕಡೆಯೂ ಎಲ್ಲ ಕೈಗಳೂ ಕೆಲಸ ಮಾಡಿ ದೇಶದ ಉತ್ಪತ್ತಿಯನ್ನು ಸಂಪತ್ತನ್ನು ಹೆಚ್ಚಿಸಬೇಕಾಗಿದೆ. ಎಲ್ಲಾ ರೀತಿ ಕೆಲಸ ಮಾಡಿ ದೇಶದ ಉತ್ಪತ್ತಿ ಹೆಚ್ಚಿಸಬೇಕೆಂಬ ಸಮಯದಲ್ಲಿ ಐಡಲ್ ಪವರ್ ಆಗಿ ಇಟ್ಟುಕೊಂಡು ಕಮ್ಯೂನಿಟಿ ಡೆವಲಪ್‌ಮೆಂಟ್, ಎನ್. ಇ. ಎಸ್. ಸರಿಯಾಗಿ ಉಪಯೋಗಿಸಿಕೊಳ್ಳದೇ ಇರತಕ್ಕದ್ದು ಇದೊಂದು ದೊಡ್ಡ ದುರ್ದೈವ. ರಿ-ಓರಿಯೆಂಟೇಶನ್ ಮಾಡದೇ ಇದ್ದುದು ಬಹಳ ದೊಡ್ಡ ತಪ್ಪು ಆಗಿದೆ.

4-30 P.M.

ಸಹಕಾರ ವಿಷಯದ ಬಗ್ಗೆ ಹೆಚ್ಚಾಗಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಒಂದೇ ಒಂದು ವಿಷಯ ಹೇಳ ಬೇಕಾಗಿದೆ ಸಣ್ಣ ಸಣ್ಣ ಕೆಲಸಗಳಲ್ಲಿ ಕೆಳಗಿನ ಅಧಿಕಾರಿಗಳು ಮಾಡತಕ್ಕಂಥ ಆರ್ಡರ್‌ಗಳ ವಿಚಾರದಲ್ಲಿ ಮಂತ್ರಿಗಳು ಮಂತ್ರಿಗಳ ಸಮೀಪವರ್ತಿಗಳು ಕೈ ಹಾಕಿ ಪ್ರವೇಶ ಮಾಡುವುದರಿಂದ ಬಹಳ ಹಾನಿಯಾಗಿದೆ. ಒಂದು ಉದಾಹರಣೆ ಕೊಡುತ್ತೇನೆ. ಅದು ನಿಮಗೆ ಬಹಳ ಸಣ್ಣ ವಿಷಯ ಅನಿಸಬಹುದು, ಅದು ನಮಗೆ ದೊಡ್ಡ ವಿಷಯ ಆಗಿದೆ. ಅದು ಒಂದು ಕ್ವೆಶ್ಚನ್ ಆಫ್ ಪ್ರಿನ್ಸಿಪಲ್ ಆಗಿದೆ. ಒಂದು ಕಡೆ ಬಿ.ಡಿ.ಒ. ಶಿಫಾರಸು ಮೇರೆಗೆ ಜಿಲ್ಲಾ ಡೆಪ್ಯುಟಿ ಕಮಿಷನರ್ ಅವರು ಪಂಚಾಯತಿ ಕಾರ್ಯದರ್ಶಿಯನ್ನು ಸಸ್ಪೆಂಡ್ ಮಾಡಿದರು. ಈ ಪಂಚಾಯತಿ ಕಾರ್ಯದರ್ಶಿಗೆ ಹೋಟೆಲ್ ಮಾಲಿಕರ ಸಂಬಂಧ ಇದೆ. ಅವನು ಮಂತ್ರಿಗಳ ಕಡೆ ಬಂದು ಪ್ರಭಾವಶಾಲಿ ವ್ಯಕ್ತಿಗಳಿಂದ ನೇರವಾಗಿ ಮಂತ್ರಿಗಳಿಗೆ ಹೇಳಿಸಿ ಡೆಪ್ಯುಟಿ ಕಮಿಷನರ್ ಅವರ ಆರ್ಡರ್ ಸಸ್ಪೆಂಡ್ ಮಾಡಿದ್ದನ್ನು ರದ್ದು ಮಾಡಿಸಿದರು. ಇಂಥ ಸಣ್ಣ ಪುಟ್ಟ ಟ್ರಾನ್ಸಫರ್ ವಿಷಯ ದಲ್ಲಿ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ಈ ರೀತಿ ಇಂಟರ್‌ಫಿಯರ್ ಮಾಡುವುದು ತಪ್ಪು ಎಂದು

(ಶ್ರೀ ಸಂಜೀವನಾಥ ಐಕಳ)

ನನಗೆ ಅನಿಸುತ್ತದೆ. ಇದರ ಪರಿಣಾಮವಾಗಿ ಪಂಚಾಯತಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಈ ರೀತಿ ಮಂತ್ರಿಗಳು ಕೈ ಹಾಕುವುದರಿಂದ ಜನರು ಸಹಕಾರ ಮಾಡುವುದಿಲ್ಲ. ಹಾಗೂ ಡಿಫಂಕ್ಟ್ ಪಂಚಾಯಿತಿಗಳು ಆಗುತ್ತವೆ. ಇದೊಂದು ಸಣ್ಣ ಉದಾಹರಣೆ. ಅನೇಕ ಕಡೆ ಇಂಟರ್‌ಫಿಯರೆನ್ಸ್ ಮಾಡುವುದು ಗಮನಕ್ಕೆ ಬಂದಿದೆ. ಇಂಥಾದ್ದನ್ನು ಕಡಮೆ ಆಗುವ ಹಾಗೆ ಮಾಡಬೇಕಾದುದು ಸರಕಾರದ ಕರ್ತವ್ಯವಾಗಿದೆ

†ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಶಾಖೆಯ ಮಂತ್ರಿಗಳು). ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಇಲಾಖೆಗಳ ಬೇಡಿಕೆಗಳ ಬಗ್ಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದಂಥ ಎಲ್ಲ ಮಾನ್ಯ ಸದಸ್ಯರಿಗೂ ನಾನು ಕೃತಜ್ಞನಾಗಿದ್ದೇನೆ ಈ ಚರ್ಚೆಯಲ್ಲಿ ಮಾತನಾಡಿದಂತವರು ಆಡಳಿತಕ್ಕೆ ಸಂಬಂಧಪಟ್ಟ ಲೋಪದೋಷಗಳನ್ನು ಅಥವಾ ನೀತಿಗೆ ಸಂಬಂಧಪಟ್ಟ ಲೋಪದೋಷಗಳನ್ನು ಎತ್ತಿ ತೋರಿಸಿರುವುದು ಸ್ವಾಭಾವಿಕ. ಅವುಗಳನ್ನು ಸರಕಾರ ಸ್ವಾಗತಿಸುತ್ತದೆ. ನನ್ನ ದೃಷ್ಟಿಯಲ್ಲಿ ಹೆಚ್ಚು ಮಹತ್ವದ್ದು ಹಾಗು ಜೀವಾಳದ ಪ್ರಶ್ನೆಯಾಗಿರುವ ಗ್ರಾಮಾಂತರ ಪ್ರದೇಶದ ಉನ್ನತಿಗೆ ಅತಿ ನಿಕಟವಾಗಿ ಸಂಬಂಧಪಟ್ಟ ಕಾರ್ಯಕ್ರಮಗಳು ಹೇಗೆ ಯಶಸ್ವಿಯಾಗಿ ಕಾರ್ಯಗತ ಮಾಡಬೇಕು ಎಂಬುದಕ್ಕೆ ಕೆಲವು ಸೂಚನೆಗಳನ್ನು ಮತ್ತು ಬೆಳಕನ್ನು ಚೆಲ್ಲಬಹುದು ಎಂದು ನಾನು ನಿರೀಕ್ಷೆ ಮಾಡಿದ್ದೆ. ಈ ವಿಷಯದಲ್ಲಿ ನನಗೆ ನಿರಾಶೆಯಾಗಿದೆ ಎಂದು ಹೇಳಬಹುದು. ಈ ಚರ್ಚೆಯಲ್ಲಿ ಸಹಕಾರ ಸಂಘ, ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಪಂಚಾಯಿತಿ ರಾಜ್ಯ ಪದ್ಧತಿ ಇವುಗಳಿಗೆ ಸಂಬಂಧಪಟ್ಟ ಟೀಕೆ ಬಹಳ ಕಡಿಮೆ ಇದೆ. ಆದುದರಿಂದ ಈ ವಿಷಯ ನಾನು ಮೊದಲು ತೆಗೆದುಕೊಳ್ಳುತ್ತೇನೆ. ಮೊದಲು ಒಂದು ಮಾತು ಹೇಳುವುದು ಅವಶ್ಯಕ ಎಂದು ನನಗೆ ಅನಿಸುತ್ತದೆ. ಈ ಎರಡು ಖಾತೆಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳ ಬಗ್ಗೆ ಚರ್ಚಿಸುವಾಗ್ಗೆ ಮಾನ್ಯ ಸದಸ್ಯರು ಒಂದು ಮಾತನ್ನು ನೆನಪಿನಲ್ಲಿ ಇಟ್ಟಿದ್ದರೆ ಚೆನ್ನಾಗಿತ್ತು. ಯಾವ ಹಿನ್ನೆಲೆಯಲ್ಲಿ ಚರ್ಚೆ ನಡೆಯಬೇಕಗಿತ್ತೋ ಆ ಹಿನ್ನೆಲೆಯಲ್ಲಿ ಚರ್ಚೆಯಾಗಲಿಲ್ಲ. ಅದು ಏನೆಂದರೆ ಈ ಎರಡೂ ಇಲಾಖೆಗಳು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮವನ್ನು ಸರಕಾರಿ ಇಲಾಖೆಯಿಂದಾಗಲಿ, ಸರಕಾರಿ ನೌಕರರಿಂದಾಗಲಿ ಕಾರ್ಯಗತ ಮಾಡತಕ್ಕಂಥ ಕಾರ್ಯಕ್ರಮವಲ್ಲ. ರಾಷ್ಟ್ರೀಯ ವಿಸ್ತರಣಾಯೋಜನೆ ಕಾರ್ಯಕ್ರಮವಾಗಲಿ, ಸಹಕಾರ ಸಂಘಗಳ ಕಾರ್ಯಕ್ರಮವಾಗಲಿ ಇದು ಡೆಮೋಕ್ರಾಟಿಕ್ ಮತ್ತು ಆಟಾನಮಸ್ ಅಂದರೆ ಸ್ವತಂತ್ರವಾಗಿ ಪ್ರಜಾಪ್ರಭುತ್ವದ ಆಧಾರದಮೇಲೆ ಸ್ಥಾಪಿಸಲ್ಪಟ್ಟ ಸಂಸ್ಥೆಗಳ ಮುಖಾಂತರ ಕಾರ್ಯಗತವಾಗಬೇಕಾದ ಕಾರ್ಯಕ್ರಮವಾಗಿದೆ. ಆದುದರಿಂದ ಈ ಹಿನ್ನೆಲೆಯಲ್ಲಿ ನಾವು ಚರ್ಚೆ ಮಾಡದೇ ಇದ್ದರೆ ಅದು ಸರಿಯಾದ ಚರ್ಚೆಯಾಗುವುದಿಲ್ಲ ಎಂದು ನನ್ನ ನಮ್ರ ಅಭಿಪ್ರಾಯ. ರಾಷ್ಟ್ರೀಯ ವಿಸ್ತರಣಾಯೋಜನೆ ಬಗ್ಗೆ ಮಾನ್ಯ ಸದಸ್ಯರು ಕೆಲವೊಂದು ಟೀಕೆ ಮಾಡಿದ್ದಾರೆ. ಒಂದು ಸಂತೋಷದ ಸಂಗತಿ ಇದರಲ್ಲಿ ಕಂಡು ಬಂದದ್ದು ಅಂದರೆ ಈ ಟೀಕೆ ಕಳೆದ ವರ್ಷ ಎಷ್ಟು ಉಗ್ರವಾಗಿತ್ತೋ, ಎಷ್ಟು ವ್ಯಾಪಕವಾಗಿತ್ತೋ ಅಷ್ಟು ಈ ವರ್ಷ ಇರಲಿಲ್ಲ. ಆದರೂ ಕೂಡ ಒಂದೆರಡು ಮುಖ್ಯವಾದ ಟೀಕೆ ನೋಡಿದರೆ ನನಗೆ ಅನಿಸುತ್ತದೆ, ಬಹುಶಃ ಮಾನ್ಯ ಸದಸ್ಯರಿಗೆ ರಾಷ್ಟ್ರೀಯ ವಿಸ್ತರಣಾಯೋಜನೆಯ ಕಾರ್ಯಕ್ರಮದ ಸಂಪೂರ್ಣ ತಿಳುವಳಿಕೆಯಾಗಲಿಲ್ಲವೇನೋ ಎಂಬ ಶಂಕೆ ನನ್ನ ಮನಸ್ಸಿಗೆ ಹೊಳೆದದ್ದನ್ನು ಇಲ್ಲಿ ಹೇಳಬಯಸುತ್ತೇನೆ. ಅದು ಬಹಳ ಸಾಮಾನ್ಯವಾದಂಥ ಟೀಕೆ. ಈ ಸಭೆಯಲ್ಲಿ ಮತ್ತು ಹೊರಗೆ ಕೂಡ ಈ ಟೀಕೆ ಮಾಡಿದ್ದಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಸಿಬ್ಬಂದಿ ಜಾಸ್ತಿ ಇದೆ. ಸಿಬ್ಬಂದಿ ಮೇಲೆ ಹೆಚ್ಚು ಹಣ ಖರ್ಚು ಆಗುತ್ತಿದೆ ಎಂದು ಹೇಳಿದರು. ಜೀಪ್ ಓಡಾಟದ ಮೇಲೆ ಹಣ ಖರ್ಚಾಗುತ್ತಿದೆ ಎಂದು ಸಹ ಹೇಳಿದರು. ಇದು ತೀರಾ ಸಾಮಾನ್ಯವಾದ ಟೀಕೆ. ಈ ಸಂಬಂಧದಲ್ಲಿ ಮಾನ್ಯ ಸದಸ್ಯರಿಗೆ ಒಂದು ಮಾತು ಹೇಳಲು ಬಯಸುತ್ತೇನೆ.

ಇಂದು ನಾವು ರಾಷ್ಟ್ರೀಯ ವಿಸ್ತರಣಾಯೋಜನೆಯ ಕಾರ್ಯಕ್ರಮಕ್ಕೆ ಯಾವ ಸಿಬ್ಬಂದಿಯನ್ನು ನೇಮಿಸಿದ್ದೇವೆಯೊ, ಆ ಸಿಬ್ಬಂದಿ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕೈಯಲ್ಲಿ ಬರತಕ್ಕಂಥ ಕಾರ್ಯಕ್ರಮಗಳನ್ನು ಮಾತ್ರ ನಿರ್ವಹಿಸಲಿಕ್ಕೆ ಬದ್ಧವಾದ ಸಿಬ್ಬಂದಿಯಲ್ಲ. ಇಂದು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರ್ಯಕ್ರಮ ಕೇವಲ ಸಿಬ್ಬಂದಿಯ ನೇತೃತ್ವದಲ್ಲಿ ಮತ್ತು ಸಿಬ್ಬಂದಿಯಿಂದ ಆಗತಕ್ಕಂಥ ಕಾರ್ಯಕ್ರಮವಲ್ಲ. ಅದನ್ನು ನಮ್ಮ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡು ನೇತೃತ್ವದಲ್ಲಿ, ಅವರ ಆದೇಶದ ಮೇರೆಗೆ ಆಗತಕ್ಕಂಥ ಕಾರ್ಯಕ್ರಮ. ಅದ್ದರಿಂದ ನಾವು ಇಂದು ರಾಷ್ಟ್ರೀಯ ವಿಸ್ತರಣಾಯೋಜನೆ ಬೇರೆ, ತಾಲ್ಲೂಕು ಅಭಿವೃದ್ಧಿ ಮಂಡಳಿ ಕಾರ್ಯಕ್ರಮ ಬೇರೆ ಎಂದು ಹೀಗೆ ಭಿನ್ನವಾದಂಥ ದೃಷ್ಟಿಯಿಂದ ನೋಡಿದರೆ, ಅದು ಸರಿಯಾಗಲಿಕ್ಕಿಲ್ಲ. ರಾಷ್ಟ್ರೀಯವಿಸ್ತರಣಾಯೋಜನೆಗಾಗಿ ಪ್ರತಿ ವರ್ಷ ನಾವು ಎಷ್ಟು ಹಣವನ್ನು ಕೊಡುತ್ತೇವೆಯೋ,

ಬಹುಶಃ ಅದಕ್ಕೂ ಹೆಚ್ಚಿನ ಹಣ ತಾಲ್ಲೂಕು ಬೋರ್ಡಿಗೆ ಬೇರೆ ಬೇರೆ ಬಾಬುಗಳಿಂದ ಸಿಗುತ್ತದೆ—ಲ್ಯಾಂಡ್ ರೆವಿನ್ಯೂ ಅಂಶ ಸಿಗುತ್ತದೆ; ಅವರ ಸ್ವಂತ ಟ್ಯಾಕ್ಸು ಮತ್ತು ಸೆಸ್ಸುಗಳ ಮುಖಾಂತರ ಸಿಗುತ್ತದೆ. ಪ್ಲಾನ್ ಮತ್ತು ನಾನ್-ಪ್ಲಾನ್ ಸ್ಕೀಮುಗಳನ್ನು ತಾಲ್ಲೂಕು ಬೋರ್ಡುಗಳ ಮುಖಾಂತರ ಕಾರ್ಯಗತ ಮಾಡುತ್ತೇವೆ. ಅದರಲ್ಲಿ ಕೊಡತಕ್ಕಂಥ ಹಣ ಅವರಿಗೆ ಸಿಕ್ಕುತ್ತದೆ. ಕೇವಲ ರಾಷ್ಟ್ರೀಯ ಯೋಜನೆಗಾಗಿ ಪ್ರತಿವರ್ಷ 1 ಲಕ್ಷ ರೂಪಾಯಿ, 2 ಲಕ್ಷ ರೂಪಾಯಿ ನಾವು ಏನು ಕೊಡುತ್ತೇವೆ, ಅದು ಅಷ್ಟನ್ನೂ ಸಿಬ್ಬಂದಿಗೆ ವೆಚ್ಚವಾಗುತ್ತಿದೆಯೆಂದು ಅದನ್ನ ತುಲನ ಮಾಡಿ ನೋಡಿದರೆ ಅದು ಸರಿಯಾದಂಥ ಚಿತ್ರವಾಗುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳಲು ಬಯಸುತ್ತೇನೆ.

ಗ್ರಾಮೀಣ ಅಭಿವೃದ್ಧಿಯನ್ನು ಸ್ವಲ್ಪ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದೇ ಆದರೆ, ಮೂರು ಮಹತ್ವವಾದಂಥ ಬದಲಾವಣೆಯಾದದ್ದನ್ನು ನಾವು ನೋಡುತ್ತೇವೆ. ಒಂದಾನೊಂದು ಕಾಲದಲ್ಲಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲು, ದೇಶದ ಬಹು ಭಾಗದಲ್ಲಿ ಗ್ರಾಮೀಣ ಜನತೆಗೂ ಮತ್ತು ಸರಕಾರಕ್ಕೂ ಯಾವರೀತಿಯಾದಂಥ ಸಂಬಂಧವಿರಲಿಲ್ಲ. ಏನಾದರೂ ಸಂಬಂಧ ಇದ್ದರೆ ಅದು ಕಂದಾಯ ವಸೂಲಿ ಮಾಡುವ ಕ್ರಮ; ಶಾಂತಿಭಂಗ ನಡೆದಲ್ಲಿ ಅಥವಾ ಯಾವುದಾದರೂ ಒಂದು ಕ್ರಿಮಿನಲ್ ಕೇಸು ಆದರೆ ಪೋಲೀಸರು ಹೋಗಿ ದಸ್ತಗಿರಿ ಮಾಡುವಂಥ ಕ್ರಮ. ಇವೆರಡನ್ನು ಬಿಟ್ಟರೆ ನಮ್ಮ ದೇಶದ ಬಹು ಭಾಗದಲ್ಲಿ ಜನತೆಗೂ ಮತ್ತು ಸರಕಾರಕ್ಕೂ ಸಂಪರ್ಕ ನೇರವಾಗಿ ಎಂದೂ ಇರಲಿಲ್ಲ. ಆದರೆ ಕೆಲವೊಂದು ರಾಜ್ಯಗಳಲ್ಲಿ—ಅಂದರೆ ಮೈಸೂರು, ಬರೋಡ ಮೊದಲಾದಂಥ ಸಂಸ್ಥಾನಗಳಲ್ಲಿ, ಕೆಲವೊಂದು ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರಕಾರದವರು ಆಗಲೇ ಕೈಗೊಂಡಿದ್ದರು. ಆದರೆ ಸಾಮಾನ್ಯವಾಗಿ ಹೇಳಬೇಕಾದರೆ ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲು, ಯಾವುದೆ ಒಂದು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವಾಗಲಿ—ಅದು ದೊಡ್ಡ ಪ್ರಮಾಣದ್ದು ಇರಲಿ, ಅಥವಾ ಅಲ್ಪ ಪ್ರಮಾಣದ್ದು ಇರಲಿ, ಅದು ಸರಕಾರದಿಂದ, ಸರಕಾರಿ ನೌಕರರ ನೇತೃತ್ವದಲ್ಲಿ ಮತ್ತು ಅವರಿಂದ ಆಗತಕ್ಕಂಥ ಕಾರ್ಯ ಕ್ರಮವಾಗಿತ್ತು. ನಾವು ಹಳ್ಳಿಯಲ್ಲಿ ಒಂದು ಬಾವಿಯನ್ನು ತೆಗೆಸುವುದೇ ಆಗಲಿ, ಒಂದು ರಸ್ತೆಯನ್ನು ಮಾಡಿಸುವುದೆ ಆಗಲಿ, ಶಾಲೆಗೆ ಕಟ್ಟಡವನ್ನು ಕಟ್ಟಿಸುವುದೇ ಆಗಲಿ, ಅಥವಾ ಒಂದು ಸಣ್ಣ ಮೋರಿ ಮೊದಲಾದ ಕಾರ್ಯಕ್ರಮವನ್ನು ಮಾಡುವುದೆ ಆಗಲಿ, ಅಥವಾ ವ್ಯವಸಾಯಕ್ಕೆ ಸಂಬಂಧಪಟ್ಟಂಥ ಯಾವುದೇ ಕಾರ್ಯಕ್ರಮ ಕೈಗೊಂಡದ್ದೇ ಆಗಲಿ, ಅದರಲ್ಲಿ ಜನತೆಯಿಂದ, ಜನತೆಯ ಪ್ರತಿನಿಧಿಗಳಿಂದ ಯಾವರೀತಿಯ ಸಹಯೋಗವಿರಲಿಲ್ಲ. ಅದು ಸಂಪೂರ್ಣವಾಗಿ ಖಾತೆಯ ನೌಕರರ ಮತ್ತು ಸರಕಾರದ ಜವಾಬ್ದಾರಿಯಾಗಿತ್ತು. ಇದು ಒಂದು ಭಾಗ.

ಆಮೇಲೆ ಎರಡನೆಯ ಸ್ಟೇಜಿನಲ್ಲಿ ನೋಡುತ್ತೇವೆ, ರಾಷ್ಟ್ರೀಯ ವಿಸ್ತರಣಾಯೋಜನೆ ನಮ್ಮ ದೇಶದಲ್ಲಿ 1952ನೆ ಇಸವಿ ಅಕ್ಟೋಬರ್ 2ನೆಯ ತಾರೀಖು ಪ್ರಾರಂಭವಾದ್ದು. ಇದು ನಮ್ಮ ದೇಶದ ಗ್ರಾಮದ ಜನತೆಗೆ ಒಂದು ಹೊಸ ಅಧ್ಯಾಯವಾಗಿ ಕ್ರಾಂತಿ ಕಹಳೆ ಊದಿತು. ರಾಷ್ಟ್ರೀಯ ವಿಸ್ತರಣಾಯೋಜನೆ ಕೇವಲ ಗ್ರಾಮ ಪ್ರದೇಶಕ್ಕಾಗಿ, ಅದರಲ್ಲಿರುವ ಜನತೆಯ ಸರ್ವಾಂಗೀಣ ಉನ್ನತಿಗಾಗಿ ಮೀಸಲಾದಂಥ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಒಂದು ಹೊಸ ಸ್ಟೇಜನ್ನು ನೋಡುತ್ತೇವೆ. ಈಗಿರುವ ಕಾರ್ಯಕ್ರಮದಲ್ಲಿ ಸರಕಾರದಿಂದ ನಡೆಯಬೇಕಾಗಿದ್ದರೂ ಕೂಡ, ಸರಕಾರಿ ಅಧಿಕಾರಿಗಳಿಂದ ನಡೆಯ ಬೇಕಾಗಿದ್ದರೂಕೂಡ, ಜನತೆಯ ಸಹಕಾರವನ್ನೂ, ಜನತೆಯ ಪ್ರತಿನಿಧಿಗಳ ಎಲಿಮೆಂಟನ್ನು ಸೇರಿಸಿದ್ದೇವೆ. ಮಾನ್ಯಸದಸ್ಯರ ನೆನಪಿನಲ್ಲಿ ಇರಬಹುದು. ಪ್ರತಿಯೊಂದು ಬ್ಲಾಕಿಗೆ ಸಲಹಾ ಸಮಿತಿಯನ್ನು ಸರಕಾರ ನೇಮಿಸುತ್ತಿದೆ. ಪ್ರಾಜೆಕ್ಟು ಆಫೀಸರು ಎಂದು ಏನು ಹೇಳುತ್ತೇವೆ ಅವರು ಆ ಸಮಿತಿ ಅಧ್ಯಕ್ಷರು. ಅದರಲ್ಲಿ ಬ್ಲಾಕಿಗೆ ಸಂಬಂಧಪಟ್ಟ ಎಲ್ಲಾ ಭಾಗಗಳ ಪ್ರತಿನಿಧಿಗಳೂ ಸದಸ್ಯರಾಗಿರುವರು. ಅವರ ಸಲಹೆ, ಅವರ ಸಹಕಾರ ಮತ್ತು ಸಹಯೋಗದಿಂದ ಕಾರ್ಯಕ್ರಮ ನಡೆಯುತ್ತಾ ಇದೆ. ಇದು ಎರಡನೆ ಸ್ಟೇಜು.

ಈಗ ಮೂರನೆ ಸ್ಟೇಜಿಗೆ ಬಂದು ಮುಟ್ಟಿದ್ದೇವೆ. ಅದರಲ್ಲಿ ನಾವು ನೋಡುವುದು ಏನು ? ಈಗ ಒಂದು ಹೆಜ್ಜೆ ಮುಂದೆ ಹೋಗಿ ಗ್ರಾಮೀಣ ಅಭಿವೃದ್ಧಿಯ ಯಾವತ್ತೂ ಕಾರ್ಯಕ್ರಮಗಳೂ ಜನತೆಯ ಪ್ರತಿನಿಧಿಗಳ ನೇತೃತ್ವದಲ್ಲಿ, ಅವರ ಜವಾಬ್ದಾರಿಯಿಂದ ನಡೆಯಬೇಕಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಮೊದಲು ಅಧಿಕಾರಿಯ ಪಾತ್ರ; ಮತ್ತು ಜನತೆಯ ಪಾತ್ರ ಏನೇ ಇರಲಿ. ಎರಡನೆಯ ಸ್ಟೇಜಿನಲ್ಲಿ ಅಧಿಕಾರಿಯ ಪಾತ್ರ ಪ್ರಾಧಾನ್ಯ, ಜನತೆಯ ಪಾತ್ರ ಗೌಣವಾಗಿತ್ತು. ಜನತೆಯ ಪಾತ್ರ ಇದೆ. ಈಗಿರುವ ಮೂರನೆ ಸ್ಟೇಜಿನಲ್ಲಿ ಜನತೆಯ ಪಾತ್ರ ಪ್ರಾಧಾನ್ಯ, ಅಧಿಕಾರಿಗಳ ಪಾತ್ರ ಗೌಣ, ಅದಕ್ಕೆ ಕಡಿಮೆ ಮಹತ್ವ ಇರುವಂಥದ್ದು.

(ಶ್ರೀ ರಾಮಕೃಷ್ಣ ಹೆಗ್ಗಡೆ)

ಹೀಗೆ ಈ ಬದಲಾವಣೆಯನ್ನು ನಾವು ಗಮನಿಸಿದಲ್ಲಿ ಇದರಲ್ಲಿ ಕಂಡುಬರತಕ್ಕ ದೇಶಗಳಿಗೆ ತಾನೇತಾನಾಗಿ ಎಕ್ಸ್‌ಪ್ಲನೇಶನ್ ಸಿಗುತ್ತದೆ. ನಾವು ಅನೇಕ ದಿನಗಳಿಂದ ಒಂದು ವಾದವನ್ನು ಕೇಳುತ್ತಾ ಬಂದಿದ್ದೇವೆ. ಅದು ಏನೆಂದರೆ ಸರಕಾರಿ ಅಧಿಕಾರಿಗಳಿಗೆ ಅನೇಕ ರೀತಿಯಿಂದ ಜವಾಬ್ದಾರಿ ವಹಿಸಿ ಕೋಟ್ಯಾನುಕೋಟಿ ರೂಪಾಯಿನ ಕೆಲಸವನ್ನು ಮಾಡುವ ಜವಾಬ್ದಾರಿಯನ್ನು ಅವರಿಗೆ ಹೊರಿಸಿದ್ದೇವೆ, ಆದರೆ ಅವರಿಗೆ ಕಳಕಳಿ ಇರುವುದಿಲ್ಲ, ಅವರಲ್ಲಿ ಆನೆಸ್ಟಿ ಇರುವುದಿಲ್ಲ, ಅವರಲ್ಲಿ ಇಂಟೆಗ್ರಿಟಿ ಇರುವುದಿಲ್ಲ. ಅವರಿಗೆ ಜನತೆಯ ಕೆಲಸ ಆಗಬೇಕು ಅನ್ನುವ ತವಕ ಇರುವುದಿಲ್ಲ; ಅದಕ್ಕಾಗಿ ಜನತೆಯ ಪ್ರತಿನಿಧಿಗಳಿಗೆ ಅಧಿಕಾರ ಸಿಗಬೇಕು ಎಂಬ ವಾದವನ್ನು ಅನೇಕ ಜನಗಳಿಂದ ಕೇಳಿದ್ದೇವೆ. ಈ ಅಧಿಕಾರದ ಕಾನ್‌ಸೆಂಟ್ರೇಶನ್ ಆದಾಗ ನಾವು ಕೇಳುವುದು ಏನು? ಮಾನ್ಯ ಸದಸ್ಯರು ಕೆಲವು ಜನ ಹೇಳಿದರು; ಇಂದು ತಾಲ್ಲೂಕು ಬೋರ್ಡು ಅಧ್ಯಕ್ಷರು ಮತ್ತು ಬಿ. ಡಿ. ಒ. ಗಳಿಗೆ ಸರಿಯಾದಂಥ ಸಹಕಾರವಿಲ್ಲ ಮತ್ತು ಪರಸ್ಪರ ಹೊಂದಾಣಿಕೆ ಇಲ್ಲ ಅಂತ. ಇದು ಕೆಲವು ಕಡೆ ಆಗಬೇಕಾದ್ದೆ, ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಇದು ಒಂದು ಹೊಸ ಪ್ರಯೋಗ ಮಾಡುತ್ತಾ ಇದ್ದೇವೆ. ಈ ದೇಶ ಹುಟ್ಟಿದ ಮೇಲೆ ಈ ರೀತಿಯಾದಂಥ ಒಂದು ದೊಡ್ಡ ಪ್ರಯೋಗ ಆಗಿರಲಿಲ್ಲ; ಬಹುಶಃ ಪ್ರಪಂಚದಲ್ಲಿ ಯಾವ ದೇಶದಲ್ಲಿಯೂ ಇಂಥ ಪ್ರಯೋಗ ಆಗಿಲ್ಲ ಎಂತ ಹೇಳಬಲ್ಲ. ಈ ಪ್ರಯೋಗ ದಿಶೆಯಲ್ಲಿ, ಇದರಲ್ಲಿ ಕೆಲಸ ಪ್ರಾರಂಭ ಮಾಡತಕ್ಕ ಕಾಲದಲ್ಲಿ, ಕೆಲವೊಂದು ತೊಂದರೆಗಳನ್ನು ಎದುರಿಸಲೇಬೇಕಾಗುತ್ತದೆ. ಮತ್ತು ಅದನ್ನು ಎದುರಿಸಿ ಯಶಸ್ವಿಯಾಗಿ ಮಾಡಲೇ ಬೇಕಾಗುತ್ತದೆ. ತೊಂದರೆಗಳು ಉತ್ಪತ್ತಿಯಾದಾಕಣಕ್ಕೆ, ನಾವು ಹೆದರಿ, ನಮ್ಮ ಧೈರ್ಯವನ್ನು ಬಿಟ್ಟು ಹೌಹಾರತಕ್ಕಂಥ ಪ್ರಮೇಯ ನನಗೆ ಕಾಣುವುದಿಲ್ಲ. ನಾನು ಒತ್ತಿ ಹೇಳುವುದಿಷ್ಟೆ: ಇಂದು ನಾವು ಎಲ್ಲಾ ಕಾರ್ಯಕ್ರಮಗಳನ್ನು ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಮುಖಾಂತರವಾಗಿ, ಅವರ ನೇತೃತ್ವದಲ್ಲಿ ಮತ್ತು ಅವರ ಜವಾಬ್ದಾರಿಯಿಂದ ನಡೆಯಬೇಕು ಅಂತ ಒಪ್ಪಿಕೊಂಡಾಗ, ಅದರಲ್ಲಿ ಬರತಕ್ಕಂಥ ದೋಷವನ್ನೂ ಸಹಿಸಲಿಕ್ಕೆ ಮತ್ತು ಅದನ್ನು ಬಿಡಿಸಲಿಕ್ಕೆ ನಾವು ಸಿದ್ಧವಿರಬೇಕು. ಇಂದು ರಾಷ್ಟ್ರೀಯ ವಿಸ್ತರಣೆ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಹೇಳಿದರು: ಇಲ್ಲಿಯೂ ಹೇಳಿದರು, ಕೆಲವು ದಿವಸದ ಹಿಂದೆ ಮೇಲ್ಮನೆಯಲ್ಲಿಯೂ ಹೇಳಿದರು: ಏನು ಹಣ ಇವತ್ತು ಖರ್ಚಾಗುತ್ತಾ ಇದೆ ಅದರಿಂದ ಜನತೆಗೆ ನಿಜವಾದ ಪರಿಣಾಮ ಸಿಕ್ಕುತ್ತಾ ಇಲ್ಲ ಎಂದು. ಇದನ್ನು ಕೇಳಿ ನಿಜವಾಗಿಯೂ ನನಗೆ ಆಶ್ಚರ್ಯವೂ ಆಗುತ್ತದೆ ಸ್ವಲ್ಪ ಮಟ್ಟಿಗೆ ವ್ಯಸನವೂ ಆಗುತ್ತದೆ. ಇಂದು ನಮ್ಮ ದೇಶದ ಗ್ರಾಮೀಣ ಪ್ರದೇಶದಲ್ಲಿ ಏನಾದರೂ ಒಂದು ಹೊಸ ಚೈತನ್ಯವನ್ನು ನೋಡುವುದಾದರೆ ಹೊಸ ಚಟುವಟಿಕೆಯನ್ನು ನೋಡುವುದಾದರೆ ಹೊಸ ಸ್ಫೂರ್ತಿಯನ್ನು ನೋಡುವುದಾದರೆ ಅದು ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರಣದಿಂದ ಎಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಆದರೆ ಇದರಲ್ಲಿ ದೋಷ ಏನೂ ಇಲ್ಲ ಎಂದು ಹೇಳಿ ವಾದ ಮಾಡುವುದಕ್ಕೆ ನಾನು ಹೊರಟಿಲ್ಲ. ಮೊದಲು ಈ ಯೋಜನೆ ಪ್ರಾರಂಭವಾದಾಗ ಮಾಡಬೇಕೆಂದು ಮುಂದೆ ಇದ್ದ ಚಿತ್ರ ಒಂದಾಗಿತ್ತು ಅದೇನೆಂದರೆ ನಮ್ಮ ಗ್ರಾಮೀಣ ಜನತೆಯ ಎಲ್ಲಾ ಸಮಸ್ಯೆಗಳೂ ನಿವಾರಣೆಯಾಗಬೇಕೆಂಬ ದೃಷ್ಟಿಯಿಂದ ಅದಕ್ಕೆ ಸೋಷಿಯಲ್ ವೆಲ್‌ಫೇರ್ ಆರ್ಗ್‌ನೈಸರ್ಸ್‌ನ್ನು ನೇಮಕ ಮಾಡಿದ್ದರು, ಗ್ರಾಮ ಸೇವಕಿಯರನ್ನು ನೇಮಕ ಮಾಡಿದ್ದರು, ಮತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರುಗಳನ್ನು ನೇಮಕ ಮಾಡಿದರು ಈ ರೀತಿ ಬೇರೆ ಬೇರೆ ವಿಸ್ತರಣಾಧಿಕಾರಿಗಳನ್ನು ನೇಮಕ ಮಾಡಿದ್ದರು, ಅದರಲ್ಲಿ ಬಹುಶಃ ಮಾನ್ಯ ಸದಸ್ಯರಿಗೆ ನಾವು ಮಾಡಿರುವಂತಹ ಒಂದು ವಿಷಯವನ್ನು ತಿಳಿಸುವುದಾದರೆ, ಹಿಂದೆ ಬೇರೆ ಬೇರೆ ಖಾತೆಯವರು ಪ್ರತ್ಯೇಕ ಪ್ರತ್ಯೇಕವಾಗಿ ಏನು ಕೆಲಸ ಮಾಡುತ್ತಾ ಇದ್ದರು ಅದರಿಂದ ನಿಜವಾಗಿಯೂ ಜನತೆಗೆ ಸರಿಯಾದಂತಹ ಸೇವೆ ಆಗುತ್ತಾ ಇರಲಿಲ್ಲ. ವ್ಯವಸಾಯ ಖಾತೆ ಪ್ರತ್ಯೇಕ, ಅನಿಮಲ್ ಹಸ್ಬೆಂಡರಿ ಖಾತೆ ಪ್ರತ್ಯೇಕ, ಶಿಕ್ಷಣದ ಖಾತೆ ಪ್ರತ್ಯೇಕ ಈ ರೀತಿ ಪ್ರತಿಯೊಂದು ಖಾತೆಯೂ ಕೂಡ ಪ್ರತ್ಯೇಕ ಪ್ರತ್ಯೇಕವಾಗಿ ತಮ್ಮ ತಮ್ಮ ಖಾತೆಗೆ ಸಂಬಂಧಪಟ್ಟಂತೆ ತಮ್ಮ ತಮ್ಮ ಶಕ್ತಿಗೆ ಅನುಸಾರವಾಗಿ ಸೇವೆಯನ್ನು ಅವರು ಮಾಡಿದಾಗ ಅದರ ಸಂಪೂರ್ಣವಾದ ಪ್ರಯೋಜನ ಜನತೆಗೆ ಸಿಕ್ಕುವಂತಹುದು ಸಾಧ್ಯವಿರಲಿಲ್ಲ. ಅದಕ್ಕಾಗಿಯೇ ಇಂದು ತಾಲ್ಲೂಕು ಮಟ್ಟದಲ್ಲಿ ಮತ್ತು ಬ್ಲಾಕ್ ಮಟ್ಟದಲ್ಲಿ ಈ ಎಲ್ಲಾ ಖಾತೆಗಳ ಸಂಯೋಜನೆ ಆಗಬೇಕು ಅದಕ್ಕೆ ಒಬ್ಬ ಆಫೀಸರು ಇರಬೇಕು ಅವರ ನೇತೃತ್ವದಲ್ಲಿ (ಕ್ಯಾಪ್ಟನ್‌ಷಿಪ್‌ನಲ್ಲಿ) ಬಾಕಿ ಎಲ್ಲಾ ಖಾತೆಯ ನೌಕರರೂ ಕೆಲಸ ಮಾಡಬೇಕೆನ್ನುವ ಉದ್ದೇಶದಿಂದ ನಾವು ಇದನ್ನು ಅಂಗೀಕಾರ ಮಾಡಿದ್ದೇವೆ. ಇನ್ನು ಕಳೆದ ಎರಡು ವರ್ಷಗಳಿಂದ ಈಚೆಗೆ ಈ ಕಾರ್ಯಕ್ರಮದಲ್ಲಿ ಅತಿ ಮುಖ್ಯವಾದಂತಹ ಜವಾಬ್ದಾರಿಯನ್ನು ಮತ್ತು ಪ್ರಾಮುಖ್ಯತೆಯನ್ನು ವ್ಯವಸಾಯದ ಉತ್ಪನ್ನದ ಕಾರ್ಯಕ್ರಮದಲ್ಲಿ ಕೊಟ್ಟಿದ್ದೇವೆ. ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬದಲಾವಣೆ

ಯಾಗಬೇಕು, ಸುಧಾರಣೆಯಾಗಬೇಕು ಎಂದು ಹೇಳಿ ನಾವು ಎಷ್ಟೇ ಪ್ರಯತ್ನ ಮಾಡಲಿ ಎಲ್ಲಿಯವರೆಗೆ ಆರ್ಥಿಕ ಬದಲಾವಣೆಯಾಗುವುದಿಲ್ಲವೋ, ಸುಧಾರಣೆಯಾಗುವುದಿಲ್ಲವೋ ಅಲ್ಲಿಯವರೆಗೆ ಇದು ಯಾವುದೂ ಆಗುವುದಿಲ್ಲ ಅದಕ್ಕೆ ಪ್ರತಿ ಫಲ ಸಿಕ್ಕುವುದಿಲ್ಲ. ಅದಕ್ಕಾಗಿಯೇ ಇಂದು ರೈತನ ಬಡತನ ಹೋಗಬೇಕು ಅವನು ಅನುಸರಿಸುವಂತಹ ವ್ಯವಸಾಯದ ಅಭಿವೃದ್ಧಿಯಾಗಬೇಕು ಎಂದು ಹೇಳುವಂತಹ ಒಂದೇ ಒಂದು ಉದ್ದೇಶದಿಂದ ಈ ವ್ಯವಸಾಯದ ಕಾರ್ಯಕ್ರಮಕ್ಕೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ಎಷ್ಟರ ಮಟ್ಟಿಗೆ ಪ್ರಗತಿಯಾಗಿದೆ ಎಂದು ಕೇಳುತ್ತಾರೆ. ಇದನ್ನು ನಾನು ವಿಧಾನ ಸಭೆಯಲ್ಲಿ ಕುಳಿತುಕೊಂಡು ಅಂಕಿಸಂಖೆಗಳನ್ನು ಕೋಟ್ ಮಾಡಿ ಹೇಳಿದರೆ ಬಹುಶಃ ಅವರ ಮನಸ್ಸಿಗೆ ತೃಪ್ತಿಯಾಗಲಿಕ್ಕಿಲ್ಲ ಆದ್ದರಿಂದ ಅವರು ಅದನ್ನು ಒಪ್ಪಲಿಕ್ಕೆ ಇಲ್ಲ. ಅದಕ್ಕೇ ನಾನು ಆ ಕೆಲಸವನ್ನು ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಸದಸ್ಯರಿಗೆ ಒಂದು ವಿಚಾರವನ್ನು ಈ ವಿಷಯದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇಂದು ನಮ್ಮ ವ್ಯವಸಾಯ ಉತ್ಪನ್ನ ಏಕೆ ಹೆಚ್ಚಾಗುತ್ತಾ ಇಲ್ಲ ಎಂದು ಕೇಳುವುದಾದರೆ. ವ್ಯವಸಾಯದ ಉತ್ಪನ್ನ ಹೆಚ್ಚಾಗಬೇಕಾದರೆ ರೈತನಿಗೆ ಮೂರು ತರಹದ ಅನುಕೂಲತೆಗಳು ಮುಖ್ಯವಾಗಿ ಆಗಬೇಕು, ಮೊದಲನೆಯದಾಗಿ ಅವನು ಜಮೀನನ್ನು ಸಾಗುವಳಿ ಮಾಡಲಿಕ್ಕೆ ಸರಿಯಾದ ಸಮಯದಲ್ಲಿ ಸಾಮಗ್ರಿಗಳನ್ನು ಪೂರೈಸಬೇಕು. ಸಾಮಗ್ರಿಗಳು ಎಂದರೆ ಬೀಜ ಮತ್ತು ಗೊಬ್ಬರ ಮತ್ತು ಇತರ ಉಪಕರಣಗಳು. ಎರಡನೆಯದು ಅವನ ಜಮೀನಿಗೆ ನೀರಾವರಿಯ ಅನುಕೂಲತೆಯಾಗಬೇಕು. ನಾವು ಎಷ್ಟು ಒಳ್ಳೆಯ ಬೀಜ ಮತ್ತು ಎಷ್ಟೇ ಪ್ರಮಾಣದಲ್ಲಿ ಗೊಬ್ಬರ ಮತ್ತು ಹೊಸ ಹೊಸ ತರಹದ ಉಪಕರಣಗಳನ್ನು ಒದಗಿಸಿದರೂ ಕೂಡ ನೀರು ಇಲ್ಲದೇ ಇದ್ದರೆ ಅವನ ಜಮೀನಿನ ಕೃಷಿ ಉತ್ಪನ್ನ ಹೆಚ್ಚಾಗುವಂತಹದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಮೂರನೆಯದು ಅವನು ಏನು ಕಷ್ಟಪಟ್ಟು ಬೆಳೆಯುತ್ತಾನೆಯೋ ಅದಕ್ಕೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು. ಈಗ ಈ ಮೂರು ಪ್ರಯತ್ನದಲ್ಲಿ ಸರಕಾರದವರು ಸಾಕಾದಷ್ಟು ಮುಂಜಾಗರೂಕತೆಯನ್ನು ವಹಿಸಲಿಲ್ಲ, ಸಾಕಾದಷ್ಟು ಅನುಕೂಲತೆಯನ್ನು ಒದಗಿಸಲಿಲ್ಲ ಅಥವಾ ಏರ್ಪಾಡನ್ನು ಮಾಡಲಿಲ್ಲ ಎಂದು ಮಾನ್ಯ ಸದಸ್ಯರು ಹೇಳುವುದಾದರೆ ಆ ತಪ್ಪನ್ನು ಒಪ್ಪಿಕೊಳ್ಳಲಿಕ್ಕೆ ಸಿದ್ಧವಾಗಿದ್ದೇನೆ. ನಾನು ಹೇಳುವುದು ಎಲ್ಲಾ ಕಡೆಯಲ್ಲೂ ಪರಿಪೂರ್ಣವಾದ ಕೆಲಸವಾಗಿದೆ ಎಂದು ಹೇಳಲಿಕ್ಕೆ ನಾನು ಹೋಗುವುದಿಲ್ಲ. ದಯವಿಟ್ಟು ಮಾನ್ಯ ಸದಸ್ಯರು ಆ ದಿಶೆಯಲ್ಲಿ ಏನು ಪ್ರಯತ್ನ ಮಾಡಿದ್ದೇವೆ ಎಷ್ಟರ ಮಟ್ಟಿಗೆ ಆದರಲ್ಲಿ ಸಾಧನೆ ಮಾಡಿದ್ದೇವೆ ಎಂದು ಹೇಳುತ್ತೇನೆ ಅದನ್ನು ಅಪ್ರಿಷಿಯೇಟ್ ಮಾಡಬೇಕೆಂದು ಈ ವಿಚಾರವನ್ನು ತಮ್ಮಲ್ಲಿ ನಿವೇಧನೆ ಮಾಡಿಕೊಳ್ಳುತ್ತೇನೆ. ಹಿಂದೆ ಪಂಚಾಯತ್ ವಿಲೇಜ್ ಅಗ್ರಿಕಲ್ಚರಲ್ ಪ್ರೊಡಕ್ಷನ್ ಪ್ಲಾನ್ ಅಂತ ಹೇಳಿ ಇತ್ತು. ಅಲ್ಲಿ ಗ್ರಾಮ ಸೇವಕರು ಅವರಿಗೆ ಸಂಬಂಧಪಟ್ಟ ಸರ್ಕಲ್‌ನಲ್ಲಿ ವ್ಯವಸಾಯಗಾರರ ಹತ್ತಿರ ಹೋಗಿ ಅವರಿಗೆ ಬೇಕಾಗುವಂತಹ ಅವಶ್ಯಕತೆಗಳನ್ನು ಕೇಳಿ ಅದರ ಪೂರೈಕೆ ಮಾಡಿ ಮತ್ತು ಅಯಾಯಾ ಸರ್ಕಲ್‌ನಲ್ಲಿ ಎಷ್ಟುಮಟ್ಟಿಗೆ ವ್ಯವಸಾಯದ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೋ ಅಷ್ಟುಮಟ್ಟಿಗೆ ಮಾಡಬೇಕೆನ್ನುವಂತಹ ಕಾರ್ಯಕ್ರಮ ಅದು ಆಗಿತ್ತು. ಅಲ್ಲಿ ಪುನಃ ಅನೇಕ ದೂರುಗಳು ಏನು ಬಂದವು ಎಂದರೆ ಗ್ರಾಮ ಸೇವಕ ಎನ್ನುವಂತಹ ಆಫೀಸರು ತನ್ನ ಆಫೀಸಿನಲ್ಲೇ ಕುಳಿತುಕೊಂಡು ಪ್ಲಾನ್ ಮಾಡುತ್ತಾನೆ ಜನತೆಗೂ ಅವನಿಗೂ ಸಂಬಂಧ ಆಗುವುದಿಲ್ಲ ಅದಕ್ಕೆ ಅದು ಯಶಸ್ವಿಯಾಗುವುದಿಲ್ಲ ಎಂಬ ಟೀಕೆ ಬಂತು. ಅದಕ್ಕಾಗಿಯೇ ಕಳೆದ ಒಂದೂವರೆ ವರ್ಷದಿಂದ ಈಚೆಗೆ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಅದು ಪಂಚಾಯತ್ ಅಗ್ರಿಕಲ್ಚರಲ್ ಪ್ರೊಡಕ್ಷನ್ ಪ್ಲಾನ್ ಅದರಲ್ಲಿ ಕೇವಲ ನಮ್ಮ ವ್ಯವಸಾಯ ಖಾತೆ, ಕಮ್ಯೂನಿಟಿ ಡೆವಲಪ್‌ಮೆಂಟ್ ಖಾತೆ, ಕೋ ಅಪರೇಟೀವ್ ಖಾತೆಗೆ ಸಂಬಂಧಪಟ್ಟ ಅಧಿಕಾರಿಗಳು ಮಟ್ಟಿಗೆ ಅದಕ್ಕೆ ಜವಾಬ್ದಾರರು ಅಂತ ಅಲ್ಲ. ಅದರಲ್ಲಿ ಎಷ್ಟುಮಟ್ಟಿಗೆ ಆ ಅಧಿಕಾರಿಗಳ ಜವಾಬ್ದಾರಿ ಇರುತ್ತದೆಯೋ ಅಷ್ಟೇಮಟ್ಟಿಗೆ ಅಧಿಕಾರಿಯೇತರರ ಜವಾಬ್ದಾರಿಯೂ ಕೂಡ ಇರುತ್ತದೆ. ಪ್ರತಿಯೊಂದು ಪಂಚಾಯ್ತಿಯಲ್ಲೂ ಪಂಚಾಯ್ತಿ ಕ್ಷೇತ್ರದಲ್ಲಿರತಕ್ಕ ಎಲ್ಲಾ ವ್ಯವಸಾಯಗಾರರೂ ಕಲೆತು, ಪ್ರತ್ಯೇಕ ಪ್ರತ್ಯೇಕವಾಗಿ ಅವರಿಗೆ ಯಾವ ಯಾವ ಅನುಕೂಲತೆಗಳಾಗಬೇಕು, ಅವರ ಅವಶ್ಯಕತೆಗಳೇನು ಎಂಬುದನ್ನು ತಿಳಿದುಕೊಂಡು, ಒಂದು ಪಟ್ಟಿಯನ್ನು ಸಿದ್ಧ ಮಾಡಿ ಅವರಿಗೆ ಇಂತಿಂತಹ ಅನುಕೂಲಗಳನ್ನು ಒದಗಿಸಿದರೆ ಎಷ್ಟು ಹೆಚ್ಚು ಉತ್ಪನ್ನ ಮಾಡುತ್ತೀರಿ ಎಂದು ಕೇಳಿ ಅವರ ಅನುಮತಿಯಿಂದ ಅವರ ಸ್ವಇಚ್ಛೆಯಿಂದ ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರಲ್ಲಿ ಕೇವಲ ಪಂಚಾಯ್ತಿ ಸದಸ್ಯರು ಅಷ್ಟೇ ಅಲ್ಲ ಇಡೀ ಗ್ರಾಮಕ್ಕೆ ಸಂಬಂಧಪಟ್ಟ, ಪಂಚಾಯ್ತಿ ಕ್ಷೇತ್ರಕ್ಕೆ ಸಂಬಂಧಪಟ್ಟ ಎಲ್ಲಾ ಜನರನ್ನೂ ಕೂಡ ಕರೆದು ಅವರ ತೀರ್ಮಾನದಂತೆ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ ಮತ್ತು ಈ ಕಾರ್ಯಕ್ರಮದ ಮೇಲೆ ತೀರ್ಮಾನವನ್ನು ತೆಗೆದುಕೊಂಡಂತಹ ಕಾಲಕ್ಕೆ ಗೊಬ್ಬರ ಮತ್ತು ಇನ್ನಿತರ ವಿಚಾರದಲ್ಲಿ ಯಾವ ರೀತಿ ಮಾಡುತ್ತಾರೆ ಎಂಬ ಅಂಕಿಸಂಖ್ಯೆಗಳನ್ನು ಇನ್ನು ಸ್ವಲ್ಪ ಹೊತ್ತು ಬಿಟ್ಟು ಕೊಡುತ್ತೇನೆ. ಇಷ್ಟು ಮಾತ್ರ ಹೇಳಬಲ್ಲೆ, ಕಳೆದ ಒಂದೂವರೆ ವರ್ಷದಿಂದ ಗೊಬ್ಬರ ಬೀಜ ಇವುಗಳ ವಿಚಾರದಲ್ಲಿ ವಿಶೇಷವಾದಂತಹ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಪ್ರಯತ್ನಗಳನ್ನು ಮಾಡಿದ್ದೇವೆ. ಇನ್ನು ನೀರಾವರಿ ವಿಚಾರ. ಇದು ಬಹಳ ಸುಲಭವಾಗಿ ಬಿಡಿಸ ಬಹುದಾದ ಪ್ರಶ್ನೆಯಲ್ಲ ಈ ವಿಚಾರದಲ್ಲಿ ಹೆಚ್ಚು ಮಾತನಾಡುವಂತಹ ಅಗತ್ಯ ಇಲ್ಲ. ಅದಕ್ಕೆ ಪ್ರತ್ಯೇಕ ವಾದ ಸಂದರ್ಭ ಇದೆ ಅಗ್ಗೆ ಸಂಬಂಧಪಟ್ಟ ಮಂತ್ರಿಗಳು ಮಾತನಾಡುತ್ತಾರೆ. ಆದರೆ ಈಗ ನಾನು ಆ ವಿಚಾರವಾಗಿ ಹೇಳುವಂತಹ ಉದ್ದೇಶ ಇಷ್ಟೆ. ಎಲ್ಲಿಯವರೆಗೆ ಈಗ ನಾನು ಹೇಳಿದಂತಹ ಈ ಮೂರು ತರಹದ ಅನುಕೂಲತೆ ನಮ್ಮ ರೈತರಿಗೆ ಅಥವಾ ವ್ಯವಸಾಯಗಾರರಿಗೆ ಒದಗುವುದಿಲ್ಲವೋ ಅಲ್ಲಿಯವರೆಗೆ ಅವನ ಉತ್ಪನ್ನ ಹೆಚ್ಚಾಗುವಂತಹುದಕ್ಕೆ ಸಾಧ್ಯವಿಲ್ಲ. ಈಗ ಪಂಚಾಯಿತ್ ಅಗ್ರಿ ಕಲ್ಚರಲ್ ಪ್ರೊಡಕ್ಷನ್ ಪ್ಲಾನ್ ಅಂತ ಮಾಡಿ ಅದರಲ್ಲಿ ರೈತರು ಮತ್ತು ಪಂಚಾಯಿತಿ ಜನತೆಯ ಪ್ರತಿ ನಿಧಿಗಳನ್ನು ಸೇರಿಸಿ ನಾವು ಅವರ ಮಾರ್ಗದರ್ಶನದಲ್ಲೇ ಈ ಕೆಲಸವಾಗಬೇಕೆಂದು ಹೇಳಿ ಮತ್ತು ಅದಕ್ಕೆ ಬೇಕಾಗುವಂತಹ ಇನ್ನಿತರ ಅನುಕೂಲತೆಗಳನ್ನು ಒದಗಿಸಿ ಕೊಟ್ಟು ಇಷ್ಟು ಮಾಡಿದಮೇಲೂ ಕೂಡ ಅಲ್ಲಿ ಏನೂ ಕೆಲಸವಾಗಲಿಲ್ಲ ಎಂದರೆ ಅದರ ತಪ್ಪು ಯಾರದು ಎಂದು ತಮಗೆ ನಾನು ಕೇಳಲಿಕ್ಕೆ ಬಯಸುತ್ತೇನೆ. ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ. ಕುದುರೆಯ ಬಾಯಿ ಹತ್ತಿರ ನೀರನ್ನು ತೆಗೆದುಕೊಂಡು ಹೋಗಿ ಇಡಬಹುದು ಆದರೆ ಅದನ್ನು ಕುಡಿಯುವಂತೆ ಮಾಡುವುದಕ್ಕೆ ಸಾಧ್ಯವಿಲ್ಲ. ಸರಕಾರದವರಿಗೆ ಯಾವ ರೀತಿ ಎಷ್ಟುಮಟ್ಟಿಗೆ ಜವಾಬ್ದಾರಿ ಇದೆಯೋ ಅಷ್ಟೇ ಮಟ್ಟಿಗೆ ಸಾರ್ವ ಜನಿಕರ ಜವಾಬ್ದಾರಿಯೂ ಕೂಡ ಇದೆ ಎಂಬುದನ್ನು ನಾವು ಮರೆಯತಕ್ಕದ್ದಲ್ಲ.

ಆದುದರಿಂದ ಮಾನ್ಯ ಸದಸ್ಯರಲ್ಲಿ ನಾನು ನಮ್ರತೆಯಿಂದ ನಿವೇದಿಸುತ್ತೇನೆ. ಎಲ್ಲಿಯವರೆಗೆ ನ್ಯೂನತೆಗಳಿರುತ್ತವೋ ಅಲ್ಲಿಯವರೆಗೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಎಂದು ತಿಳಿದುಕೊಳ್ಳಬೇಕು. ಇದು ಕೇವಲ ಸರ್ಕಾರದ ಜವಾಬ್ದಾರಿ, ಅಧಿಕಾರಿಗಳ ಜವಾಬ್ದಾರಿ ಎಂದು ತಿಳಿದು ತಮ್ಮ ಹೊಣೆ ಯನ್ನು ದೂರಮಾಡಿಕೊಳ್ಳುವುದು ಸರಿಯಲ್ಲ. ಮುಂದೆ ಬರುವ ಅಗ್ರಿಕಲ್ಚರಲ್ ಸೀಜನ್ನಿನಲ್ಲಿ ತಮ್ಮ ಕ್ಷೇತ್ರಗಳಲ್ಲಿ ಪಂಚಾಯತಿ ಅಗ್ರಿಕಲ್ಚರಲ್ ಪ್ರೊಡಕ್ಷನ್ ಪ್ಲಾನ್ ಎಷ್ಟುಮಟ್ಟಿಗೆ ಯಾವರೀತಿ ಉಪ ಯುಕ್ತವಾಗಲು ಸಾಧ್ಯ, ತೊಂದರೆಯೇನಿದೆ ಎಂದು ತಿಳಿಯಲು ಪ್ರವಾಸಮಾಡಿ ಸರ್ಕಾರ ಮಾಡ ಬೇಕಾದ ಸಹಾಯವೇನಾದರೂ ಇದ್ದರೆ ತೋರಿಸಿದರೆ ತಕ್ಷಣ ಮಾಡಿ ಲೋಪವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಹಾಗೆ ಮಾಡಬೇಕು ಎಂದು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ.

5 P.M.

ಇನ್ನು ಕುಡಿಯುವ ನೀರಿನ ಬಾವಿ ವಿಚಾರದಲ್ಲಿ ಮಾತನಾಡಿದ್ದಾರೆ. ಆ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಇದು ಬಹಳ ಮುಖ್ಯವಾದ ಸಮಸ್ಯೆ. ಪ್ರಶ್ನೋತ್ತರ ಕಾಲದಲ್ಲಿ ಅನೇಕ ಸಂದರ್ಭಗಳಲ್ಲಿ ಇದರ ವಿಚಾರವನ್ನು ಸಭೆಗೆ ತಿಳಿಸಿದ್ದೇನೆ. ಇನ್ನೂ ನಮ್ಮ ಮೈಸೂರು ದೇಶದಲ್ಲಿ ಸುಮಾರು 500ಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ಒಂದು ಬಾವಿ ಕೂಡ ಇಲ್ಲ; ಅಂಥ ಹಳ್ಳಿಗಳಿವೆ. ಮತ್ತು ಸುಮಾರು 7 ಸಾವಿರ ಹಳ್ಳಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿನ ಅನುಕೂಲತೆಯಿಲ್ಲ. ಇಂದೂ ಕೂಡ ನೀರಿನ ಪೂರೈಕೆಯ ಬಗ್ಗೆ ನಮ್ಮ ಸರ್ಕಾರದಲ್ಲಿ 3 ತರದ ಯೋಜನೆಗಳಿವೆ. ಮೊದಲ ನೆಯದಾಗಿ ರಾಷ್ಟ್ರೀಯ ವಿಸ್ತರಣಾ ಯೋಜನೆಗೆ ಬಜೆಟ್ಟಿನಲ್ಲಿದ್ದ ಹಣ ಖರ್ಚು ಮಾಡುವುದು, ಎರಡನೆಯದು ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್ ಕೆಳಗಿರುವ ಹಣ ಖರ್ಚುಮಾಡುವುದು, ಮೂರನೇ ಯದು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ. ಈ ಮೂರನೆಯದು ಕೇಂದ್ರ ಸರ್ಕಾರ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿರುವುದು. ಇದಕ್ಕೆ ಕೇಂದ್ರ ಸರ್ಕಾರ ಅರ್ಧ ಹಣ ಕೊಡುವುದು, ನಾವು ಅರ್ಧ ಕೊಡಬೇಕು. ಕಳೆದ 1961-62ನೆಯ ಇಸವಿಯಿಂದ ನಾವು ಹೊಸದಾಗಿ 1,369 ಬಾವಿಗಳನ್ನು ಮಂಜೂರುಮಾಡಿದ್ದೇವೆ. ಸುಮಾರು 600 ಈಗಾಗಲೆ ಪೂರ್ಣವಾಗಿವೆ, ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಪ್ರಕಾರ ಒಟ್ಟು 202 ಕೆಲಸಗಳು ಮಂಜೂರಾಗಿವೆ, ಒಟ್ಟು ಖರ್ಚು ಸುಮಾರು 1 ಕೋಟಿ 21 ಲಕ್ಷ ರೂಪಾಯಿಗಳು. ಅದರಲ್ಲಿ 60 ಕೆಲಸಗಳು ಈಗಾಗಲೇ ಪೂರ್ಣವಾಗಿವೆ. ನಮ್ಮ ಮೈಸೂರು ರಾಜ್ಯದ ಎಲ್ಲಾ ಹಳ್ಳಿಗಳಿಗೂ ಸಾಕಷ್ಟು ಪ್ರಮಾಣದಲ್ಲಿ ಒಳ್ಳೆಯ ಕುಡಿಯುವ ನೀರಿನ ಪೂರೈಕೆ ಮಾಡುವುದಾದರೆ ಅದರ ಒಟ್ಟು ಖರ್ಚು ಸುಮಾರು 24 ಕೋಟಿ ರೂಪಾಯಿಗಳವರೆಗೆ ಬರುತ್ತದೆಂದು ಈಗಾಗಲೆ ಅಂದಾಜು ಮಾಡಲಾಗಿದೆ. ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಕೂಡ ತಯಾರಾಗಿದೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಪ್ರಕಾರ 5 ಸಾವಿರಕ್ಕಿಂತ ಕಡಮೆ ಜನಾಂಗವಿರುವ ಊರಿಗೆ, ಯಾವ ಪಂಚಾಯಿತಿಗೆ ಸೇಕಡ 25 ಭಾಗ ವಾಪಸ್ಸು ಕೊಡುವ ಶಕ್ತಿಯಿದೆ ಮತ್ತು ಪ್ರತಿ ವರ್ಷ ತನ್ನ ಕೆಲಸವನ್ನು ನಡೆಸುವ ಶಕ್ತಿ

ಯಿದೆ ಅದಕ್ಕೆ ಅನ್ವಯಿಸಬೇಕು. ಮೊನ್ನೆತಾನೆ ನಾವು ಕಳುಹಿಸಿದ 17 ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮುಗಳು ಕೇಂದ್ರ ಸರ್ಕಾರದವತಿಯಿಂದ ಮಂಜೂರಾತಿಯನ್ನು ಪಡೆದಿವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಇದರ ಖರ್ಚು ಸುಮಾರು ಹತ್ತೂವರೆ ಲಕ್ಷ ರೂಪಾಯಿಗಳು. ಪುನಃ 21 ಸ್ಕೀಮುಗಳನ್ನು ಕಳುಹಿಸಿದ್ದೇವೆ. ಅದರ ಖರ್ಚು 5 ಲಕ್ಷ 38 ಸಾವಿರ ರೂಪಾಯಿಗಳಾಗುತ್ತದೆ. ನಮ್ಮ ಉದ್ದೇಶ ಮತ್ತು ಪ್ರಯತ್ನ ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಮೈಸೂರು ರಾಜ್ಯದ ಪ್ರತಿಯೊಂದು ಹಳ್ಳಿಗೂ ಕೂಡ ಕನಿಷ್ಠಪಕ್ಷ ಒಂದು ಕುಡಿಯುವ ನೀರಿನ ಬಾವಿಯನ್ನಾದರೂ ಕೊಡಬೇಕೆಂಬುದು.

ಕೊನೆಯ ವಿಚಾರವನ್ನು ಮುಗಿಸುವುದಕ್ಕೆ ಮುಂಚೆ ಕೊಂಡಜ್ಜಿ ಬಸಪ್ಪ ಕಮಿಟಿ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಸದಸ್ಯರು ಕೆಲವರು ಈ ಸಮಿತಿಯ ವರದಿ ವಿಚಾರದಲ್ಲಿ ಕೆಲವು ಮಾತನ್ನಾಡಿದ್ದಾರೆ. ಈಗಿರುವ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳಿಗೆ ಸಾಕಾದಷ್ಟು ಪ್ರಮಾಣದಲ್ಲಿ ಹಣ ಮತ್ತು ಅಧಿಕಾರ ಸಿಕ್ಕಿಲ್ಲ, ಅದು ಹೆಚ್ಚಾಗಿ ಬೇಕು ಎಂದು ಹೇಳಿದರು. ಅದರ ಬಗ್ಗೆ ಬಹುಶಃ ಭಿನ್ನಾಭಿಪ್ರಾಯವಿಲ್ಲ. ಇದೇ ಕಾರಣದಿಂದ ಎಲ್ಲವನ್ನೂ ಕೂಲಂಕಷವಾಗಿ ಚರ್ಚಿಸಿ ಸರ್ಕಾರಕ್ಕೆ ವರದಿಮಾಡುವುದಕ್ಕಾಗಿ 1952ನೆಯ ಇಸವಿ ಕೊನೆಯಲ್ಲಿ ಆ ಸಮಿತಿಯನ್ನು ನೇಮಕ ಮಾಡಿದರು. ಅದು ಸಲ್ಲಿಸಿರುವ ವರದಿಯನ್ನು ತತ್ವಶಃ ಒಪ್ಪಿ ಅದರ ಆಧಾರದ ಮೇಲೆ ಈಗಾಗಲೆ ಒಂದು ಕಾಂಪ್ರಹೆನ್ಸಿವ್ ಬಿಲ್ಲನ್ನು ತಯಾರು ಮಾಡಲಾಗಿದೆ. ಸಾಧ್ಯವಾದಮಟ್ಟಿಗೆ ಅದನ್ನು ಈ ಅಧಿವೇಶನದಲ್ಲೇ ಇಂಟ್ರೊಡ್ಯೂಸ್ ಮಾಡಬೇಕೆಂದಿದ್ದೇವೆ.

ಇನ್ನು ಸಹಕಾರದ ವಿಚಾರ. ಈ ವಿಚಾರದಲ್ಲಿ ಒಳ್ಳೆಯ ಮಾತನ್ನೂ ಕಟುವಾದ ಮಾತನ್ನೂ ಆಡಿದ್ದಾರೆ. ಆದರೆ ಒಂದು ಮಾತು, ಪ್ರತ್ಯೇಕವಾಗಿ ನನಗೆ ಒಂದು ಪತ್ರ ಬರೆದು ತಿಳಿಸಿದ್ದರೆ ಕಾರ್ಯಕ್ರಮ ಕೈಕೊಳ್ಳಬಹುದಾಗಿತ್ತು. ಈ ಸಭೆಯಲ್ಲಿ ಅದನ್ನು ತಿಳಿಸಬೇಕಾದ ಅಗತ್ಯ ಕಂಡು ಬರಲಿಲ್ಲ. ಹೇಗಾದರೂ ಇರಲಿ, ಈ ಸಹಕಾರ ಕ್ಷೇತ್ರ ಬಹಳ ವ್ಯಾಪಕವಾಗಿ ಬೆಳೆಯುತ್ತಿರುವುದು ಎಲ್ಲರಿಗೂ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಸುಮಾರು 19—20 ಸೇವಾ ಸಹಕಾರ ಸಂಸ್ಥೆಗಳಿವೆ. ಇವುಗಳ ವ್ಯವಹಾರದಲ್ಲಿ ತೊಡಗಿಸಿರುವ ಬಂಡವಾಳ ಸುಮಾರು 120 ಕೋಟಿ ರೂಪಾಯಿಗಳು. ಇಷ್ಟೊಂದು ವ್ಯಾಪಕವಾಗಿರುವ ವ್ಯವಹಾರದಲ್ಲಿ ಅಲ್ಲಲ್ಲಿ ದೋಷಪದೋಷ ಕಂಡುಬಂದರೆ ಅದನ್ನು ಬಹಳ ದೊಡ್ಡದು ಮಾಡಿ ಇಡೀ ಸಹಕಾರ ಕ್ಷೇತ್ರಕ್ಕೇ ಕಳಂಕ ಬಂದಿದೆಯೆಂದು ಹೇಳುವುದನ್ನು ಒಪ್ಪುವುದಿಲ್ಲ. ಪುನಃ ಮಾನ್ಯ ಸದಸ್ಯರಿಗೆ ಇಲ್ಲಿ ನೆನಪು ಮಾಡಲಿಕ್ಕೆ ಬಯಸುತ್ತೇನೆ ಸಹಕಾರ ಇಲಾಖೆ, ಫಾರೆಸ್ಟು ಇಲಾಖೆ, ಪಿ. ಡಬ್ಲ್ಯು. ಡಿ. ಇಲಾಖೆ ಹೀಗೆ ಬೇರೆ ಎಲ್ಲ ಇಲಾಖೆಗಳಲ್ಲಿರುವಂತೆ ನಮ್ಮ ಇಲಾಖೆಯಲ್ಲಿಯೂ ಕೂಡ ಪ್ರತಿಯೊಂದು ಸಹಕಾರ ಸಂಘಗಳೂ ತಮ್ಮದೇ ಆದ ಬೈಲಾಸ್ ಗಳನ್ನು ಮಾಡಿಕೊಂಡು ಪ್ರತಿಯೊಂದು ಸಹಕಾರ ಸಂಘಗಳು ಆಡಿಟು ಕಮಿಟಿ ಮಾಡಿಕೊಂಡು, ಜನರಲ್ ಬಾಡಿ ಮೀಟಿಂಗ್ ಮಾಡಿಕೊಂಡು ಹೋಗುತ್ತಿವೆ. ಇದರಲ್ಲಿ ಸರಕಾರದ ಲಿಮಿಟೇಷನ್ನು ಏನು ಎನ್ನುವುದನ್ನು ತಾವಾದರೂ ತಿಳಿದುಕೊಳ್ಳಬೇಕು. ಒಂದು ಧ್ವನಿಯಲ್ಲಿ 'Hands off' ಎಂದು ಹೇಳುತ್ತಾರೆ. ಇನ್ನೊಂದು ಧ್ವನಿಯಲ್ಲಿ ಸರಕಾರದವರು ಸರಿಯಾಗಿ ಮಾಡದೆ ಇದರಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಮತ್ತೊಂದು ಧ್ವನಿಯಲ್ಲಿ ಅಲ್ಲೆಲ್ಲಾ ಹಾಳಾಗುತ್ತಿವೆ, ಕಾನೂನನ್ನು ಅನುಸರಿಸಿಕೊಂಡು ಅಧಿಕಾರಿಗಳೇನೂ ಮಾಡುತ್ತಿಲ್ಲ, ಕೆಲವು ಜನ ಸದಸ್ಯರು ಯಾವುದೋ ಒಂದು ಉದಾಹರಣೆ ಕೊಟ್ಟು ಇಲ್ಲಿ ಹೇಳಿದರು. ಹೊಸದಾಗಿ ಸದಸ್ಯರಾಗಿ ಇಂತಹವರನ್ನು ಮಾಡಲು ಈ ಸಂಸ್ಥೆಗಳವರು ಅವಕಾಶ ಕೊಡಲಿಲ್ಲ ಎಂದು ಹೇಳಿದರು. ಮಾನ್ಯ ಸದಸ್ಯರು ಒಪ್ಪಿದಂತಹ ಒಂದು ಕಾಯಿದೆಯನ್ನು ಇದೇ ಹೌಸಿನಲ್ಲಿ ಪಾಸಾಗಿತ್ತೊ ಆ ಕಾಯಿದೆ ಪ್ರಕಾರ ಪ್ರತಿಯೊಂದು ಸಹಕಾರ ಸಂಸ್ಥೆಗಳು ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬರಲು ಒಂದು ಕಾನೂನು ಇದೆ. ಪ್ರತ್ಯೇಕವಾದ ಒಂದು ಆಡಳಿತವಿದೆ. ಅದಕ್ಕೇ ಪ್ರತ್ಯೇಕವಾದ ಬೈಲಾಸ್‌ಗಳೂ ಇವೆ. ನಮ್ಮ ಕೋ-ಆಪರೇಟೀವ್ ಸೊಸೈಟೀಸ್ ಆಕ್ಟ್ ಏನಿದೆಯೋ ಅದಕ್ಕೆ ವಿರೋಧವಾಗಿ ಯಾವ ಒಂದು ಕೆಲಸವನ್ನೂ ಮಾಡುವುದಕ್ಕೆ ಬರುವುದಿಲ್ಲ. ಯಾವುದೋ ಸಹಕಾರ ಸಂಘದಲ್ಲಿದ್ದ ಸದಸ್ಯರನ್ನು ಕಿತ್ತು ಹಾಕಬೇಕೆಂದರೆ ತೊಂದರೆಯಾಗುತ್ತದೆ. ಅನೇಕ ಕಡೆಗಳಲ್ಲಿ ಕೆಲವು ಸಹಕಾರ ಸಂಘಗಳು ಕೆಲವು ಇಂಟರೆಸ್ಟೆಡ್ ಅಥವಾ ಒಂದು ಕ್ಲಿಕ್, ಅಥವಾ ಒಂದು ಗುಂಪು ಎಂದು ಅಲ್ಲಿ ಇಂತಹ ಜನರ ಕೈಯಲ್ಲಿ ಸಿಕ್ಕಿಕೊಂಡಿದ್ದಾರೆ ಎಂದು ಹೇಳಿದರ ಇದರಲ್ಲಿ ಸರಕಾರ ನಿಸ್ಸಹಾಯಕವಾಗಿದೆ. ಎಲ್ಲಿಯತನಕ ಇವುಗಳ ವ್ಯವಹಾರದ ಬಗ್ಗೆ, ಆಡಳಿತದ ಬಗ್ಗೆ, ಆಯಾ ಸಹಕಾರ ಸಂಘಗಳ ಸದಸ್ಯರು ಆಕ್ಷೇಪ ಮಾಡುವುದಿಲ್ಲವೋ ಅಥವಾ ಪ್ರತಿಭಟಿಸುವುದಿಲ್ಲವೋ, ಅಥವಾ ಅದನ್ನು ಸರಕಾರದ ಗಮನಕ್ಕೆ ತರುವುದಿಲ್ಲವೋ ಅಲ್ಲಿಯವರೆಗೆ ಸರಕಾರ ಹಸ್ತಕ್ಷೇಪ ಮಾಡುವುದಕ್ಕೆ ಸಾಧ್ಯವಿಲ್ಲ. ನಮಗೆ ರಿಪೋರ್ಟು ಬಂದ ತಕ್ಷಣ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎಂದು ಅಷ್ಟು ಮಾತ್ರ ಆಶ್ವಾಸನೆ ಇಲ್ಲ ಕೊಡಬಲ್ಲೆ. ಅನೇಕ ಪ್ರೈಮರಿ ಸೊಸೈಟಿಗಳು, ಮಾರ್ಕೆಟಿಂಗ್ ಸೊಸೈಟಿಗಳು ಇಲ್ಲಿಂದ ಸರಕಾರಕ್ಕೆ ದೂರುಗಳ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಬರುತ್ತವೆ. ಕೆಲವು ಸ್ಥಳಗಳು ಅನೇಕ ಸದಸ್ಯರು ಹೇಳಿರುವಂತೆ ನನಗೂ ಗೊತ್ತಿದೆ. ಪ್ರತಿಯೊಂದು ಕಡೆಯಲ್ಲಿರುವ ಪ್ರೈಮರಿ ಮತ್ತಿತರ ಸೊಸೈಟಿಗಳಿಗಾಗಿ 18 ಕೋಟಿಯಷ್ಟು ವೆಚ್ಚ ಮಾಡುತ್ತಿದ್ದೇವೆ. ಇದೇನೂ ಸಣ್ಣ ಮೊತ್ತವಲ್ಲ. ಅನೇಕ ಕಡೆ ಯಾರಿಗೆ ಸಾಲದ ಆವಶ್ಯಕತೆ ಇಲ್ಲವೋ ಅವರಿಗೆ ಕೂಡ ಸಾಲ ಸಿಕ್ಕಿದೆ. ಯಾರಿಗೆ ಅತ್ಯಾವಶ್ಯಕವಾಗಿ ಸಾಲ ಸಿಗಬೇಕೋ ಅವರಿಗೆ ಸಿಗುತ್ತಿಲ್ಲ. ಇದು ನಡೆಯುತ್ತಿದೆ. ಆದರೂ ನಾವು ಇದರ ಹಿನ್ನೆಲೆಯನ್ನು ನೋಡಿದರೆ ಸಹಕಾರಸಂಘಗಳು ಶಾಶ್ವತವಾಗಿ ನಡೆಯಬೇಕು. ಮತ್ತು ಪುನಃ ಪುನಃ ಇದರಲ್ಲಿ ಹಸ್ತಕ್ಷೇಪ ಮಾಡಬಾರದು ಎಂದಿದೆ. ಅದರಂತೆ ನಮ್ಮ ಕಾನೂನಿಗೂ ಒಂದು ಪರಿಮಿತಿ ಹಾಗೂ ಲಿಮಿಟೇಷನ್ ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಆದುದರಿಂದ ಮಾನ್ಯ ಸದಸ್ಯರು ಸರಕಾರದ ಕಾನೂನಿನ ಒಂದು ಪರಿಮಿತಿಯನ್ನು ನೋಡಿಕೊಂಡು ಟೀಕೆ ಮಾಡುವಾಗ ಮರೆಯಬಾರದು ಎಂದು ನಾನಿಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಕೆಲವು ಜನ ಸದಸ್ಯರು ಹೇಳಿದರು : ಅಗ್ರಿಕಲ್‌ಚರ್ ಕ್ರೆಡಿಟ್ಸ್ ರೇಟು ವಿಚಾರದಲ್ಲಿ ಕೆಲವೊಂದು ತಿದ್ದುಪಡಿಯಾಗಬೇಕೆಂದು ನಮ್ಮ ರೈತರಿಗೆಲ್ಲರಿಗೂ ಸಾಲ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ ಮತ್ತು ಸಾಕಷ್ಟು ಪ್ರಮಾಣದಲ್ಲಿ ಸಾಲದ ಹಣವೂ ವಸೂಲಾಗುತ್ತಿಲ್ಲ, ಇವೆರಡೂ ಹೊಂದಿಕೊಂಡು ಇರುವುದೇ ನಮ್ಮ ಗುರಿ. ಮೂರನೆ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಸುಮಾರು 37-38 ಕೋಟಿಯಷ್ಟು ಹಣವನ್ನು ನಮ್ಮ ರೈತರಿಗೆ ಸಾಲವಾಗಿ ಒದಗಿಸಬೇಕೆಂದಿದೆ. ಇವೊತ್ತಿನವರೆಗೆ ನಾವು ಕೊಟ್ಟಿರುವ ಸಾಲ ಕೇವಲ 18 ಕೋಟಿಯಷ್ಟು ಮಾತ್ರ. ಇನ್ನೂ ಈ ಯೋಜನೆಯೊಳಗೆ 20 ಕೋಟಿಯವರೆಗೆ ಮುಟ್ಟಬೇಕಾಗಿದೆ. ಇದರ short fallಗೆ ಕಾರಣವೇನೆಂದರೆ. ಅನೇಕಕಡೆ ಕೊಟ್ಟಂತಹ ಸಾಲ ಸರಿಯಾಗಿ ವಸೂಲಾಗುತ್ತಿಲ್ಲ. ಏತಕ್ಕಾಗಿ ಆಗಿದೆ ಎನ್ನುವುದನ್ನೂ ನಾನು ಒಪ್ಪುತ್ತೇನೆ. ನನಗೆ ತಿಳಿದಮಟ್ಟಿಗೆ ಇದಕ್ಕೆ ಎರಡು ಕಾರಣಗಳಿವೆ. ಮೊದಲನೇದಾಗಿ ಯಾವ ಉದ್ದೇಶಕ್ಕಾಗಿ ರೈತರು ಸಾಲತೆಗೆದುಕೊಂಡಿರುತ್ತಾರೋ ಆ ಉದ್ದೇಶಕ್ಕಾಗಿ ಉಪಯೋಗಿಸುವುದಿಲ್ಲ. ಅದರಿಂದ ವಾಪಸು ಕೊಡುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಇನ್ನೂ ಕೆಲವು ಕಡೆಗಳಲ್ಲಿ ಸಾಲಪಡೆದು ಯಾವ ಉದ್ದೇಶಕ್ಕಾಗಿ ಖರ್ಚುಮಾಡಬೇಕೆಂದಿದ್ದಾರೋ ಆಗ ನೈಸರ್ಗಿಕವಾದ ತೊಂದರೆಗಳು ಬರುತ್ತವೆ. ಎಂದರೆ ಆಗ ಕ್ಷಾಮ ಬರುತ್ತದೆ. ಮಳೆ ಸಂಪೂರ್ಣವಾಗಿ ಆಗದೆ ಮಳೆ ಅಭಾವವಾಗುತ್ತದೆ. ಅವರು ಮಾಡಿದಂತಹ ಕಸಬುಗಳಿಂದ ಒಂದು ಕಾಸಿನಷ್ಟು ಫಲವೂ ಬರುವುದಿಲ್ಲ. ಇಂತಹ ಪರಿಸ್ಥಿತಿಯಿಂದಾಗಿ ಸಾಲ ವಾಪಸುಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಿಗೆಲ್ಲರಿಗೂ ಗೊತ್ತಿದೆ, ನೀರಾವರಿ ಪ್ರದೇಶಗಳು ನಮ್ಮಲ್ಲಿ ಕೇವಲ ನೂರಕ್ಕೆ ಏಳರಷ್ಟು ಮಾತ್ರಇದೆ. ಉಳಿದ ಪ್ರದೇಶಗಳಲ್ಲಿ ನೈಸರ್ಗಿಕ ಕಾರಣಗಳನ್ನು ಅನುಸರಿಸಿಕೊಂಡು ವ್ಯವಸಾಯ ನಡೆಯಬೇಕು. ಬಹುಮಟ್ಟಿಗೆ ಓವರ್‌ಡ್ಯೂಸ್ ಈ ಒಂದು ನೈಸರ್ಗಿಕ ವಾತಾವರಣದಿಂದಾಗಿ ಯಾವ ಉದ್ದೇಶಕ್ಕಾಗಿ ಸಾಲಪಡೆದರೋ ಅದಕ್ಕೆ ಉಪಯೋಗಿಸುವುದಕ್ಕಾಗದಂತಹ ಕಾರಣವಾಗಿದೆ. ಇಂದು ನಾವು ಈ Short term Credit and Long term Credit ಎಂದು ಏನು ಕೊಡುತ್ತಿದ್ದೇವೋ ಅದರ ಉದ್ದೇಶ ರಾಜ್ಯದಲ್ಲಿರುವ ರೈತರನ್ನು ಸಾಲದಲ್ಲಿಯೇ ಮುಗಿಸಬೇಕೆಂದಾಗುವುದಿಲ್ಲ. ಅವರಿಗೆ ಅನುಕೂಲಗಳನ್ನು, ವ್ಯವಸ್ಥಿತವಾದ ವ್ಯವಸಾಯಕ್ಕೆ ಒದಗಿಸಿಕೊಟ್ಟು ಹೆಚ್ಚು ಹೆಚ್ಚು ಅನುಕೂಲಮಾಡಿಕೊಟ್ಟು ಅದರ ಮುಖಾಂತರ ನಾಳೆ ಒಂದು ಪ್ರಗತಿಯುತವಾದ ಹೆಜ್ಜೆಯನ್ನಿಟ್ಟು ಜೀವನವನ್ನು ನಡೆಸುವುದಕ್ಕೆ ಸಾಧ್ಯವಾಗಬೇಕೆಂದು ಈ ಉದ್ದೇಶದಿಂದ ಸಾಲಗಳನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಈ ವಿಚಾರದಲ್ಲಿ (ಶ್ರೀಮಾನ್ ವಿ. ಎಸ್. ಪಾಟೀಲರು) ಯಾವಾಗ ರೈತ ತೆಗೆದುಕೊಂಡ ಸಾಲದ ಹಣವನ್ನು ವಾಪಸು ಕೊಟ್ಟಿರುತ್ತಾನೋ ಅವನಿಗೆ ಯಾವ ತೊಂದರೆಯೂ ಆಗದಂತೆ ಪುನಃ ಹೊಸ ಸಾಲದ ಸಹಾಯವನ್ನು ಅನುಕೂಲತೆಗಳನ್ನು ಒದಗಿಸಿ ಕೊಡಬೇಕೆಂದು ಹೇಳಿದರು. ಹಿಂದೆ ಅವರು ಹೇಳಿದಹಾಗೆ ಯಾವಸಂಘ ನೂರಕ್ಕೆ 90ರಷ್ಟು ಹಳೇ ಸಾಲವನ್ನು ತೀರಿಸಿರುತ್ತದೋ ಅಂತಹ ಸಂಘಕ್ಕೆ ಪುನಃ ಹೊಸ ಸಾಲವನ್ನು ಕೊಡಬಹುದು ಎಂದು ನಾವು ಅನುಮತಿಕೊಟ್ಟಿರುವುದರಿಂದ ಆ ಸಾಲವನ್ನು ರಿಸರ್ವ್ ಬ್ಯಾಂಕಿನವರು ಅವರು ಹಾಕುವ ಷರತ್ತುಗಳ ಮತ್ತು ಕಟ್ಟಳೆಗಳಿಗೆ ನೀವು ಒಳಪಡಬೇಕೆಂದು ಹೇಳಲಾಗಿತ್ತು. ಕಳೆದವರ್ಷ ನಾವು ಸ್ವಲ್ಪಮಟ್ಟಿಗೆ ಇದನ್ನು ಸಡಿಲಿಸಿ ನೂರಕ್ಕೆ 65 ರಷ್ಟು ಸಾಲದಹಣ ವಾಪಸಾಗಿದ್ದರೆ, ಅಂತಹ ಸಂಘಗಳು ವಾಪಸುಕೊಟ್ಟಿದ್ದರೆ, ಹೊಸಸಾಲಗಳನ್ನು ಪುನಃ ಕೊಡಬೇಕೆಂದು ಡೈರೆಕ್ಷನ್ನು ಕೊಡಲಾಗಿದೆ. ಇದರಿಂದ ಜನಕ್ಕೂ ಬಹಳ ಅನುಕೂಲವಾಗಿದೆ. ಇಷ್ಟೇಅಲ್ಲ. ಸವಲತ್ತುಗಳನ್ನೂ ಅನುಕೂಲಗಳನ್ನೂ ಪಡೆಯದೇ ಇರುವಂತಹ ಸಂಘಗಳು ಇದ್ದಾವೆ. ಇದರಲ್ಲಿ ವಾಪಸು ಸಾಲ ಕೊಟ್ಟಂತಹ ರೈತರಿಗೂ ಅನಾನುಕೂಲವಾಗಬಾರದು, ಅವರ ವ್ಯವಸಾಯಕ್ಕೆ ಧಕ್ಕೆ ಬರಬಾರದು, ಅವರನ್ನು ಉತ್ತಮಪಡಿಸಬೇಕೆಂದು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

Non-Defaulting Members of a Defaulting Society ಗಳಲ್ಲಿ ಇರುವಂತಹ ಅವರಿಗೆ ಒಳ್ಳೆಯ ಬೀಜ, ಗೊಬ್ಬರ ಮೊದಲಾದ ಸಾಮಗ್ರಿಗಳನ್ನು ಮತ್ತು ಅಗತ್ಯವಾದ cash credits ಗಳನ್ನೂ ಒದಗಿಸುವುದಕ್ಕೆ ನಿರ್ಧಾರ ಮಾಡಿದ್ದೇವೆ. ಇದರಿಂದ ಬಹುಮಟ್ಟಿಗೆ ಅವರಿಗಿರತಕ್ಕ ತೊಂದರೆ ದೂರವಾಗಿದೆ. ಇನ್ನೊಂದು ಕ್ರೆಡಿಟ್ಸ್ ಕೊಡುವುದರಲ್ಲಿ ವಿಳಂಬವಾಗುತ್ತದೆ ಎಂದು. ನಮ್ಮ ಭಾರತದಲ್ಲಿ ಮೈಸೂರುಪ್ರಾಂತ ದೊಡ್ಡ ದೊಡ್ಡ ವ್ಯವಹಾರಗಳನ್ನು ಮಾಡುತ್ತಿರುವಂತಹ ಷೆಡ್ಯೂಲು ಬ್ಯಾಂಕುಗಳಲ್ಲಿ ನಮ್ಮ ಬ್ಯಾಂಕು ಕೂಡ ಒಂದು. ದೊಡ್ಡ ವ್ಯವಹಾರಗಳೂ ಬಹಳವಾಗಿ ಬೆಳೆಯುತ್ತಿವೆ. ಕೆಲವೊಂದು ಪ್ರದೇಶದಲ್ಲಿನ ತೊಂದರೆಗಳಿಂದಾಗಿ ಸ್ವಲ್ಪಮಟ್ಟಿನ ವಿಳಂಬವಾಗುತ್ತದೆ. ಅದನ್ನುಕೂಡ ನಾವೀಗಾಗಲೇ ನಿವಾರಿಸುತ್ತಿದ್ದೇವೆ.

ಇನ್ನು ಪ್ರೈಮರಿ ಲ್ಯಾಂಡ್ ಮಾರ್ಟಗೇಜ್ ಸೊಸೈಟಿಗಳಲ್ಲಿ ಯಾವ ದರ್ಜೆಯ ಅಧಿಕಾರಿಗಳೇ ಇರಲಿ ಅವರು ಮೂರು ಸಾವಿರದವರೆಗೆ ಸಾಲ ಕೊಡಲು ಅವಕಾಶ ಮಾಡಿಕೊಡಲಾಗಿದೆ. ಹೀಗೆ ಇನ್ನೂ ಅನೇಕ ರೀತಿಯಲ್ಲಿ ಅನೇಕ ತೊಂದರೆಗಳನ್ನು ನಿವಾರಣೆಮಾಡಿದ್ದೇವೆ. ಇಲ್ಲಿರತಕ್ಕ ಅಧಿಕಾರಿಗಳಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ತೀರ್ಮಾನಮಾಡಿದ್ದೇವೆ.

ಇನ್ನು ಆಡಿಟ್ ವಿಚಾರದಲ್ಲಿ ನಾನು ನಾಲ್ಕಾರು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನಾಮಿನೇಷನ್ ವಿಚಾರದಲ್ಲಿ ಶ್ರೀಮಾನ್ ಕೆ. ಪಿ. ರೇವಣಸಿದ್ದಪ್ಪನವರು, ಈವಿಚಾರದಲ್ಲಿ ಬಹಳ ತರಾತುರಿಯಾಗಿದೆ ಎಂದು ಹೇಳಿದ್ದಾರೆ. ಈ ವಿಚಾವಾಗಿ ಕಳೆದ ಅಧಿವೇಶನದಲ್ಲಿ ಇದೇ ಸಭೆಯಲ್ಲಿ ನಾನು ಒಂದು ಮಾತನ್ನು ಹೇಳಿದ್ದೆ.— ನಾವು ಈ ನಾಮಿನೇಷನ್ನನ್ನು ಆದಷ್ಟು ಬೇಗ ರದ್ದು ಮಾಡುತ್ತೇವೆ ಎಂದು ಅನೇಕ ಕಡೆಗಳಲ್ಲಿ ಇದನ್ನು ಈಗಾಗಲೇ ರದ್ದು ಮಾಡಿದ್ದೇವೆ. ಯಾವ ಒಂದು ಸಹಕಾರಿ ಸಂಘವೇ ಆಗಲಿ ಅಲ್ಲಿ ಒಂದು ಲಕ್ಷ ರೂಪಾಯಿಗಳ ಬಂಡವಾಳವಿದ್ದಲ್ಲಿ ಅಂಥಕಡೆಗಳಲ್ಲಿ ಈ ನಾಮಿನೇಷನ್ನಿಗೆ ಸರ್ಕಾರದವರ ಒತ್ತಾಯವಿಲ್ಲ; ಅಲ್ಲಿ ನಾಮಿನೇಟ್‌ಮಾಡುವುದಿಲ್ಲ. ಇನ್ನು ಈ ಸಂಸ್ಥೆಗಳ ಬಂಡವಾಳ ಅದಕ್ಕಿಂತಲೂ ಜಾಸ್ತಿಯಾಗಿದ್ದರೆ— ಜಿಲ್ಲಾಮಟ್ಟದಲ್ಲಿ ಹಾಗೂ ರಾಜ್ಯದ ಮಟ್ಟದಲ್ಲಿ ಸರ್ಕಾರದ ಪರವಾಗಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿರುತ್ತಾರೆ. ಅಂಥ ಕಡೆಗಳಲ್ಲಿ ಮೈಸೂರು ಕೋಆಪರೇಟೀವ್ ಸೊಸೈಟಿಗಳ ಆಕ್ಟ್ 29ನೆಯ ಸೆಕ್ಷನ್ ಪ್ರಕಾರ ನಾಮಿನೇಟ್ ಮಾಡುವುದಕ್ಕೆ ಅವಕಾಶವಿದೆ.— ಇದೂ ಕೂಡ ಜಿಲ್ಲಾಮಟ್ಟದಲ್ಲಿ. ಇನ್ನು ಶ್ರೀ ರೇವಣಸಿದ್ದಪ್ಪನವರು ರೆಗ್ಯೂಲೇಟೆಡ್ ಮಾರ್ಕೆಟ್‌ಗಳ ವಿಚಾರ ಹೇಳಿದ್ದಾರೆ. ಆದರೆ ನನಗೀಗ ಹೆಚ್ಚಿನ ಅವಕಾಶ ಇಲ್ಲದಿರುವುದರಿಂದ ಆ ಬಗ್ಗೆ ಹೆಚ್ಚಿನ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಇಷ್ಟೇ ಹೇಳುತ್ತೇನೆ: ಉದ್ದೇಶಪೂರ್ವಕವಾಗಿ ಇಲ್ಲಿ ತಡಮಾಡುತ್ತಿಲ್ಲ. ಕೆಲವೊಂದು ಕಾಯಿದೆಗಳು ತೊಡಕಾಗಿರುವುದರಿಂದ ಈ ವಿಚಾರದಲ್ಲಿ ನಮ್ಮ ಹೈಕೋರ್ಟಿನಿಂದ ಒಂದು ತೀರ್ಮಾನ ಬಂದಿದೆ. ಈ ವಿಚಾರದಲ್ಲಿ ನಮ್ಮ ಆಕ್ಟ್ ಅಥವಾ ರೂಲ್ಸ್ ಇವುಗಳಲ್ಲೆಲ್ಲೂ ಈ ವಿಚಾರವನ್ನು ಪ್ರಸ್ತಾಪಮಾಡಿರಲಿಲ್ಲ. ಈ ಬಗ್ಗೆ ಯಾವ ಪ್ರಾವಿಜನ್ನೂ ಇರಲಿಲ್ಲ. ಈಗ ನಾವು ಈ ಬಗ್ಗೆ ರೂಲ್ಸನ್ನು ಇಷ್ಯೂ ಮಾಡಿದ್ದೇವೆ. ಈ ಹಿಂದೆ ಈ ಯಾವ ಒಂದು ಸಂಸ್ಥೆಯೇ ಆಗಲಿ ಮೊದಲನೆಯ ಬಾರಿಗೆ ಅದು ರಿಜಿಷ್ಟ್ರಾದಾಗ ಪ್ರಥಮತಃ ಒಬ್ಬ ನಾಮಿನೇಟಾದ ಛೇರ್ಮನ್ನರನ್ನು ಇಟ್ಟು ಅದರ ಮಾರನೆಯ ವರ್ಷ ಆ ಸ್ಥಾನಕ್ಕೆ ಚುನಾವಣೆಮಾಡಿ ಛೇರ್ಮನ್ನರನ್ನು ನೇಮಕ ಮಾಡಲಾಗುತ್ತದೆ. ಈ ಸಂಗತಿ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆಯೆಂದು ನಾನು ಭಾವಿಸಿದ್ದೆನು. ಇನ್ನು ನಾನೀಗ ಆಡಿಟ್ ವಿಚಾರದಲ್ಲಿ ನಾಲ್ಕಾರು ಮಾತುಗಳನ್ನಾಡಬಯಸುತ್ತೇನೆ.

Mr. SPEAKER.—Shall I extend the time by half-an-hour ?

HON'BLE MEMBERS.—Yes, Sir.

Mr. SPEAKER.—I extend the time by half an-hour.

ಶ್ರೀ ರಾಮಕೃಷ್ಣ ಹೆಗ್ಗಡೆ.—ಆಡಿಟ್ ವಿಚಾರವನ್ನೆತ್ತಿ ಸದಸ್ಯರುಗಳು ಅನೇಕ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಮೊಟ್ಟಮೊದಲನೆಯದಾಗಿ— ವರ್ಷಾನುಗಟ್ಟಲೆಗಳಿಂದ ಈ ಸಂಸ್ಥೆಗಳ ಆಡಿಟ್ಟೇ ಆಗುತ್ತಿಲ್ಲ, ಇದರಿಂದ ಅನೇಕ ತೊಂದರೆಗಳಾಗಿವೆ, ಸರ್ಕಾರದವರು ಈ ವಿಚಾರದಲ್ಲ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುತ್ತಿಲ್ಲ ಎಂಬುದಾಗಿ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಆದರೆ ಈ ಟೀಕೆಯಲ್ಲೇನೂ ಸಂಪೂರ್ಣವಾಗಿ ಸತ್ಯಾಂಶವಿಲ್ಲ ಎಂದು ನಾನು ಹೇಳುವುದಿಲ್ಲ. ಈ ದಿವಸ ಈ ಸಹಕಾರಿ ಸಂಸ್ಥೆಗಳ ವ್ಯಾಪಕ ಬಹಳವಾಗಿ ಬೆಳೆದಿದೆ. ಆದರೆ ಅಷ್ಟೇ ಪ್ರಮಾಣದಲ್ಲಿ ಈ ಆಡಿಟ್ ಶಿಬ್ಬಂದಿಯ ಸಂಖ್ಯೆ ಬೆಳೆಯಲಿಲ್ಲ. ಹೀಗಾಗಿ ಕೆಲವು ಕಡೆ ಲೆಕ್ಕಪತ್ರಗಳು ಆಡಿಟ್ ಆಗದೆ ಹಾಗೇ ಉಳಿದವು. ಇದಾದರೂ ಯಾವ ಸಂಖ್ಯೆಯಲ್ಲಿತ್ತು ಎಂಬುದಕ್ಕೆ ನಾನು ತಮಗೆ ಕೆಲವು ಅಂಕಿ ಸಂಖ್ಯೆಗಳನ್ನು ಕೊಟ್ಟರೆ ತಮಗೆ ಸಮಾಧಾನವಾಗಬಹುದೆಂದು ನಾನು ಭಾವಿಸಿದ್ದೇನೆ. ಈಗ ನಾನು ಹೇಳತಕ್ಕ ಅಂಕಿಸಂಖ್ಯೆಗಳಲ್ಲಿ ಇಂಡಸ್ಟ್ರಿಯಲ್ ಕೋಆಪರೇಟೀವ್ ಸೊಸೈಟಿಗಳು ಸೇರಿಲ್ಲ. 1961–62 ರಲ್ಲಿದ್ದ ಒಟ್ಟು ಸೊಸೈಟಿಗಳ ಸಂಖ್ಯೆ 14,655, ಇವುಗಳಲ್ಲಿ ಆಡಿಟ್ಟಾಗಿದ್ದವುಗಳ ಸಂಖ್ಯೆ 13,732

(ಶ್ರೀ ರಾಮಕೃಷ್ಣ ಹೆಗ್ಗಡೆ)

ಅಂದರೆ ಆಡಿಟ್ಟಾದವುಗಳು ಶೇಕಡ 93 ಆಯಿತು. ಇನ್ನು 1962-63ರಲ್ಲಿ: 14422ರಲ್ಲಿ ಆಡಿಟ್ಟಾದವು 14066, ಅಂದರೆ ಆಡಿಟ್ಟಾದವುಗಳ ಸಂಖ್ಯೆ ಶೇಕಡ 97·4 ಆಯಿತು ಇನ್ನು 1963-64ರಲ್ಲಿ ಈ ಜುಲೈ ಆಖೈರುವರೆಗೆ ತಾ।। 29-2-64ರ ವರೆಗೆ 90 ಪರ್ಸೆಂಟ್ ಆಡಿಟ್ಟಾಗಿದೆ. ಆದರೆ ಆಡಿಟ್ಟಾದ ಮಾತ್ರಕ್ಕೆ ಇವುಗಳ ವಿಶಿಷ್ಟ ಕೆಲಸಕಾರ್ಯಗಳೂ ಸರಿಯಾಗಿ ನಡೆಯುತ್ತಿವೆಯೆಂದು ಹೇಳುವುದು ಕಷ್ಟ. ಆಡಿಟ್ ಮಾಡತಕ್ಕವರು ಬರಿ ಕಾಗದಪತ್ರಗಳನ್ನು ಮಾತ್ರ ನೋಡುತ್ತಾರೆ. ಅದರಲ್ಲಿ ಅವರು ಬರಿ ಒಂದು ಜಮಾಖರ್ಚುಗಳ ರೆಸೀಟ್ಸ್‌ಗಳನ್ನು ಮಾತ್ರ ನೋಡುತ್ತಾರೆ. ಅಷ್ಟರಿಂದಲೇ ಎಲ್ಲವೂ ಸಮರ್ಪಕವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗೆ: ಒಬ್ಬ ಎ ಎಂಬ ವ್ಯಕ್ತಿಗೆ ಒಂದು ಸಾವಿರ ರೂಪಾಯಿಗಳನ್ನು ಖರ್ಚು ಹಾಕಿ ಆ ಹಣವನ್ನು ಬಿ ಎಂಬ ವ್ಯಕ್ತಿಗೆ ಕೊಟ್ಟಿದ್ದರೆ ಅದನ್ನು ಕಂಡುಹಿಡಿಯಲು ಆಡಿಟರಿಗೆ ಅಂಥ ದಿವ್ಯದೃಷ್ಟಿಯಿರುವುದಿಲ್ಲ. ಆದ್ದರಿಂದ ನೂರಕ್ಕೆ ನೂರು ಭಾಗ ಆಡಿಟ್ಟಾಗಿರತಕ್ಕ ಎಲ್ಲ ಸಂಸ್ಥೆಗಳಲ್ಲೂ ವ್ಯವಹಾರ ಸಮರ್ಪಕವಾಗಿರುತ್ತದೆಂದು ಹೇಳಲಿಕ್ಕೆ ಬರುವುದಿಲ್ಲ. ಅಂಥ ಹೇಳಿಕೆ ಕೊಡಲು ನಾನೂ ಕೂಡ ಸಿದ್ಧನಾಗಿಲ್ಲ. ಆದರೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಈ ಆಡಿಟ್ ನಡೆಯತಕ್ಕ ಕಾಲದಲ್ಲಿ ಮ್ಯಾನೇಜಿಂಗ್ ಬೋರ್ಡಿನ ಸದಸ್ಯರಿಗಾಗಲೀ ಅಥವಾ ಜನರಲ್‌ಬಾಡಿಯ ಸದಸ್ಯರಿಗಾಗಲೀ ಯಾವ ಸಂಘ ಆಡಿಟ್ಟಾಗುತ್ತದೋ ಆಗ ಅವರು ಈ ಆಡಿಟ್ ವ್ಯವಹಾರದ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಆದರೆ ಈ ಸಂಸ್ಥೆಗಳು ಯಾವಾಗ ಆಡಿಟ್ಟಾಗುತ್ತವೆಂಬ ಅಂಶ ಆಯಾಯ ಸಂಘದ ಸದಸ್ಯರುಗಳಿಗೆ ತಿಳಿಸಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುತ್ತದೆ. ಸಾಮಾನ್ಯವಾಗಿ ಆಡಿಟರು ಯಾವಾಗ ಬರುತ್ತಾರೆ ಎಂಬುದು ಅವರಿಗೆ ಗೊತ್ತಾಗೆ ಆಗುತ್ತೆ. ಆದರೂ ಈ ಬಗ್ಗೆ ಪ್ರಯತ್ನ ಒಂದು ತಿಳಿವಳಿಕೆ ಕೊಡತಕ್ಕ ಪ್ರಯತ್ನವನ್ನೂ ಮಾಡೋಣ. ಮುಖ್ಯವಾಗಿ ಇದು ಸಾರ್ವಜನಿಕರ ಹಣ. ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರು ಹೇಳಿದ ವಿಚಾರದಲ್ಲಿ ನಾನು ಒಂದು ಉದಾರಣೆಯನ್ನು ಕೊಡುವುದಾದರೆ: ನಮ್ಮ ಸಹಕಾರಿ ಸಂಸ್ಥೆಗಳು ಆಡಳಿತ ನಡೆಸತಕ್ಕ ಸಂಸ್ಥೆಗಳ ಬಂಡವಾಳಕ್ಕೂ ಸರ್ಕಾರ ಆಡಳಿತ ನಡೆಸುತ್ತಿರುವ ಕಡೆ ಇರತಕ್ಕ ಬಂಡವಾಳಕ್ಕೂ ಬಹಳ ವ್ಯತ್ಯಾಸವಿರುತ್ತದೆ.

5-30 P.M.

ರಿಜರ್ವ್ ಬ್ಯಾಂಕಿನಿಂದ ಬರತಕ್ಕ ಹಣ ಅಷ್ಟೇ ಅಲ್ಲ. ಕೆಲವೊಂದು ಸಹಕಾರ ಸಂಘಗಳ ಸ್ವಂತ ಆಸ್ತಿ ಅದಕ್ಕಿಂತ ಹೆಚ್ಚು. ಅದರ ಬುನಾದಿಯಿಂದ ಅಷ್ಟೇ ವ್ಯಾಪಕವಾಗಿ ಬೆಳೆದಿದೆ. ಆದ್ದರಿಂದ ಇದರಲ್ಲಿ ನಾವು ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡು ನೋಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರೆಲ್ಲರಿಗೂ ನಾನು ಬಹಳ ಕಳಕಳಿಯಿಂದ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಪ್ರತಿಯೊಂದು ಸಹಕಾರೀ ಸಂಘದ ವ್ಯವಹಾರ ನಿಶ್ಕಲ್ಮಶವಾಗಿರಬೇಕೆಂಬುದೇ ಸರ್ಕಾರದ ಉದ್ದೇಶ ಎಷ್ಟೇ ಪ್ರಭಾವವಿರಲಿ, ಯಾವ ವ್ಯಕ್ತಿಗೇ ಸಂಬಂಧಪಟ್ಟಿರಲಿ, ಯಾವ ರೀತಿಯ ಮುಲಾಜು ನೋಡದೆ ಅವರ ಮೇಲೆಯೂ ಯಾವ ಕ್ರಮವನ್ನೂ ಬೇಕಾದರೂ ತೆಗೆದುಕೊಳ್ಳುತ್ತೇವೆ. ಅದಕ್ಕಾಗಿಯೇ ಆಡಿಟ್ ಸರಿಯಾಗಿ ಆಗಬೇಕೆಂದು ಹೊಸದಾಗಿ ಸಿಬ್ಬಂದಿಯನ್ನು ನೇಮಕಮಾಡಿದ್ದೇವೆ.ಆಡಿಟ್ ಸೆಲ್ ಮುಖಾಂತರ 50 ಕೇಸುಗಳನ್ನು ಸರ್‌ಪ್ರೈಜ್ ವಿಜಿಟ್‌ನಲ್ಲಿ ತನಿಕೆ ಮಾಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿ ಎಷ್ಟೋ ಇಂತಹ ಸೊಸೈಟಿಗಳಿವೆ. ಇದು ಎಷ್ಟು ದೊಡ್ಡ ಸಮಸ್ಯೆ ಎಂಬುದು ಮಾನ್ಯ ಸದಸ್ಯರಿಗೆ ಮನವರಿಕೆಯಾಗಬೇಕಾಗಿದೆ. ಕಳೆದ ನಾಲ್ಕಾರು ವರ್ಷಗಳಿಂದ ಇದ್ದುದು, ಮತ್ತು ಅದಕ್ಕೂ ಹಿಂದೆ ಇದ್ದುದನ್ನು ಒಟ್ಟು ಸೇರಿಸಿದರೆ ನಮ್ಮ ಈ ಮೈಸೂರು ರಾಜ್ಯದಲ್ಲಿ ಸುಮಾರು 19 ಲಕ್ಷ ರೂಪಾಯಿಗಳು ಮಿಸ್ ಅಪ್ರೋಪ್ರಿಯೇಷನ್ನಿಗೆ ಒಳಗಾಗಿದೆ. ಆದರೆ ಈ 19 ಲಕ್ಷ ರೂಪಾಯಿಗಳು ದೊಡ್ಡ ಮೊತ್ತವೆಂದು ಕಂಡರೂ 120 ಕೋಟಿ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್‌ನ ಈ ಯಾವ ವ್ಯವಹಾರದಲ್ಲಿ ಚಲಾವಣೆ ಇದೆಯೋ ಅದರಲ್ಲಿ ಕೇವಲ 19 ಲಕ್ಷ ರೂಪಾಯಿಗಳು ಮಾತ್ರ ದುರುಪಯೋಗವಾಗಿದೆ. ಇದು ಬಹಳ ದೊಡ್ಡದು ಎಂದು ನಾನು ಒಪ್ಪುವುದಿಲ್ಲ. ಆದರೆ ಆ ರೀತಿಯೂ ಆಗಕೂಡದು ಎಂಬುದನ್ನು ನಾನು ಒಪ್ಪುತ್ತೇನೆ. ಮಾನ್ಯ ಸದಸ್ಯರು ಏನು ವಿವರಣೆ ಕೇಳಿದರೂ ನಾನು ಕೊಡಲು ಬಯಸುತ್ತೇನೆ. ಈಗ ಆಡಿಟ್ ಇಲಾಖೆಯನ್ನು ಬಲಪಡಿಸಲು ಪ್ರತ್ಯೇಕವಾಗಿ ಕೆಲವು ಅಧಿಕಾರಿಗಳನ್ನು ನೇಮಿಸಿದ್ದೇವೆ. ಆಡಿಟ್ ಸೆಲ್ ಬೇರೆ ಮಾಡಿದ್ದೇವೆ. ಅವರು ಅಲ್ಲಲ್ಲಿ ಟೂರ್ ಹೋಗಿ ಬರುತ್ತಿದ್ದಾರೆ. 24 ಘಂಟೆಗಳಲ್ಲಿ ಹೋಗಿ ತಪ್ಪಿತಸ್ಥರುಗಳನ್ನೆಲ್ಲಾ ಹಿಡಿದಿದ್ದಾರೆ. ಎಷ್ಟೋ ಸಾರಿ ಕಾಗದಪತ್ರಗಳನ್ನೇ ತೆಗೆದುಕೊಂಡು ಹೋಗಿಬಿಟ್ಟಿರುತ್ತಾರೆ. ಸೊಸೈಟಿಗಳಲ್ಲಿ ಯಾರೂ ಇರುವುದಿಲ್ಲ. ಕಾಯಿದೆ ಪ್ರಕಾರ ಸಾಮಾನ್ಯವಾಗಿ ಒಂದು ಸೊಸೈಟಿ ನಿರ್ಮಾಣವಾಗುತ್ತದೆನ್ನೋಣ. ಒಂದು ವೇಳೆ ಯಾವುದಾದರೂ ಒಂದು ಉದ್ದೇಶದಿಂದಲೇ ಅಲ್ಲಿಯ ಜನರು ಸಹಕಾರ ಸಂಘಗಳನ್ನು

ಸ್ಥಾಪನೆಮಾಡುತ್ತೇವೆಂದು ಬಂದರೆ ನಾವು ಆ ಬಗ್ಗೆ ನಿರಾಕರಿಸುವುದಕ್ಕಾಗುವುದಿಲ್ಲ. ಆ ಒಂದು ಒಳ್ಳೆಯ ಉದ್ದೇಶ ಮಾತ್ರ ಇದ್ದರೆ ಪ್ರತಿಯೊಂದು ಸಹಕಾರ ಸಂಘವೂ ಸ್ಥಾಪನೆಯಾಗುತ್ತದೆ. ಅದರಲ್ಲಿ ಸೇರಿರತಕ್ಕ ಸದಸ್ಯರು ಪ್ರಾಮಾಣಿಕರೇ, ಅಪ್ರಾಮಾಣಿಕರೇ, ಸತ್ಯವಂತರೇ, ಅಸತ್ಯವಂತರೇ, ನೀತಿವಂತರೇ, ಅನೀತಿವಂತರೇ, ಎಂಬುದನ್ನು ಕಂಡುಹಿಡಿಯುವುದು ಬಲು ಕಷ್ಟ. ಪ್ರತಿಯೊಂದು ಸಹಕಾರ ಸಂಘದಲ್ಲೂ ಒಳ್ಳೆಯವರು, ಕೆಟ್ಟವರು, ನೀತಿವಂತರೂ, ಅನೀತಿವಂತರೂ, ಪ್ರಾಮಾಣಿಕರು ಅಪ್ರಾಮಾಣಿಕರು — ಹೀಗೆ ಎಲ್ಲರೂ ಇರುತ್ತಾರೆ. ನಮ್ಮ ಸಮಾಜದಲ್ಲಿ ಏನೇನು ಲೋಪದೋಷಗಳು ಇರುತ್ತವೋ ಅವೆಲ್ಲಾ ಈ ಸಹಕಾರ ಸಂಘಗಳಲ್ಲಿ ಬರುತ್ತವೆ. ಪಂಚಾಯುತಿಗಳಲ್ಲೂ ಬರುತ್ತವೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).-- ಸಮಾಜದಲ್ಲಿರತಕ್ಕ ದೋಷಗಳನ್ನು ಪ್ರತಿಬಿಂಬಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌದು. There is no escape. ಅದಕ್ಕಾಗಿ ನಾನು ಮಾನ್ಯ ಸದಸ್ಯರಿಗೆ ಇಷ್ಟು ಹೇಳಬಯಸುತ್ತೇನೆ. ಆಡಿಟ್ಟನ್ನು ಎಷ್ಟು ನಿಷ್ಠೆಯಿಂದ ಮಾಡಬೇಕೋ ತನಿಖೆಯನ್ನೂ ಸಹ ಅಷ್ಟೆ ನಿಷ್ಠೆಯಿಂದ ಮಾಡಬೇಕು. ಯಾವುದೋ ಒಂದು ಸಂದರ್ಭದಲ್ಲಿ ಇಂತಹ ಸಂಘದಲ್ಲಿ, ಇಂತಹ ಸಹಕಾರೀ ಸೊಸೈಟಿಯಲ್ಲಿ ಇಂಥಾದ್ದು ನಡೆದಿದೆ ಎಂಬುದಾಗಿ ಕಂಡು ಬಂದರೆ ಅದು ಆ ಕೂಡಲೇ ತನಿಕೆಯಾಗಬೇಕು. ಅಧಿಕಾರಿಗಳು ಒಂದು ವೇಳೆ ಸರಿಯಾಗಿ ಅದನ್ನು ತನಿಖೆಮಾಡಲಿಲ್ಲವೆಂದರೆ ಅವರನ್ನು ತರಾಟೆಗೆ ತೆಗೆದುಕೊಂಡು ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದನ್ನು ನಾನು ಒಪ್ಪುತ್ತೇನೆ. ಈ ವಿಚಾರದಲ್ಲಿ ಸ್ವಲ್ಪಮಟ್ಟಿಗೂ ಕೂಡ ಯಾರ ಪ್ರಭಾವಕ್ಕೂ ಒಳಗಾಗುವುದಿಲ್ಲ. ವ್ಯಕ್ತಿಗಳು ಯಾವ ಪಕ್ಷಕ್ಕೇ ಸೇರಿರಲಿ, ಯಾವ ಕೋಮಿನವರೇ ಆಗಲೀ, ಯಾವ ಜಾತಿಯವರೇ ಆಗಿರಲಿ, ಯಾವ ಧರ್ಮದವರೇ ಆಗಿರಲಿ, ಯಾವ ಒಂದು ಭೇದ ಭಾವವನ್ನು ಎಣಿಸದೆ, ಯಾವ ಒಂದು ಪ್ರಭಾವಕ್ಕೊಳಗಾಗದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಸಾಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಜತ್ತಿಯವರು ಆ 19 ಸಾವಿರ ರೂಪಾಯಿಗಳು shortage ಆದುದನ್ನು ಖಾದಿಗೆ ಕೊಟ್ಟಿದ್ದೇವೆಂದು ಹೇಳಿದರು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಕೆಲವು ಆರೋಪಣೆಗಳನ್ನು ಮಾಡಿದರೆ ಅದನ್ನು ತನಿಖೆ ಮಾಡಬಹುದು. ಅವರು ಪುನಃ ಪುನಃ ಅದನ್ನೇ ಹೇಳುತ್ತಿದ್ದಾರೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿಯೂ ಮತ್ತು ಬಡ್ಜೆಟ್‌ಮೇಲೆ ಮಾತನಾಡುವಾಗಲೂ ಅದನ್ನೇ ಹೇಳಿದ್ದಾರೆ. ಅದರಲ್ಲಿ ಏನಾದರೂ ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳಿದ್ದರೆ ನನ್ನ ಕೈಲಿ ಕೊಡಬೇಕು. ಅದರಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ. ನಿರ್ದಿಷ್ಟವಾಗಿ ಕೆಲವೊಂದು ಮಾನ್ಯ ಸದಸ್ಯರು ಆರೋಪಣೆ ಮಾಡಿದರ ಆ ವಿಚಾರನಲ್ಲಿ ಸಂಕ್ಷಿಪ್ತವಾಗಿ ಉತ್ತರವನ್ನು ಕೊಡಬಯಸುತ್ತೇನೆ ಶ್ರೀಮಾನ್ ಲಕ್ಕಪ್ಪನವರು ಮಾತನಾಡುತ್ತಾ ಈ ಸಹಕಾರ ಸಂಘಗಳು ಭೋಗ್ಯ ವಸ್ತುಗಳು ಇದ್ದಹಾಗೆ ಎಂದು ಹೇಳಿದರು. ಆದರೆ ಈಗ ಅವರು ಇಲ್ಲಿಲ್ಲ. ನಮಗೆ ಇರತಕ್ಕ ಸಂಕಟವಿದೇ, ಅವರು ಹೇಳುವುದನ್ನು ಕೇಳುವುದಕ್ಕೆ ನಾವು ಇಲ್ಲಿ ಇರಬೇಕು, ಆದರೆ ನಾವು ಅವರು ಹೇಳಿದ್ದಕ್ಕೆಲ್ಲಾ ಉತ್ತರ ಹೇಳುವಾಗ ಅವರು ಇರುವುದಿಲ್ಲ. ಭೋಗ್ಯ ವಸ್ತುಗಳ ವಿಚಾರ ನನಗೆ ಗೊತ್ತಾಗಲಿಲ್ಲ. ಅವರು ಈಗ ಇಲ್ಲದಿದ್ದರೆ ಅವರನ್ನೇ ಕೇಳುತ್ತಿದ್ದೆ. ಇತರ ಸದಸ್ಯರು ಅವರಿಗೆ ಈ ವಿಚಾರವನ್ನು ತಿಳಿಸಬೇಕು. ಒಂದು ಸಹಕಾರ ಸಂಘವನ್ನು ಆ ಮಾನ್ಯ ಸದಸ್ಯರೇ ನಡೆಸಲಿ. ನಾನು ನೋಡಬೇಕು. ಯಾವುದಾದರೂ ಹೊಸದಾಗಿ ಸಹಕಾರ ಸಂಘವನ್ನು ಕಟ್ಟಿದರೆ ಅದಕ್ಕೆ ಯಾವಾಗಲೂ ಬಾಗಿಲು ತೆಗೆದಿದೆ. ಸಹಕಾರ ಸಂಘಗಳ ಸ್ಥಾಪನೆಬಗ್ಗೆ ಯಾರಿಗೂ ಬಾಗಿಲು ಮುಚ್ಚಿಲ್ಲ. ಆದರಲ್ಲೇನಾದರೂ ದೋಷಗಳು ಇದ್ದರೆ ತೆಗೆದು ಹಾಕುತ್ತೇವೆ. ಒಬ್ಬ ಆಫೀಸರು 20 ವರ್ಷಗಳಿಂದ ಇದ್ದಾರೆ. ಮಾನ್ಯ ಸದಸ್ಯರು ಸ್ವಲ್ಪಮಟ್ಟಿಗೆ ವಿಚಾರ ಮಾಡಬೇಕು. 14ನೆ ಆಗಸ್ಟ್ 1952ರಲ್ಲಿ ಸರ್ಕಾರೀ ನೌಕರಿಗೆ ಅವರು ಬಂದಿದ್ದಾರೆ. ಅವರು 8ನೇ ಜೂನ್ 1956ರ ವರೆಗೆ ತುಮಕೂರಿನ ಕೊರಟಗೆರೆ ತಾಲ್ಲೂಕಿನಲ್ಲಿದ್ದರು. Official Liquidator ಆಗಿದ್ದರು. ಮದ್ರಾಸಿಗೆ ಹೋಗಿ ಅಲ್ಲಿ ಶಿಕ್ಷಣವನ್ನು 1ನೇ ಫೆಬ್ರವರಿ 62ರಿಂದ 7ನೇ ಡಿಸೆಂಬರ್ 62ರವರೆಗೆ ಪಡೆದಮೇಲೆ ಅವರನ್ನು ಆಮೇಲೆ ಚಿಕ್ಕನಾಯಕನಹಳ್ಳಿಗೆ ಹಾಕಿದರು. ಇಲ್ಲಿ ಅವರಮೇಲೆ ಸುಮ್ಮಸುಮ್ಮನೆ sweeping remarks ಮಾಡಿದರು. ಅದು ತಪ್ಪು. ಆದ್ದರಿಂದ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಯಾರನ್ನೇ ಹಾಕಿದರೂ ಅವರು ತಮ್ಮ ಅಧಿಕಾರವನ್ನು

(ಶ್ರೀ ರಾಮಕೃಷ್ಣ ಹೆಗ್ಗಡೆ)

ಚಲಾಯಿಸಿ ದುರುಪಯೋಗ ಮಾಡುವುದಕ್ಕೆ ಯಾವರೀತಿಯಲ್ಲೂ ಅವಕಾಶವನ್ನು ಕೊಡುವುದಿಲ್ಲ. ಸರ್ಕಾರದಿಂದ ಯಾರನ್ನೂ ಸರಿಯಾಗಿ ತಿಳಿಯದೆ ನಾಮಕರಣ ಸದಸ್ಯರಾಗಿ ಮಾಡುವುದಿಲ್ಲ. ಏಕೆಂದರೆ ಒಳ್ಳೆಯವರು ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಅವರಲ್ಲಿ ಚೆನ್ನಾಗಿ ಕೆಲಸಮಾಡಲಿ, ಚೆನ್ನಾಗಿ ಕೆಲಸ ಮಾಡದೇಇರಲಿ. ಅವರವರ ಸಂಘಕ್ಕೆ ಅನುಗುಣವಾಗಿ ಸದಸ್ಯರ ಸಂಖ್ಯೆ ಇರಬೇಕು. ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರನ್ನು ಸರ್ಕಾರದವರು ನಾಮಿನೇಷನ್ ಮಾಡುವುದಿಲ್ಲ. ಮಾನ್ಯ ಸದಸ್ಯರು ಆರೀತಿ ಆರೋಪಣೆ ಮಾಡಿದ್ದನ್ನು ನಾನು ಒಪ್ಪುವುದಿಲ್ಲ. ಮೂರು ಲಕ್ಷ ರೂಪಾಯಿಗಳು ಆ ಸಂಘದಲ್ಲಿ ನಷ್ಟವಾಗಿದೆಯೆಂದು ಹೇಳಿದರು. ಹೋದವರ್ಷ ಮಾರ್ಕೆಟಿಂಗ್ ಸೊಸೈಟಿಯವರು ರೈತರಿಗೆ ಪಡಿತರವನ್ನು ಖರೀದಿ ಮಾಡಿದರು. ಹೋದವರ್ಷ ಮಾಡಿದ್ದು ಸಾಕಾಗಲಿಲ್ಲವೆಂದು ಈಸಾರಿ ಡಿಮ್ಯಾಂಡ್ ಜಾಸ್ತಿ ಬಂತು. ಕೋಲಾರದಿಂದ ಬೇರೆಕಡೆಯಿಂದ ತಂದರೂ ಇನ್ನೂ ಖರೀದಿ ಮಾಡಬೇಕೆಂದು ಹೆಚ್ಚು ತರಿಸಿಕೊಂಡು ಈ ವರ್ಷ 3 ಲಕ್ಷ 40 ಸಾವಿರ ರೂಪಾಯಿಗಳಷ್ಟು ಪದಾರ್ಥ ಗಳನ್ನು ಶೇಖರಣೆ ಮಾಡಿದರು. ಅದರಲ್ಲಿ 2 ಲಕ್ಷ 30 ಸಾವಿರ ರೂಪಾಯಿಗಳಷ್ಟು ಮಾರಾಟವಾಗಿ 1 ಲಕ್ಷ 10 ಸಾವಿರ ರೂಪಾಯಿಗಳಷ್ಟು ದಾಸ್ತಾನು ನಷ್ಟವಾಗಿದೆ. ಏಕೆಂದರೆ ಖಾಸಗೀ ವರ್ತಕರು ಪ್ರೈಪೋಟಿಮಾಡಿ ಯಾವುದಾದರೂ ರೀತಿಯಿಂದ ಹೊಡೆದುಹಾಕಬೇಕೆಂಬ ದುಷ್ಟವಿಚಾರದಿಂದ ಆ ದಾಸ್ತಾನನ್ನು ಕಡಿಮೆಗೆ ಮಾರಾಟ ಮಾಡುವುದಕ್ಕೆ ಇಳಿದರು. ಅದರಲ್ಲಿ ಒಂದು ಲಕ್ಷ 30 ಸಾವಿರ ಚಿಲ್ಲರೆ ನಷ್ಟವಾದರೂ 95 ಸಾವಿರ ರೂಪಾಯಿಗಳನ್ನು ರಿಬೇಟ್‌ಮೂಲಕ ಸಪ್ಲೈಯರ್ಸ್‌ನಿಂದ ಬರುತ್ತದೆ, ಅಂದಮೇಲೆ ಕೇವಲ 35 ಸಾವಿರ ರೂಪಾಯಿಗಳುಮಾತ್ರ ನಷ್ಟವಾಗಿದೆ. 3 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ಶ್ರೀಮಾನ್ ಲಕ್ಕಪ್ಪನವರು ಹೇಳಿದರು. ಅದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಇನ್ನು ರಿಕವರಿ ಪೊಸಿಷನ್ bad ಆಗಿದೆಯೆಂದು ಹೇಳಿದರು. ಅದಕ್ಕಾಗಲೇ ಉತ್ತರ ಕೊಟ್ಟಿದ್ದೇನೆ. ನಾವು ಇಲ್ಲಿ ಮಾತನಾಡುವಾಗ ರಿಕವರಿ ಆಗಲಿಲ್ಲ. ಸುಮಾರು 45-46 ಒಳ್ಳೆಯ ಪೊಸಿಷನ್ ಅಲ್ಲ. ಕೆಟ್ಟ ಪೊಸಿಷನ್ನಿನಲ್ಲಿರುತ್ತದೆ. ಅವರ ಹತ್ತಿರ ನಿಜವಾಗಿ ಕೊಡಲಿಕ್ಕೆ ಹಣ ಇರುವುದಿಲ್ಲ. ಸಾಧ್ಯವಾದಮಟ್ಟಿಗೂ ಅವರು ಕೊಡತಕ್ಕ ಹಣವನ್ನು ಮಧ್ಯವರ್ತಿ ಸಾಲದ ರೂಪವಾಗಿ ಪರಿವರ್ತನೆ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಈ ಕಾನೂನು ಇಲ್ಲವೋ ಅಂತಹ ಕಡೆಗಳಲ್ಲಿ ಸ್ಟ್ರಿಕ್ಟಾಗಿ ಇದನ್ನು enforce ಮಾಡುತ್ತಿದ್ದೇವೆ.

ಇನ್ನು ಒಬ್ಬರು ಮಾನ್ಯ ಸದಸ್ಯರು ಗೂಳೂರಿಗೆ 80 ಜಿಂಕ್ ಷೀಟುಗಳನ್ನು ತೆಗೆದುಕೊಂಡು ಹೋಗಿ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಾಟಮಾಡಿದರು ಎಂದು ಹೇಳಿದರು. ಹಿಂದೆ ಬೆಂಗಳೂರಿನಲ್ಲಿ ಅಲ್ ಇಂಡಿಯಾ ಕಾಂಗ್ರೆಸ್ ಅಧಿವೇಶನ ನಡೆದಾಗ ಆ ಅಧಿವೇಶನದ ಪೆಂಡಾಲು ವಗೈರೆಗಳಿಗೆ ಜಿಂಕ್‌ಷೀಟುಗಳನ್ನು ತರಿಸಿದ್ದರು. ಆ ಅಧಿವೇಶನ ಮುಗಿದಮೇಲೆ ಅದಕ್ಕೆ ಸಂಬಂಧಪಟ್ಟವರು ಸರ್ಕಾರದವರ ಪರವಾನಿಗೆಯನ್ನು ಪಡೆದು ಕೆಲವರಿಗೆ ಆ ಜಿಂಕ್ ಷೀಟುಗಳನ್ನು ಮಾರಾಟ ಮಾಡಿದ್ದರು. ಆ ಸಂದರ್ಭದಲ್ಲಿ ಈಗೂಳೂರು ಸೊಸೈಟಿಯವರು ಯಾವುದೋ ಒಂದು ಕಟ್ಟಡವನ್ನು ಕಟ್ಟುವ ಉದ್ದೇಶಕ್ಕಾಗಿ 80 ಜಿಂಕ್ ಷೀಟುಗಳನ್ನು ತೆಗೆದುಕೊಂಡು ಹೋಗಿದ್ದರು. ಅನಂತರ ಅವರು ಕಟ್ಟಿಸಬೇಕೆಂದಿದ್ದ ಕಟ್ಟಡದ ಡಿಜೈನ್‌ಅನ್ನು ಬದಲಾವಣೆ ಮಾಡಿದರು. ಆಗ ಆ ಜಿಂಕ್ ಷೀಟುಗಳು ಉಪಯೋಗವಾಗಲಿಲ್ಲ. ಅದಕ್ಕಾಗಿ ಅವರು ಸಂಬಂಧಪಟ್ಟ ಅಧಿಕಾರಿಗಳಿಂದ ಪರವಾನಿಗೆ ಯನ್ನು ಪಡೆದು ಬೇರೆ ಯಾರಿಗೋ ವ್ಯವಸಾಯ ಉದ್ದೇಶಕ್ಕೋಸ್ಕರ ಮಾರಾಟಮಾಡಿದ್ದಾರೆ.

ಇನ್ನು ಒಬ್ಬರು ಮಾನ್ಯ ಸದಸ್ಯರು ತುರುವೇಕೆರೆಯಲ್ಲಿರುವ ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕಿನಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂದು ಹೇಳಿದರು. ಅದರಲ್ಲಿ 329 ರೂಪಾಯಿ 18 ನಯಾಪೈಸೆ ಮಿಸ್ ಅಪ್ರೋಪ್ರಿಯೇಷನ್ ಆಗಿದ್ದು ನಿಜ. ಅದು ಈಗಾಗಲೇ ರೆಕವರ್ ಆಗಿದೆ. ಅದಕ್ಕೆ ಯಾರು ಜವಾಬ್ದಾರರೋ ಅವರಮೇಲೆ ಪೋಲೀಸ್ ಕಂಪ್ಲೇಂಟ್ ಆಗಿದೆ. ಅದರಬಗ್ಗೆ ಕೇಸು ನಡೆಯುತ್ತಿದೆ.

ಆಮೇಲೆ ಬೆಳಗುಂಬ ಸೊಸೈಟಿಯಲ್ಲಿ ಬಹಳ ದಿವಸಗಳಿಂದ ಆಡಿಟ್ ಆಗಿಲ್ಲ ಎಂದು ಶ್ರೀಮಾನ್ ರಂಗೇಗೌಡರು ಹೇಳಿದರು. ಅದು ನಿಜ. 1956-57ನೇ ಇಸವಿಯಲ್ಲಿ ಆ ಸೊಸೈಟಿಯ ಆಡಿಟ್ ಆಗಿದೆ ಆ ಮೇಲೆ ಅದರ ಆಡಿಟ್ ಆಗಿಲ್ಲ. ಆಡಿಟ್ ಮಾಡತಕ್ಕವರು ಅಲ್ಲಿಗೆ ಹೋದಾಗ ಅವರು ಆ ಸೊಸೈಟಿಯ ಲೆಕ್ಕಪತ್ರಗಳನ್ನು ಕೊಟ್ಟಿಲ್ಲ. ಪುನಃ ಪುನಃ ಪ್ರಯತ್ನಮಾಡಿದರೂ ಸಹ ಆ ಸೊಸೈಟಿಯ ಆಡಿಟ್ ಆಗಿಲ್ಲ. ಅದಕ್ಕೋಸ್ಕರ ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

ಇನ್ನು ಯಲಬುರ್ಗಿಯ ವಿಚಾರವಾಗಿ ಶ್ರೀಮಾನ್ ವೀರಭದ್ರಪ್ಪನವರು ಕೆಲವು ವಿಚಾರಗಳನ್ನು ಹೇಳಿದರು. ಯಲಬುರ್ಗಿ ತಾಲ್ಲೂಕಿನಲ್ಲಿ ಒಂದು ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕ್ ಇದೆ. ಅದಕ್ಕೆ ಡೈರೆಕ್ಟರು ಕೆಲವರು ಷೇರ್ ಅಮೌಂಟನ್ನು ಕಲೆಕ್ಟ್‌ಮಾಡಿ ಅದನ್ನು ಬ್ಯಾಂಕಿಗೆ ಕೊಟ್ಟಿಲ್ಲ ಎಂದು

ಹೇಳಿದರು. ಅದರಲ್ಲಿ ವೀರಪ್ಪ ಎನ್ನುವವರು 534 ರೂಪಾಯಿ 24 ನಯಾಪೈಸೆ ಷೇರ್ ಅಮೌಂಟ್ ಕಲೆಕ್ಟ್ ಮಾಡಿದ್ದಾರೆ; ಆಮೇಲೆ ತಿಮ್ಮಾರೆಡ್ಡಿ ಎನ್ನುವವರು 11 ರೂಪಾಯಿ 21 ನಯಾಪೈಸೆ ಷೇರ್ ಅಮೌಂಟನ್ನು ಕಲೆಕ್ಟ್ ಮಾಡಿದ್ದಾರೆ. ಅವರು ಆ ಹಣವನ್ನು ಕೊಟ್ಟಿಲ್ಲ. ಅವರಮೇಲೆ ಆ ಬಗ್ಗೆ ಕೇಸು ಹಾಕಿದ್ದೇವೆ. ಅವರಿಂದ ಆ ಹಣವನ್ನು ವಸೂಲು ಮಾಡಬೇಕಾಗುತ್ತದೆ. ಆ ಮೇಲೆ ನಿರ್ಗುಣ ಗೌಡ ಎನ್ನುವವರು 129 ರೂಪಾಯಿ 20 ನಯಾಪೈಸೆ ಕೊಟ್ಟಿಲ್ಲ. ಆ ಹಣವನ್ನು ಅವರಿಂದ ವಸೂಲುಮಾಡುವುದಕ್ಕೆ ಅವರಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನು ತೆಗೆದುಕೊಂಡಿದೆ.

ಇನ್ನು ಆಡಿಟ್ ಆಗದೆ ಇರುವ ಸಹಕಾರ ಸಂಘಗಳ ವಿವರ ಈ ರೀತಿ ಇದೆ. ಒಂದು ವರ್ಷದಿಂದ ಆಡಿಟ್ ಆಗದೆ ಇರುವ ಸೊಸೈಟಿಗಳು 149, ಎರಡುವರ್ಷಗಳಿಂದ ಆಡಿಟ್ ಆಗದೇ ಇರುವ ಸೊಸೈಟಿಗಳು 48, 3 ವರ್ಷಗಳಿಗಿಂತ ಹೆಚ್ಚು ಕಾಲ ಆಡಿಟ್ ಆಗದೆ ಇರತಕ್ಕ ಸೊಸೈಟಿ ಗಳು 121. ಈ ಪೈಕಿ ಕೆಲವು ಸೊಸೈಟಿಗಳವರು ಆಡಿಟ್ ಮಾಡುವುದಕ್ಕೆ ಲೆಕ್ಕಪತ್ರಗಳನ್ನು ಕೊಡದೆ ತಪ್ಪಿಸಿಕೊಂಡಿದ್ದಾರೆ. ಅವರು ಎಲ್ಲಿಯೇ ಇರಲಿ ಕೊನೆಗೆ ಅವರು ಪಾತಾಳದಲ್ಲಿದ್ದರೂ ಅವರನ್ನು ಹುಡುಕಿಕೊಂಡುಬಂದು ಆ ಸೊಸೈಟಿಗಳ ಆಡಿಟ್‌ಅನ್ನು ಮಾಡುತ್ತೇವೆ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಇನ್ನು ಕಳೆದ ವರ್ಷ ಈ ಜೇಡಿಕೆಗಳ ಮೇಲೆ ನಡೆದ ದರ್ಜೆಗೆ ಉತ್ತರವನ್ನು ಕೊಡುವಾಗ ನಾನು ಈ ಮಾನ್ಯ ಸಭೆಯ ಸದಸ್ಯರಿಗೆ ಎರಡು ಆಶ್ವಾಸನೆಗಳನ್ನು ಕೊಟ್ಟಿದ್ದೆ. ಅದರಬಗ್ಗೆ ಮಾನ್ಯ ಸದಸ್ಯರುಗಳು ಯಾರೂ ಒಂದು ವಿಚಾರವನ್ನೂ ಹೇಳಲಿಲ್ಲ. ಬಹುಶಃ ಅವರು ಮರೆತಂತೆ ಕಾಣುತ್ತದೆ. ಪ್ರೈಜ್‌ಫ್ಲಕ್ಚುಯೇಷನ್ ಫಂಡಿನಲ್ಲಿ ಮಾರ್ಕೆಟಿಂಗ್ ಸೊಸೈಟಿಗಳಿಗೆ ಹಣವನ್ನು ಕೊಟ್ಟಿದೆ. ರಾಜ್ಯಪಾಲರ ಭಾಷಣದಲ್ಲಿ ಅದರ ಉಲ್ಲೇಖ ಇದೆ. ಆ ವಿಚಾರದಲ್ಲಿ ಒಬ್ಬ ಸದಸ್ಯರೂ ಒಂದು ಮಾತನ್ನು ಹೇಳಲಿಲ್ಲ. ಪ್ರೈಜ್ ಫ್ಲಕ್ಚುಯೇಷನ್ ಫಂಡನ್ನು ಮಾಡುವುದು, ಒಂದನೆಯದು ಮತ್ತು ಎರಡನೆಯದು ಅಗ್ರಿಕಲ್‌ಚರಲ್ ಕ್ರಾಪ್ ಸ್ಟೆಬಿಲೈಜೇಷನ್ ಫಂಡನ್ನು ಮಾಡುವುದು. ಈ ಎರಡು ಕಾರ್ಯಗಳನ್ನೂ ಮಾಡುವುದಕ್ಕೆ ಸರ್ಕಾರದವರು ನಿರ್ಣಯವನ್ನು ತೆಗೆದುಕೊಂಡಿದ್ದಾರೆಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಹೋದವರ್ಷ ಬತ್ತದ ಬೆಲೆ ಕಡಿಮೆ ಆಯಿತು. ಇದರಿಂದ ರೈತರಿಗೆ ನಿರುತ್ಸಾಹವಾಗುತ್ತದೆ. ಅವರು ಬೆಳೆದ ಬೆಳೆಗೆ ಸರಿಯಾದ ಬೆಲೆ ದೊರೆಯುವು ದಿಲ್ಲ ಎಂದು ಮಾರ್ಕೆಟಿಂಗ್ ಸೊಸೈಟಿಗಳಿಗೆ ಬತ್ತವನ್ನು ಕೊಳ್ಳುವುದಕ್ಕಾಗಿ ಸರ್ಕಾರದವರು ಹಣ ಸಹಾಯವನ್ನು ಮಾಡಿದರು. ಆಗ ಮಾರ್ಕೆಟಿಂಗ್ ಸೊಸೈಟಿಯವರು ಸುಮಾರು ಎರಡು ಲಕ್ಷ ಪಲ್ಲ ಬತ್ತವನ್ನು ಖರೀದಿ ಮಾಡಿದರು. ಇದರಿಂದ ರೈತರಿಗೆ ವಿಶೇಷವಾದ ಲಾಭ ಬಂತು. ಮಾರ್ಕೆಟಿಂಗ್ ಸೊಸೈಟಿಯವರು ಓಪನ್ ಮಾರ್ಕೆಟ್‌ನಲ್ಲಿ ಬತ್ತವನ್ನು ಖರೀದಿಮಾಡಿದರು. ನಾವು ಅವರಿಗೆ ಒಂದು ಸಾವಿರ ರೂಪಾಯಿಗಳಿಂದ 10 ಸಾವಿರ ರೂಪಾಯಿಗಳವರೆಗೆ ಷೇರ್ ಕ್ಯಾಪಿಟಲ್ ಅನ್ನು ಕೊಟ್ಟಿದ್ದೇವೆ. ಈ ಸಂಬಂಧದಲ್ಲಿ ಅವರಿಗೆ ಏನಾದರೂ ಅಡೀಷನಲ್ ಎಕ್ಸ್‌ಪೆಂಡಿಚರ್ ಬಂದರೆ ಅದರಲ್ಲಿ 50 ಪರ್ಸೆಂಟ್ ಎಕ್ಸ್‌ಪೆಂಡಿಚರನ್ನು ನಾವು ವಹಿಸಿಕೊಳ್ಳುತ್ತೇವೆಂದು ಹೇಳಿದ್ದೇವೆ. ಆ ವ್ಯವಹಾರದಲ್ಲಿ ಒಂದುವೇಳೆ ಅವರಿಗೇನಾದರೂ ಹಾನಿಯಾದರೆ, ನಷ್ಟವಾದರೆ ಅವರಿಗೆ ಒಂದು ಪಲ್ಲಕ್ಕೆ ಎರಡು ರೂಪಾಯಿಗಳಂತೆ ಖರ್ಚನ್ನು ಸರ್ಕಾರದವರು ವಹಿಸಿಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ. ಮತ್ತು ಮ್ಯಾನೇಜೀರಿಯಲ್ ಸಬ್ಸಿಡಿಯನ್ನು ಸಹ ಅವರಿಗೆ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಈ ವಿಚಾರವನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಈ ವ್ಯವಹಾರದಿಂದ ಅನೇಕರಿಗೆ ಲಾಭ ಉಂಟಾಗಿದೆ. ಮತ್ತು ಮಾರ್ಕೆಟಿಂಗ್ ಸೊಸೈಟಿಯವರಿಗೆ ಇದರಿಂದ ಸುಮಾರು ಎರಡೂವರೆ ಲಕ್ಷ ರೂಪಾಯಿಗಳ ಲಾಭಬಂದಿದೆ. ಮತ್ತು ಈ ಲಾಭದಲ್ಲಿ ಮಾರ್ಕೆಟಿಂಗ್ ಸೊಸೈಟಿಯವರು ಯಾವ ರೈತನಿಂದ ಬತ್ತವನ್ನು ಕೊಂಡುಕೊಂಡರೋ ಆ ರೈತನಿಗೂ ಕೂಡ ರಿಬೇಟ್‌ಅನ್ನು ಕೊಟ್ಟಿದ್ದಾರೆ. ಮತ್ತು ಅವರು ಬೇರೆ ಬೇರೆ ಕನ್‌ಸೂಮರ್ ಸೊಸೈಟಿಗಳವರಿಗೆ ಕಡಿಮೆ ದರದಲ್ಲಿ ಬತ್ತವನ್ನು ಕೊಟ್ಟಿದ್ದಾರೆ. ಹೋಲ್ಡಿಂಗ್ ಆಫ್ ಪ್ರೈಜ್ ವಿಷಯದಲ್ಲಿ ಯಾವ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇ ವೆಂದು ಹೇಳಿದ್ದೆವೋ ಮತ್ತು ಮಾನ್ಯ ಸದಸ್ಯರಿಗೆ ಏನು ಭರವಸೆಯನ್ನು ಕೊಟ್ಟಿದ್ದೆನೋ ಅದರಂತೆ ನಾವು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಅಗ್ರಿಕಲ್‌ಚರಲ್ ಕ್ರಾಪ್ ಸ್ಟೆಬಿಲೈಜೇಷನ್ ಫಂಡನ್ನು ಮಾಡಬೇಕೆಂದು ಈಗಾಗಲೇ ನಾವು ತೀರ್ಮಾನ ಮಾಡಿದ್ದೇವೆ. ಮತ್ತು ಅದಕ್ಕಾಗಿ ಸಂಬಂಧಪಟ್ಟ ರೂಲ್ಸನ್ನು ನಾವು ಈಗಾಗಲೇ ಸಿದ್ಧಮಾಡಿದ್ದೇವೆ. ಈ ಎರಡು ವಿಷಯಗಳನ್ನು ನಾನು ಮಾನ್ಯ ಸದಸ್ಯರ ಅವಗಾಹನೆಗೆ ತರಲಿಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಕಾರ್ಮಿಕ ಸೊಸೈಟಿಗಳು, ಜಿಲ್ಲಾ ಕನ್‌ಸ್ಯೂಮರ್ ಸೊಸೈಟಿಗಳ ವಿಚಾರದಲ್ಲಿ, ಸಹಕಾರಿ ಕ್ಷೇತ್ರದ ಇತರ ವಿಚಾರಗಳಲ್ಲಿ ನಾಕಷ್ಟು ಹೇಳಬೇಕಾದ್ದಿತ್ತು. ಸಮಯ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಹೆಚ್ಚು ಇಲ್ಲದ್ದರಿಂದ ಸಹಕಾರಿ ವ್ಯವಸಾಯದ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳೆಲ್ಲ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕೆಲವು ಕಡೆಗೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಕೆಲವು ಕಡೆ ಅಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಮಾನ್ಯ ಸದಸ್ಯರು ಇಷ್ಟಪಡುವುದಾದರೆ ಈ ಅಧಿವೇಶನ ಮುಕ್ತಾಯವಾದ ಮೇಲೆ ಅವರನ್ನು ಟೂರ್ ಕರೆದುಕೊಂಡು ಹೋಗಿ ತೋರಿಸುವುದಕ್ಕೆ ಸಿದ್ಧವಾಗಿದ್ದೇನೆ. ಕೋ-ಆಪರೇಟಿವ್ ಫಾರ್ಮಿಂಗ್ ಯಾವ ರೀತಿ ಕೆಲಸ ಮಾಡುತ್ತಿದೆ ಎಂದು ನೋಡುವಂಥ ಅಪೇಕ್ಷೆ ಅವರಿಗೆ ಇದ್ದರೆ ನಾನು ಸರ್ಕಾರದ ವೆಚ್ಚದಿಂದ ಅವರಿಗೆ ತೋರಿಸಿಕೊಂಡು ಬರುವುದಕ್ಕೆ ಸಿದ್ಧನಾಗಿದ್ದೇನೆ. ಅವರು ನೋಡಿಕೊಂಡು ಬಂದಮೇಲೆ ಅದರಲ್ಲಿ ದೋಷವಿದೆ, ಅದನ್ನು ಬದಲಾವಣೆ ಮಾಡಬೇಕು ಎಂದು ಹೇಳಿದರೆ ನಾನು ಅದನ್ನು ಬೇಷರತ್ತಾಗಿ (ಅನ್‌ಕಂಡಿಷನಲ್ಲಾಗಿ) ಒಪ್ಪಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಮುಕ್ತಾಯ ಮಾಡುವುದಕ್ಕೆ ಮೊದಲು, ಕಳೆದ ಕೆಲವು ದಿವಸಗಳ ಹಿಂದೆ ಬೇರೆ ಬೇರೆ ಇಲಾಖೆಗಳ ವಿಚಾರದಲ್ಲಿ ಪ್ರಾದೇಶಿಕ ಪಕ್ಷಪಾತವನ್ನು ತೋರಿಸುತ್ತಿದ್ದಾರೆಂದು ಆರೋಪ ಮಾಡಿದ್ದರು. ಅದಕ್ಕೆ ಸಹ ಉತ್ತರ ಕೊಡುವುದಕ್ಕೆ ಸಿದ್ಧನಾಗಿ ಬಂದಿದ್ದೇನೆ. ಆದರೆ ಇವತ್ತು ನಡೆದ ಚರ್ಚೆಯಲ್ಲಿ ಅದರ ಅವಶ್ಯಕತೆ ತೋರಲಿಲ್ಲ. ಆದರೂ ಇಷ್ಟು ಮಾತ್ರ ಹೇಳಲು ಬಯಸುತ್ತೇನೆ. ಯಾವ ಭಯವನ್ನು, ಯಾವ ಶಂಕೆಯನ್ನು ಅವರು ವ್ಯಕ್ತಮಾಡಿದರೋ ಅದು ಸಂಪೂರ್ಣವಾಗಿ, ಬುಡ ತಲೆ ಏನೂ ಇಲ್ಲದೆ ಇರುವಂಥಾದ್ದು. ಪ್ರಾದೇಶಿಕ ಪಕ್ಷಪಾತತನ (ರೀಜನಲ್ ಪಾರ್ಷಿಯಾಲಿಟಿ) ಎಂದು ಏನು ಕೆಲವು ಸದಸ್ಯರು ಹಿಂದೆ ಸರ್ಕಾರದ ಮೇಲೆ ಆಪಾದನೆಗಳನ್ನು ಮಾಡಿದರೋ ಅವೆಲ್ಲ ನಿರಾಧಾರವಾದುವು ಎಂದು ಹೇಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಈ ದಿನ ಚರ್ಚೆಯಲ್ಲಿ ಭಾಗವಹಿಸಿದಂಥ ಸದಸ್ಯರಿಗೆ ಅವರು ಮಾಡಿದಂತಹ ಸೂಕ್ತವಾದ ಸಲಹೆಗಳ ಬಗ್ಗೆ ನನ್ನ ಕೃತಜ್ಞತೆಯನ್ನು ವ್ಯಕ್ತಮಾಡುತ್ತೇನೆ.

ಮುಕ್ತಾಯ ಆಗುವ ಮೊದಲು ನಾನು ಮಾನ್ಯ ಸದಸ್ಯರಲ್ಲಿ ನಿವೇದನೆ ಮಾಡಿಕೊಳ್ಳಬಯಸುವುದು ಯಾವುದೇ ಕಾರ್ಯಕ್ರಮ, ಅದರಲ್ಲಿಯೂ ಜನಗಳಿಗೆ ಸಂಬಂಧಪಟ್ಟ ಕಾರ್ಯಕ್ರಮ ಏನಿದೆ ಅದು ಜನಗಳ ಪ್ರತಿನಿಧಿಗಳ ಸಹಕಾರದಿಂದ ಮಾತ್ರ ಆಗತಕ್ಕದ್ದು. ಎಷ್ಟರಮಟ್ಟಿಗೆ ಒಂದು ಕೆಲಸ ಸರ್ಕಾರದಿಂದ ಆಗಬೇಕಾಗಿದೆಯೋ, ಅದಕ್ಕಿಂತ ಹೆಚ್ಚಾಗಿ ಜನಗಳ ಪ್ರತಿನಿಧಿಗಳಾಗಿರತಕ್ಕ ಮಾನ್ಯ ಸದಸ್ಯರು ಸಹಕಾರ ಕೊಡಬೇಕೆಂದು ಕೇಳಿಕೊಂಡು ನನಗೆ ಸಂಬಂಧಪಟ್ಟಂಥ ಈ ಬೇಡಿಕೆಗಳಿಗೆ ಸರ್ವಾನುಮತದಿಂದ ಈ ಮಾನ್ಯ ಸಭೆ ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—50 ಲಕ್ಷ ರೂಪಾಯಿ ವ್ಯವಹಾರ ನಡೆಯುತಕ್ಕ ವಿಚಾರದ ಬಗ್ಗೆ ತಮಗೆ ಮತ್ತು ಸಂಬಂಧಪಟ್ಟವರೆಲ್ಲರಿಗೂ ನಾಲ್ಕಾರು ಸಾರಿ ಹೇಳಿದ್ದೇನೆ. ಒಬ್ಬ ವ್ಯಕ್ತಿಯ ಕೈಗೆ ಲಕ್ಷಾಂತರ ರೂಪಾಯಿ ವ್ಯವಹಾರವನ್ನು ಕೊಟ್ಟಿದ್ದೀರಿ. ಕೇಂದ್ರ ಉಣ್ಣೆ ಕೈಗಾರಿಕಾ ಸೊಸೈಟಿಯ ವ್ಯವಹಾರದಲ್ಲಿ ನೀವೇನಾದರೂ ಕೈ ಹಾಕಿದ್ದೀರಾ, ಆ ವಿಚಾರದಲ್ಲಿ ಸರ್ಕಾರದ ಖಚಿತವಾದ ಅಭಿಪ್ರಾಯವೇನು ? ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ಅಥವಾ ನಮ್ಮವರು ಎಂದು ಏನಾದರೂ ವ್ಯವಹಾರ ಮಾಡಿಕೊಳ್ಳಲಿ ಎಂದು ಬಿಟ್ಟಿದ್ದೀರಾ ? ಇದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮವರು ಬೇರೆಯವರು ಎಂದು ಹೇಳುವಂಥ ಭೇದ ಭಾವವಿಲ್ಲದೆ, ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗದೆ ಅಲ್ಲಿ ದೋಷವಿದ್ದರೆ ಅವರನ್ನು ತೆಗೆದುಹಾಕಿ, ಅವರ ಮೇಲೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏನೂ ಸಂದೇಹವಿಲ್ಲ ಎಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ಗೋಪಾಲ ಸಾಲೆನ್ಸ (ಮೂಡಬಿದರೆ).—ಪ್ರತಿ ಜಿಲ್ಲೆಯಲ್ಲಿಯೂ ಕೂಡ ಕೈಗಾರಿಕಾ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವ ವಿಚಾರವನ್ನು ತಿಳಿಸಲಿಲ್ಲ; ಕೆಲವು ಕಡೆ ಕೈಗಾರಿಕಾ ಸಹಕಾರ ಸಂಘಗಳಿಗೆ ಕೊಡುವ ಹಣದಲ್ಲಿ ಅರ್ಧಭಾಗವನ್ನು ಮೊದಲನೆಯ ಕಂತಿನಲ್ಲಿ ಕೊಟ್ಟು ಉಳಿದ ಅರ್ಧವನ್ನು ಎಂದರೆ ಎರಡನೆಯ ಕಂತನ್ನು ಕೊಟ್ಟಿಲ್ಲ. ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗ ಸರ್ಕಾರದವರು ಕೈಗೊಂಡಿರುವ ಪಾಲಿಸಿ ತೀರ್ಮಾನದಂತೆ ಪ್ರತಿ ಜಿಲ್ಲೆಯಲ್ಲಿಯೂ ಒಂದು ಪ್ರತ್ಯೇಕವಾದ ಕೈಗಾರಿಕಾ ಸಹಕಾರ ಸಂಘ ಇರಬೇಕು, ಅದರ ಮುಖಾಂತರ ಕೈಗಾರಿಕೆಗಳಿಗೆ ಮತ್ತು ಇತರ ಕೈಗಾರಿಕಾ ಸಹಕಾರ ಸಂಘಗಳಿಗೆ ಹಣವನ್ನು ಒದಗಿಸಬೇಕು. ಈಗ ಯಾವ ತಾಲ್ಲೂಕಿನಲ್ಲಿ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ

ಗಳಿವೆ ಅವನ್ನು ತಾಲ್ಲೂಕು ಮಟ್ಟದಲ್ಲಿಯೇ ಇಡಬೇಕೇ ಅಥವಾ ಬ್ಯಾಂಕುಗಳಲ್ಲಿ ಮರ್ಜ ಮಾಡಬೇಕೇ ಎನ್ನುವುದು ಇನ್ನೂ ತೀರ್ಮಾನವಾಗಿಲ್ಲ ಆದಷ್ಟು ಬೇಗನೆ ತೆಗೆದುಕೊಳ್ಳುತ್ತೇವೆ.

Sri N. O. SAMAJI.—(Marathi)

ಶ್ರೀ ರಾಮಕೃಷ್ಣ ಹೆಗ್ಗಡೆ.—ತುರ್ತುಪರಿಸ್ಥಿತಿ ಮುಗಿಯುವವರೆಗೂ ನಾವು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಪ್ರಾಮುಖ್ಯತೆಯನ್ನು ಅಗ್ರಿಕಲ್ಚರ್ ಪ್ರೊಡಕ್ಷನ್‌ಗೆ ಕೊಡಬೇಕು ಎಂದು ಮಾಡಿದ್ದೇವೆ.

Sri M. Y. GHORPADE (Sandur).—Sir, while telling us about the Rural Water supply programme for the State, you said that the estimated cost of the complete programme was Rs. 25 crores. You also told us that this year you got clearance for Rs. 10 crores and that clearance for the balance 15 crores was expected shortly. You expect to comple this programme during the Third Five Year Plan. How do you reconcile these three different statements ?

Sri RAMAKRISHNA HEGDE.—What I said was that our aim is to provide at least one drinking water supply well to every village by the end of the Third Five Year Plan. But, the scheme which I referred to, *i.e.*, Rs. 25 crores scheme, is a comprehensive scheme in which it is also envisaged to supply not only adequate quantity of water, but also protected water supply.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಕೋ-ಆಪರೇಟಿವ್ ಫಾರ್ಮಿಂಗ್ ಸಂಬಂಧವಾಗಿ ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರುಗಳೆಂದು ಒಂದು ಡಿಸ್ಟ್ರಿಕ್ಟಿಗೆ ಒಬ್ಬರಿದ್ದಾರೆ, ಇದಕ್ಕೆ ಬದಲು ಈ ಕೆಲಸವನ್ನು ಕೋ-ಆಪರೇಟಿವ್ ಎಕ್ಸ್‌ಟೆನ್ಷನ್ ಆಫೀಸರುಗಳಿಗೆ ಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ರೈತರು ಮುಂದೆಬಂದರೂ ಈಗ ಒಂದು ಜಿಲ್ಲೆಗೆ ಒಬ್ಬರೇ ಇನ್‌ಸ್ಪೆಕ್ಟರಿರ ವುದರಿಂದ ಅವರು ಸಿಕ್ಕುವುದೇ ಕಷ್ಟವಾಗಿದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರ ಸೂಚನೆಯನ್ನು ಪರಿಶೀಲನೆ ಮಾಡುತ್ತೇವೆ.

Mr. SPEAKER.—I will now put the demands to the vote of the House. The question is:

> "That the respective sums not exceeding the amounts shown in the list of demands circulated to the members be granted to defray the charges which will come in course of payment during the financial year ending 31st day of March 1965 in respect of demands Nos 21, 23, 25 and 39."

The motion was adopted.

[As directed by the Hon'ble Speaker, the motions for demands for grants which were adopted by the House are reproduced below :

DEMAND NO. 21

Rural Development.

> "That a sum not exceeding Rs. 7,93,000 be granted to the Government to defray the charges which will come in course of payment during the financial year for the period ending 31st day of March 1965, in respect of 'Rural Development'."

DEMAND No. 23

Co-operation.

"That a sum not exceeding Rs. 90,70,500 be granted to the Government to defray the charges which will come in course of payment during the financial year for the period ending 31st day of March 1965, in respect of 'Co-operation'."

DEMAND No. 25

Community Development, etc.

"That a sum not exceeding Rs. 3,44,98,000 be granted to the Government to defray the charges which will come in course of payment during the financial year for the period ending 31st day of March 1965, in respect of 'Community Development Projects, National Extension Service and Local Development Works'."

DEMAND No. 39

Miscellaneous.

"That a sum not exceeding Rs. 3,57,04,700 be granted to the Government to defray the charges which will come in course of payment during the financial year for the period ending 31st day of March 1965, in respect of 'Miscellaneous'."]

Mr. SPEAKER.—The House will now rise to meet again to-morrow at 12 noon.

The House adjourned at Five Minutes Past Six of the Clock to meet again at Twelve of the Clock on Thursday, the 26th March 1964.